ಮಂಗಳವಾರ, ಆಗಸ್ಟ್ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 216 | ಪುಟ 14

prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವನ್ಯಜೀವಿಗಳಿಗೆ ರಕ್ಷಣೆ

ಭಾರತದಲ್ಲಿ ವನ್ಯಜೀವಿ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ. 2020ರಲ್ಲಿ 820 ಇದ್ದ ಪ್ರಕರಣಗಳ ಸಂಖ್ಯೆ 2024ರಲ್ಲಿ 354ಕ್ಕೆ ಇಳಿಕೆಯಾಗಿದೆ. 2020ರಿಂದ 2024ರ ಅವಧಿಯಲ್ಲಿ ಒಟ್ಟು 2,701 ಪ್ರಕರಣಗಳು ದಾಖಲಾಗಿದ್ದವು ಎಂದು ಕೇಂದ್ರ ಸರ್ಕಾರ ತಿಳಿಸಿದೆ.





ದಕ್ಷಣ್ ದಾಖಲೆ

ಕರ್ನಾಟಕದ ದಕ್ಷಣ್ ಎಸ್. ಅಹಮದಾಬಾದ್‌ನಲ್ಲಿ ನಡೆದ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಬಾಲಕರ ಗುಂಪು 1ರ 200 ಮೀ. ಫ್ರೀಸ್ಟೈಲ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು

ಸೆನ್ಸೆಕ್ಸ್ 81,018 | ನಿಫ್ಟಿ 24,722 | $/₹ 87.66 | ಚಿನ್ನ (Std. 10g) ₹1,04,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,18,500 (ಬೆಂಗಳೂರು)

ಎಡಗೈಗೆ ಶೇ 6, ಬಲಗೈಗೆ ಶೇ 5

ಒಳ ಮೀಸಲು: ನಿವೃತ್ತ ನ್ಯಾ. ಎಚ್.ಎನ್. ನಾಗಮೋಹನ್‌ದಾಸ್ ಆಯೋಗದಿಂದ ಸರ್ಕಾರಕ್ಕೆ ವರದಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 101 ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿ, ಲಭ್ಯ ಶೇಕಡಾ 17 ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಮಾನದಂಡಗಳ ಅನ್ವಯ ಹಂಚಿಕೆ ಮಾಡಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗ, ಆರು ಶಿಫಾರಸುಗಳನ್ನೂ ಮಾಡಿದೆ.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ರಚಿಸಿದ್ದ ನಾಗಮೋಹನ್ ದಾಸ್ ನೇತೃತ್ವದ ಆಯೋಗವು, ಸುಮಾರು 1,765 ಪುಟಗಳ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಸಲ್ಲಿಸಿತು. ಈ ವರದಿಯ ಪ್ರಮುಖ ಅಂಶಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಪರಿಶಿಷ್ಟ ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿರುವ ಆಯೋಗವು, ಗುಂಪು 1ರಲ್ಲಿ ಅತೀ ಹಿಂದುಳಿದ ಜಾತಿಗಳನ್ನು ಪಟ್ಟಿ ಮಾಡಿದೆ. ಈ ಗುಂಪಿನಲ್ಲಿರುವ ಜಾತಿಗಳ ಒಟ್ಟು ಜನಸಂಖ್ಯೆ ಸುಮಾರು 5 ಲಕ್ಷ. ಈ ಗುಂಪಿಗೆ ಶೇ 1ರಷ್ಟು ಮೀಸಲಾತಿ ಹಂಚಿಕೆ ಮಾಡಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ತೀರಾ ವಂಚಿತ ಜಾತಿಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಜಾತಿಗಳನ್ನು ಗುಂಪು 1ರಲ್ಲಿ ಸೇರಿಸಲಾಗಿದೆ.

'ಜಾತಿಗಳಲ್ಲಿರುವ 'ಸಾಮ್ಯತೆ'ಗಳನ್ನು ಗುರುತಿಸಿ ಗುಂಪುಗಳನ್ನು ಆಯೋಗವು ಮರು ವರ್ಗೀಕರಿಸಿದೆ. ಗುಂಪು-2ರಲ್ಲಿ ಎಡಗೈ ಜಾತಿಗಳಿದ್ದು ಅದಕ್ಕೆ ಶೇ 6, ಗುಂಪು 3ರಲ್ಲಿ ಬಲಗೈ ಜಾತಿಗಳಿದ್ದು ಅದಕ್ಕೆ ಶೇ 5, ಗುಂಪು 4ರಲ್ಲಿ ಬಂಜಾರ, ಬೋವಿ, ಕೊರಚ, ಕೊರಮ ಜಾತಿಗಳಿದ್ದು (ಅಸ್ಪೃಶ್ಯರಲ್ಲದವರು) ಈ ಗುಂಪಿಗೆ ಶೇಕಡಾ 4, ಗುಂಪು 5ರಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ನಮೂದಿಸಿದವರಿದ್ದು ಈ ಗುಂಪಿಗೆ ಶೇಕಡಾ 1ರಷ್ಟು ಮೀಸಲಾತಿಯನ್ನು ಆಯೋಗವು ಹಂಚಿಕೆ ಮಾಡಿದೆ' ಎಂದು ಉನ್ನತ ಮೂಲಗಳು ಖಚಿತಪಡಿಸಿವೆ.

▶10



ಆಯೋಗದ ಶಿಫಾರಸುಗಳೇನು

- ಪಟ್ಟಿಯಲ್ಲಿ ಗುರುತಿಸಿಕೊಳ್ಳದ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ಜಾತಿ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು
- ಆದಿ, ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಎಂದು ನಮೂದಿಸಿದವರಿಗೆ ಅದೇ ಹೆಸರಿನಲ್ಲಿ ಜಾತಿ ಪ್ರಮಾಣಪತ್ರ ನೀಡಬೇಕು
- ಉದ್ಯೋಗದಲ್ಲಿ ರೋಸ್ಟರ್ ಬಿಂದುಗಳನ್ನು 'ಗುಂಪು'ಗಳ ಆಧಾರದಲ್ಲಿ ಗುರುತಿಸಬೇಕು. ಅದೇ ಆಧಾರದಲ್ಲಿ ಮೀಸಲಾತಿ ನೀಡಬೇಕು
- ಆದಿ, ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಎಂದು ನಮೂದಿಸುವ ಜೊತೆಗೆ ಮೂಲ ಜಾತಿಯನ್ನೂ ಗುರುತಿಸಿದ್ದರೆ, ಅಂಥವರಿಗೆ ಅವರ ಮೂಲ ಜಾತಿಯ ಹೆಸರಿನಲ್ಲಿಯೇ ಜಾತಿ ಪ್ರಮಾಣಪತ್ರ ನೀಡಬೇಕು

ನಾಗಮೋಹನ್‌ದಾಸ್ ಆಯೋಗದ ವರ್ಗೀಕರಣ

ಗುಂಪು 1; ಅತೀ ಹಿಂದುಳಿದ ಜಾತಿಗಳು ಶೇ 1
ಗುಂಪು 2; ಎಡಗೈ ಜಾತಿಗಳು ಶೇ 6
ಗುಂಪು 3; ಬಲಗೈ ಜಾತಿಗಳು ಶೇ 5
ಗುಂಪು 4; ಬಂಜಾರ, ಬೋವಿ, ಕೊರಚ, ಕೊರಮ (ಅಸ್ಪೃಶ್ಯರಲ್ಲದ ಜಾತಿಗಳು) ಶೇ 4
ಗುಂಪು 5; ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಜಾತಿ ಶೇ 1



60 ದಿನ ಸಮೀಕ್ಷೆ ಮಾಡಿದ್ದೇವೆ. ಆಯೋಗ ನೀಡಿರುವ ವರದಿಯು ಇನ್ನು ಸರ್ಕಾರದ ಆಸ್ತಿ. ಇದನ್ನು ಒಪ್ಪುವುದು ಅಥವಾ ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯ

ಎಚ್.ಎನ್. ನಾಗಮೋಹನ್‌ದಾಸ್, ನ್ಯಾಯಮೂರ್ತಿ

ಆಯೋಗವು ವರದಿ ನೀಡಿದೆ. ಅದರಲ್ಲಿ ಏನಿದೆ ಎಂದು ಇನ್ನೂ ನೋಡಿಲ್ಲ. ಇದೇ 7ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ವರದಿಯನ್ನು ಮಂಡಿಸಿ ಚರ್ಚೆ ಮಾಡುತ್ತೇವೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

1.07 ಕೋಟಿ ಜನರು ಭಾಗಿ

ರಾಜ್ಯದಾದ್ಯಂತ ಮೇ 5ರಿಂದ ಜುಲೈ 6ರವರೆಗೆ ನಡೆದ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯ 27.24 ಲಕ್ಷ ಕುಟುಂಬಗಳ 1.07 ಕೋಟಿ ಜನರು ಭಾಗಿಯಾಗಿದ್ದಾರೆ. ಪರಿಶಿಷ್ಟ ಕುಟುಂಬಗಳ ಸಮೀಕ್ಷೆ ಮತ್ತು ಸರ್ಕಾರದ ವಿವಿಧ ಇಲಾಖೆ, ನಿಗಮ- ಮಂಡಳಿಗಳಿಂದ ಸಂಗ್ರಹಿಸಿದ ದತ್ತಾಂಶವನ್ನು ಆಯೋಗ ವಿಶ್ಲೇಷಿಸಿದೆ. ಅದರ ಆಧಾರದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳ ಜಾತಿಗಳನ್ನು ವರ್ಗೀಕರಿಸಿ ಮೀಸಲಾತಿಯನ್ನು ಆಯೋಗ ಹಂಚಿಕೆ ಮಾಡಿದೆ.

5 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯ 70 ಜಾತಿ

ಸಮೀಕ್ಷೆಯ ಸಂದರ್ಭದಲ್ಲಿ ಕೆಲವು ವಿಶೇಷ ಸಂಗತಿಗಳು ಬಹಿರಂಗವಾಗಿವೆ. ಈವರೆಗೂ ಸರ್ಕಾರದ ಯಾವುದೇ ಸೌಲಭ್ಯಗಳು ತಲುಪದ, ವಂಚಿತವಾದ ಜಾತಿಗಳನ್ನು ವರದಿಯಲ್ಲಿ ಆಯೋಗ ಪಟ್ಟಿ ಮಾಡಿದೆ. ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ 70 ಜಾತಿಗಳನ್ನು ಗುರುತಿಸಲಾಗಿದೆ. 1 ಲಕ್ಷ ಜನಸಂಖ್ಯೆ ಇರುವ ಏಳೆಂಟು ಜಾತಿಗಳನ್ನು ವರದಿಯಲ್ಲಿ ಪಟ್ಟಿ ಮಾಡಲಾಗಿದೆ ಎಂದೂ ಸರ್ಕಾರ ಮೂಲಗಳು ತಿಳಿಸಿವೆ.

ಸಿರಾಜ್ ಕಸುವು; ಭಾರತಕ್ಕೆ ಆರು ರನ್‌ಗಳ ಚಾರಿತ್ರಿಕ ಗೆಲುವು



ಭಾರತ ತಂಡದ ಗೆಲುವಿನ ಸಂಭ್ರಮ

ಓವಲ್‌ನಲ್ಲಿ ಸಂಭವಿಸಿದ ಅಸಂಭವ!

ಪ್ರಜಾವಾಣಿ ವಾರ್ತೆ

ಲಂಡನ್: ಓವಲ್ ಕ್ರೀಡಾಂಗಣದಲ್ಲಿ ಸೋಮವಾರ ಬೆಳಿಗ್ಗೆ ಕಿಕ್ಕಿರಿದು ಸೇರಿದ್ದ ಕ್ರಿಕೆಟ್‌ಪ್ರೇಮಿಗಳು ರೋಚಕತೆಯ ಕಡಲಲ್ಲಿ ಮಿಂದೆದ್ದರು. ಇಂಗ್ಲೆಂಡ್‌ನ ಕೆಳಕ್ರಮಾಂಕದ ಬ್ಯಾಟರ್‌ಗಳು ಮತ್ತು ಭಾರತದ ವೇಗಿಗಳ ನಡುವಿನ ತುರುಸಿನ ಹಣಾಹಣಿಯು ಮುಂಜಾನೆಯ ತಂಪುಗಾಳಿಗೂ ಬಿಸಿಯೇರಿಸಿತು.

ಈ ಜಿದ್ದಾಜಿದ್ದಿಯಲ್ಲಿ 'ಹೈದರಾಬಾದ್ ಎಕ್ಸ್‌ಪ್ರೆಸ್' ಮೊಹಮ್ಮದ್ ಸಿರಾಜ್ ಅವರ ಸ್ವಿಂಗ್ ದಾಳಿ ಮೇಲುಗೈ ಸಾಧಿಸಿತು. ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ 6 ರನ್‌ಗಳಿಂದ ಸೋತಿತು. ಇದರಿಂದಾಗಿ ಭಾರತ ತಂಡವು ಐದು ಪಂದ್ಯಗಳ ಸರಣಿಯಲ್ಲಿ 2-2ರ ಸಮಬಲ ಸಾಧಿಸಿತು.

374 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ ತಂಡವು ನಾಲ್ಕನೇ ದಿನವಾದ ಭಾನುವಾರ ಗೆಲುವಿನ ಹೊಸ್ತಿಲಿಗೆ (6ಕ್ಕೆ339) ಬಂದು ನಿಲ್ಲಲು ಹ್ಯಾರಿ ಬ್ರೂಕ್ ಮತ್ತು ಜೋ ರೂಟ್ ಅವರ ಶತಕಗಳು ಕಾರಣವಾಗಿದ್ದವು. 19 ರನ್ ಗಳಿಸಿದ್ದ ಬ್ರೂಕ್ ಅವರ ಕ್ಯಾಚ್ ಪಡೆಯುವಲ್ಲಿ ಫೀಲ್ಡರ್ ಸಿರಾಜ್ ತೋರಿದ್ದ ಪ್ರಮಾದವೂ ಇಂಗ್ಲೆಂಡ್‌ಗೆ ಅನುಕೂಲವಾಗಿತ್ತು. ಮಳೆಯಿಂದಾಗಿ ಆಟ ಸ್ಥಗಿತವಾಗಿತ್ತು. ಅದರಿಂದಾಗಿ ಕೊನೆಯ ದಿನದಾಟದಲ್ಲಿ ತಂಡಕ್ಕೆ ಗೆಲ್ಲಲು 35 ರನ್‌ಗಳ ಅಗತ್ಯ ಮಾತ್ರ ಇತ್ತು. ಅದೇ ಭಾರತಕ್ಕೆ ಇಂಗ್ಲೆಂಡ್‌ನ ನಾಲ್ಕು ವಿಕೆಟ್‌ಗಳನ್ನು ಗಳಿಸಬೇಕಿತ್ತು. ಸಿರಾಜ್ ತಮ್ಮ ತಪ್ಪನ್ನು ತಿದ್ದಿಕೊಂಡರು. ಮೂರು ವಿಕೆಟ್‌ಗಳನ್ನು ಕಿತ್ತರು. ಇನ್ನೊಂದು ವಿಕೆಟ್ ಪ್ರಸಿದ್ಧಕೃಷ್ಣ ಪಾಲಾಯಿತು.




6 ಟೆಸ್ಟ್ ಪಂದ್ಯವೊಂದರಲ್ಲಿ ಭಾರತ ತಂಡ ದಾಖಲಿಸಿದ ಅತಿ ಕಡಿಮೆ ರನ್ ಅಂತರದ ಗೆಲುವು ಇದಾಗಿದೆ

ಪಂದ್ಯದ ಆಟಗಾರ ಮೊಹಮ್ಮದ್ ಸಿರಾಜ್ (190ಕ್ಕೆ 9)

ಇನ್ನಷ್ಟು ಸುದ್ದಿಗಳು ▶7 ▶12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಾರಿಗೆ ಬಸ್ ಮುಷ್ಕರ ಅನಿಶ್ಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಸಂಘಟನೆಗಳ ಜತೆ ಮುಖ್ಯಮಂತ್ರಿ ನಡೆಸಿದ ಮನವೊಲಿಕೆ ಪ್ರಯತ್ನ ವಿಫಲ, ಒಂದು ದಿನದ ಮಟ್ಟಿಗೆ ಮುಷ್ಕರಕ್ಕೆ ತಡೆ ನೀಡಿ ಹೈಕೋರ್ಟ್ ಆದೇಶ, ಇದರ ಮಧ್ಯೆಯೇ ನೌಕರರ ಸಂಘಟನೆಗಳ ಅಸ್ಪಷ್ಟ ನಿಲುವು ಮುಂದುವರಿದಿದೆ. ಹೀಗಾಗಿ, ಸರ್ಕಾರಿ ಬಸ್ಸು ಮಂಗಳವಾರ (ಆ.5) ರಸ್ತೆಗಿಳಿಯಲಿವೆಯೇ ಎಂಬ ಗೊಂದಲಕ್ಕೆ ಸೋಮವಾರ ತಡ ರಾತ್ರಿಯವರೆಗೂ ತೆರೆ ಬಿದ್ದಿರಲಿಲ್ಲ.

ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿದ ಸಂಧಾನ ಫಲ ಕೊಡಲಿಲ್ಲ. ಬಸ್ ಮುಷ್ಕರ ನಡೆಯಲಿದೆ ಎಂದು ಕ್ರಿಯಾ ಸಮಿತಿ ಘೋಷಿಸಿದೆ.

'ಹೈಕೋರ್ಟ್‌ನ ಆದೇಶ ನಮ್ಮ ಕೈಸೇರಿಲ್ಲ. ಮುಷ್ಕರ ನಡೆದೇ ನಡೆಯುತ್ತದೆ' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ಸೋಮವಾರ ರಾತ್ರಿವರೆಗೂ ಹೇಳುತ್ತಾ ಬಂದಿದ್ದರು. ಹೈಕೋರ್ಟ್‌ನ ಆದೇಶದ ಪ್ರತಿ ಅವರ ಕೈ ಸೇರಿದ ಬಳಿಕವೂ ನಿರ್ಧಾರವನ್ನು ತಕ್ಷಣಕ್ಕೆ ಬದಲಾಯಿಸಲು ಸಾರಿಗೆ ನೌಕರರ ಸಂಘಟನೆಗಳು ಒಪ್ಪಿಲ್ಲ.

▶9

'ವೇತನ ಬಾಕಿಯನ್ನೂ ಉಳಿಸಿದ್ದ ಬಿಜೆಪಿ'



ಸಿದ್ದರಾಮಯ್ಯ

ಬೆಂಗಳೂರು: ಶ್ರೀನಿವಾಸಮೂರ್ತಿ ನೇತೃತ್ವದ ಸಮಿತಿಯ ಶಿಫಾರಸು ಆಧಾರದಲ್ಲಿ ಹಿಂದಿನ ಬಿಜೆಪಿ ಸರ್ಕಾರ 2023ರ ಮಾರ್ಚ್ 1ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಅಧಿಸೂಚನೆ ಹೊರಡಿಸಿದ್ದರೂ, ಹೆಚ್ಚುವರಿ ವೇತನ ಬಾಕಿ ಪಾವತಿಸಿರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ವಿಧಾನಸೌಧದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ವಿವಿಧ ನಿಗಮಗಳ ನೌಕರರ ಸಂಘಟನೆಗಳ ಜತೆ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, '2016ರಲ್ಲಿ ನಾನೇ ಮುಖ್ಯಮಂತ್ರಿಯಾಗಿದ್ದಾಗ ವೇತನ ಪರಿಷ್ಕರಣೆ ಮಾಡಿದ್ದೆ. ಆಗ ಶೇ 12.5 ಹೆಚ್ಚಳ ಮಾಡಲಾಗಿತ್ತು. 2020ರಲ್ಲಿ ಕೋವಿಡ್ ಕಾರಣಕ್ಕೆ ಅಂದಿನ ಸರ್ಕಾರ ವೇತನ ಪರಿಷ್ಕರಣೆ ಮಾಡಲಿಲ್ಲ ಎಂದರು.

▶9

ಬಿಬಿಎಂಪಿ ಚುನಾವಣೆ: ರಾಜ್ಯಕ್ಕೆ ಸುಪ್ರೀಂ ಕೋರ್ಟ್ ತಾಕೀತು

'ವಾರದಲ್ಲಿ ನಿಯಮ ರೂಪಿಸಿ'

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ನವದೆಹಲಿ: 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ'ಯಡಿ ಐದು ಪಾಲಿಕೆಗಳಿಗೆ ಚುನಾವಣೆ ನಡೆಸಲು ನಿಯಮಗಳನ್ನು ವಾರದೊಳಗೆ ಜಾರಿಗೆ ತರುವಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಪಾಲಿಕೆಗೆ ಕೂಡಲೇ ಚುನಾವಣೆ ನಡೆಸಬೇಕೆಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಜೊಯ್‌ಮಲ್ಯ ಬಾಗ್ಚಿ ಪೀಠವು, ರಾಜ್ಯ ಸರ್ಕಾರವು ತನ್ನ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವಂತೆ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಾಕೀತು ಮಾಡಿತು. ನವೆಂಬರ್ 1ರೊಳಗೆ ವಾರ್ಡ್ ವಿಂಗಡಣೆ ಮತ್ತು ಅಧಿಸೂಚನೆ ಹೊರಡಿಸುವ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ನಿರ್ದೇಶಿಸಿತು.

ನ್ಯಾಯಾಲಯವು ಈ ವಿಷಯವನ್ನು ನವೆಂಬರ್ 3ರಂದು ಮುಂದಿನ ವಿಚಾರಣೆಗೆ ನಿಗದಿಪಡಿಸಿತು.

ಕರ್ನಾಟಕ ಸರ್ಕಾರದ ಪರವಾಗಿ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ ಪಾಟೀಲ, ವಕೀಲ ಡಿ.ಎಲ್.ಚಿದಾನಂದ್ ಹಾಜರಾಗಿದ್ದರು. ಹಿರಿಯ ವಕೀಲರಾದ ಮುಕುಲ್ ರೋಹಟಗಿ ಮತ್ತು ಸಿದ್ಧಾರ್ಥ್ ದವೆ ಅವರು ಅರ್ಜಿದಾರರನ್ನು ಪ್ರತಿನಿಧಿಸಿದ್ದರು.

▶4A

ರಾಹುಲ್ ಗಾಂಧಿಗೆ 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): 'ಭಾರತ್ ಜೋಡೊ ಯಾತ್ರೆ'ಯ ಸಂದರ್ಭದಲ್ಲಿ ಸೇನೆ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪ ಎದುರಿಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸೋಮವಾರ ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್,'ನೀವು ನೈಜ ಭಾರತೀಯ ಆಗಿದ್ದರೆ, ಅಂತಹ ಮಾತು ಆಡುತ್ತಿರಲಿಲ್ಲ' ಎಂದಿದೆ.

ಆದರೂ, ರಾಹುಲ್ ವಿರುದ್ಧ ಲಖನೌ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರ ಪೀಠವು ಉತ್ತರ ಪ್ರದೇಶ ಸರ್ಕಾರ ಮತ್ತು ಪ್ರಕರಣದ ದೂರುದಾರರಿಗೆ ನೋಟಿಸ್ ಜಾರಿ ಮಾಡಿತು.



ರಾಹುಲ್ ಗಾಂಧಿ

'ನೀವು ವಿಪಕ್ಷ ನಾಯಕ. ಈ ವಿಷಯವನ್ನು ಸಂಸತ್ತಿನಲ್ಲಿ ಏಕೆ ಮಾತನಾಡ ಬಾರದು, ನೀವು ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಏಕೆ ಹೇಳಬೇಕು' ಎಂದು ಪೀಠ ಪ್ರಶ್ನಿಸಿತು.

ರಾಹುಲ್ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ವಿರೋಧ ಪಕ್ಷದ ನಾಯಕ ಇಂತಹ ವಿಷಯಗಳ ಬಗ್ಗೆ ಮಾತನಾಡ ಬಾರದು ಎಂದಾದರೆ, ಅದು ದುರದೃಷ್ಟಕರ ಸಂಗತಿ' ಎಂದು ವಾದಿಸಿದರು. 'ಮಾಧ್ಯಮಗಳಲ್ಲಿ ಪ್ರಕಟವಾದ ಈ ವಿಷಯಗಳನ್ನು ಹೇಳಬಾರದು ಎಂದಾದರೆ, ಅವರು ವಿರೋಧ ಪಕ್ಷದ ನಾಯಕರಾಗಿರಲು ಸಾಧ್ಯವಿಲ್ಲ' ಎಂದರು.

ಪೀಠದ 'ನೈಜ ಭಾರತೀಯ' ಟೀಕೆಗೆ ಪ್ರತಿಕ್ರಿಯಿಸಿದ ಸಿಂಘ್ವಿ, 'ಭಾರತದ 20 ಸೈನಿಕರನ್ನು ಥಳಿಸಿ ಕೊಲ್ಲಲಾಯಿತು ಎಂದು ನಿಜವಾದ ಭಾರತೀಯರು ಹೇಳುವ ಸಾಧ್ಯತೆಯಿದೆ. ಇದು ಕೂಡ ಕಳವಳಕಾರಿ ವಿಷಯ' ಎಂದರು.

▶11



2020ರ ಗಾಲ್ವನ್ ಘಟನೆಯ ನಂತರ ಚೀನಾ ಜತೆಗಿನ ಸಂಘರ್ಷದ ಬಗ್ಗೆ ಪ್ರತಿಯೊಬ್ಬ ಭಾರತೀಯನೂ ಉತ್ತರ ಬಯಸುತ್ತಿದ್ದಾನೆ. ಆದರೆ ಮೋದಿ ಸರ್ಕಾರ ಸತ್ಯ ಮರೆಮಾಚಿದೆ

ಜೈರಾಮ್ ರಮೇಶ್, ಕಾಂಗ್ರೆಸ್ ಮುಖಂಡ



ರಾಷ್ಟ್ರೀಯ ಭದ್ರತೆ ಮತ್ತು ಪ್ರಾದೇಶಿಕ ಸಮಗ್ರತೆ ಬಗ್ಗೆ ಬೇಜವಾಬ್ದಾರಿ ಹೇಳಿಕೆ ನೀಡಿದ್ದಕ್ಕಾಗಿ ಸುಪ್ರೀಂ ಕೋರ್ಟ್ ಮತ್ತೊಮ್ಮೆ 'ಚೀನಾ ಗುರು' ರಾಹುಲ್ ಗಾಂಧಿ ಅವರಿಗೆ ಛೀಮಾರಿ ಹಾಕಿದೆ

ಅಮಿತ್ ಮಾಳವೀಯ

ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ

ಪೀಠ ಹೇಳಿದ್ದು...



- ಭಾರತದ 2,000 ಚದರ ಕಿ.ಮೀ. ಪ್ರದೇಶವನ್ನು ಚೀನಾ ಆಕ್ರಮಿಸಿಕೊಂಡಿದೆ ಎಂಬುದು ನಿಮಗೆ ಹೇಗೆ ತಿಳಿಯಿತು? ಆಗ ನೀವು ಆ ಸ್ಥಳದಲ್ಲಿ ಇದ್ದೀರಾ? ನಿಮ್ಮ ಬಳಿ ಯಾವುದಾದರೂ ನಂಬಲರ್ಹ ಸಾಕ್ಷ್ಯ ಇದೆಯೇ?
- ಯಾವುದೇ ಸಾಕ್ಷ್ಯ ಇಲ್ಲದಿದ್ದರೆ ನೀವು ಈ ಹೇಳಿಕೆಗಳನ್ನು ಏಕೆ ನೀಡುತ್ತೀರಿ? ನೀವು ನೈಜ ಭಾರತೀಯರಾಗಿದ್ದರೆ, ಅಂತಹ ಮಾತು ಆಡುತ್ತಿರಲಿಲ್ಲ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಭಾರಿ ಮಳೆಯಾಗುವ ಸಾಧ್ಯತೆಯಿದೆ

ಮರಣಪತ್ರ ವಶಪಡಿಸಿಕೊಂಡ ಪೊಲೀಸರು: ತನಿಖೆ ಆರಂಭ

ಏಳನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರಣಪತ್ರ ಬರೆದಿಟ್ಟು ಏಳನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಸಿ.ಕೆ. ಅಚ್ಚುಕಟ್ಟು ಪೊಲೀಸ್ ಠಾಣಾ ವ್ಯಾಪ್ತಿಯ ಬನಶಂಕರಿ ಮೂರನೇ ಹಂತದ ಬನಗಿರಿ ನಗರದಲ್ಲಿ ನಡೆದಿದೆ.

ಗಂಧಾರ್ ಜಿ. ಪ್ರಸಾದ್ (14) ಮೃತ ಬಾಲಕ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಸೋಮವಾರ ಬೆಳಿಗ್ಗೆ ಬಾಲಕನ ಕೊಠಡಿಗೆ ಹೋಗಿ ನೋಡಿದಾಗ ಘಟನೆ ಗೊತ್ತಾಗಿದೆ. ಸ್ಥಳದಲ್ಲಿ ದೊರೆತ ಮರಣಪತ್ರ ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮೃತ ವಿದ್ಯಾರ್ಥಿಯ ತಂದೆ ಗಣೇಶ್ ಪ್ರಸಾದ್ ಸಂಗೀತ ಕಲಾವಿದ, ತಾಯಿ ಸವಿತಾ ಜನಪದ ಗಾಯಕಿ. ಇವರ ಮತ್ತೊಬ್ಬ ಮಗ 21 ವರ್ಷದ ಜಿ.ಬಸಂತ್ ಬಸವೇಶ್ವರ ನಗರದ ಸ್ಟೀಫನ್ ಸ್ಕೂಲ್ ಫಿಲ್ಮ್ ಮ್ಯೂಸಿಕ್ ಕಾಲೇಜಿನಲ್ಲಿ ಬಿ.ಬಿ.ಎ.ಎ ಓದುತ್ತಿದ್ದಾರೆ. ಮಂಗಳೂರಿನ ಕದ್ರಿ ಮೂಲದ ಕುಟುಂಬವು ಬನಗಿರಿ ನಗರದಲ್ಲಿ ನೆಲೆಸಿದೆ.

'ರಾತ್ರಿ ಎಂದಿನಂತೆ ಊಟ ಮಾಡಿ ಮಗ ಮಲಗಿದ್ದ. ಬೆಳಿಗ್ಗೆ ಎಷ್ಟು ಹೊತ್ತಾದರೂ ರೂಮ್‌ನಿಂದ ಹೊರಗೆ ಬಂದಿರಲಿಲ್ಲ. ಶಾಲೆಗೆ ಕಳುಹಿಸುವ ಸಲುವಾಗಿ ಆತನನ್ನು ಎಬ್ಬಿಸಲು ಬಸಂತ್ ಹೋಗಿ ನೋಡಿದಾಗ, ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಯಾವುದೋ ವಿಚಾರಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರಬಹುದು. ಮಗನ ಸಾವಿನ ಬಗ್ಗೆ ಯಾವುದೇ ಅನುಮಾನವಿಲ್ಲ' ಎಂದು ತಂದೆ ದೂರಿನಲ್ಲಿ ತಿಳಿಸಿದ್ದಾರೆ.

'ಕೊಠಡಿಯಲ್ಲಿ ದೊರೆತ ಮರಣಪತ್ರವನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ತಾಯಿ ಕಳೆದ ಶುಕ್ರವಾರ ಕಾರ್ಯಕ್ರಮಕ್ಕೆಂದು ಆಸ್ಟ್ರೇಲಿಯಾಗೆ ತೆರಳಿದ್ದು, ವಿಷಯ ತಿಳಿಸಲಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಮರಣಪತ್ರದಲ್ಲಿ ಏನಿದೆ?

'ಪ್ರೀತಿಯ ಕುಟುಂಬದ ಸದಸ್ಯರೇ...ನನ್ನನ್ನು ಕ್ಷಮಿಸಿ. ಈ ಪತ್ರವನ್ನು ಓದಿದವರು ದುಃಖಿಸಬೇಡಿ. ಈಗಾಗಲೇ ನಾನು ಸ್ವರ್ಗದಲ್ಲಿದ್ದೇನೆ. ನನ್ನನ್ನು ತಪ್ಪಾಗಿಯೂ ಅರ್ಥೈಸಿಕೊಳ್ಳಬೇಡಿ. ನಿಮಗೆ ನೋವಾಗುತ್ತದೆ ಅನ್ನುವುದು ತಿಳಿದಿದೆ. ಈ ಮನೆ ಚೆನ್ನಾಗಿರಬೇಕೆಂದು ಹೊರಗೆ ತೆರಳುತ್ತಿದ್ದೇನೆ' ಎಂದು ಕೊಠಡಿಯಲ್ಲಿ ಬಿಡಿಸಿಟ್ಟ ಮರಣಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಕೋಪ ಬರುವಂತೆ ನಡೆದುಕೊಂಡಿದ್ದೇನೆ. ನಿಮಗೆ ತೊಂದರೆ ಸಹ ನೀಡಿದ್ದೇನೆ. ಆದರೆ, ನನ್ನ ಉದ್ದೇಶ ನಿಮ್ಮನ್ನು ನೋಯಿಸುವುದು ಆಗಿರಲಿಲ್ಲ' ಎಂದು ವಿವರಿಸಲಾಗಿದೆ.

'ಕೋಪದಿಂದ ಕ್ಷಮೆ ಕೇಳುತ್ತೇನೆ. ತಪ್ಪುಗಳನ್ನು ದಯವಿಟ್ಟು ಕ್ಷಮಿಸಿ. 14 ವರ್ಷ ಬದುಕಿದ್ದು, ಅದರಲ್ಲೇ ತೃಪ್ತನಾಗಿದ್ದೇನೆ. ಸಂತೋಷದಿಂದ ಕಳೆದಿದ್ದೇನೆ. ಅದೇ ಸಾಕು. ಸ್ವರ್ಗದಲ್ಲಿ ನಾನು ಖುಷಿಯಾಗಿರುತ್ತೇನೆ. ನನ್ನ ಸ್ನೇಹಿತರನ್ನು ಪ್ರೀತಿಸುತ್ತಿದ್ದೆ ಎಂದು ಅವರಿಗೂ ತಿಳಿಸಿ. ಶಾಲಾ ಸ್ನೇಹಿತರಿಗೂ ಈ ಮಾತನ್ನು ಹೇಳಿ. ಐ ಮಿಸ್ ಯೂ ಆಲ್ – ಗುಡ್‌ಬೈ ಅಮ್ಮ' ಎಂದು ಮರಣಪತ್ರದಲ್ಲಿ ಬರೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆಸಮ್ ಎಸ್ಥೆಟಿಕ್ ಕ್ಲಿನಿಕ್ ಆರಂಭ

ಬೆಂಗಳೂರು: ನಗರದಲ್ಲಿ 'ಆಸಮ್ ಎಸ್ಥೆಟಿಕ್ ಕ್ಲಿನಿಕ್' ಆರಂಭವಾಗಿದ್ದು, ಇದರ ಉದ್ಘಾಟನೆಯು ಇತ್ತೀಚೆಗೆ ನಡೆಯಿತು. ಈ ಕೇಂದ್ರದಲ್ಲಿ ಅನೇಕ ಆರೋಗ್ಯ ಸೇವೆಗಳು ಲಭ್ಯವಿವೆ.

ಬೋಳು ತಲೆ, ಕೂದಲು ಉದುರುವ ಸಮಸ್ಯೆ, ಕೂದಲು ಕಸಿ, ಹಲ್ಲುಗಳ ಆರೋಗ್ಯ ಮತ್ತು ಸುಕ್ಕಾದ ಚರ್ಮವನ್ನು ಕಾಂತಿಯುಕ್ತಗೊಳಿಸುವ ಸೇವೆಗಳು ಇಲ್ಲಿ ಲಭ್ಯವಿರಲಿವೆ ಎಂದು ಪ್ರಕಟಣೆ ತಿಳಿಸಿದೆ. ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ತಜ್ಞ ವೈದ್ಯರಿಂದ ಚಿಕಿತ್ಸೆ ಸಿಗಲಿದೆ ಎಂದು ಅದು ಹೇಳಿದೆ.

ಕೂದಲು ಕಸಿ, ಲೇಸರ್ ಹೇರ್ ರಿಮೂವಲ್, ಕೂದಲು ಉದುರುವ ಸಮಸ್ಯೆ, ತಲೆಯಲ್ಲಿ ಹೊಟ್ಟು, ಮೊಡವೆ, ಮುಖದಲ್ಲಿ ಕಲೆ, ಕಟೆದಿಟ್ಟಿದ ಹಲ್ಲು ಬಿಳಿಯಾಗಿಸಲು ಚಿಕಿತ್ಸೆ, ಹಾನಿಯಾದ ಹಲ್ಲು ಸರಿಪಡಿಸುವ, ಮುಖದ ರೂಪಕ್ಕೆ ಅನುರೂಪವಾಗಿ ಹಲ್ಲುಗಳನ್ನು ಜೋಡಿಸುವ ಸೌಲಭ್ಯವೂ ಇದೆ.



ನಗರದಲ್ಲಿ ಇತ್ತೀಚೆಗೆ ನಡೆದ 'ಆಸಮ್ ಎಸ್ಥೆಟಿಕ್ ಕ್ಲಿನಿಕ್' ಉದ್ಘಾಟನಾ ಕಾರ್ಯಕ್ರಮದಲ್ಲಿ 'ಅಮೃತ್ ನೋನಿ' ಓಂ ಶ್ರೀ ಮಾರ್ಕೆಟಿಂಗ್ ಸಲ್ಯೂಷನ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿಯ ಸಿಇಒ ನಾರಾಯಣ್, ನಟಿ ಅದಿತಿ ಪ್ರಭುದೇವ, ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮಂಗಳಾಂಬಿಕೆ ಭಾಗವಹಿಸಿದ್ದರು.

'ಅಮ್ಯೂಸ್‌ಮೆಂಟ್ ಪಾರ್ಕ್ ಕೈಬಿಡಿ'



ಬೆಂಗಳೂರು: 'ಕೆಆರ್‌ಎಸ್ ಜಲಾಶಯದ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಯೋಜನೆಯನ್ನು ಪರಿಸರ ರಕ್ಷಣೆಯ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ ಕೈಬಿಡಬೇಕು' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಮನವಿ ಮಾಡಿದ್ದಾರೆ.

'ಕೆಆರ್‌ಎಸ್ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸುವ ಸರ್ಕಾರದ ನಡೆ ತೀರಾ ಆಕ್ಷೇಪಣೀಯ. ಸಾರ್ವಜನಿಕ ವಲಯದಲ್ಲಿ ಇದಕ್ಕೆ ಸಾಕಷ್ಟು ವಿರೋಧವಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್. ಎಂ.ವಿ. ವಿಶ್ವೇಶ್ವರಯ್ಯನವರು ಕೆಆರ್‌ಎಸ್ ಜಲಾಶಯ ನಿರ್ಮಾಣ ಹಾಗೂ ಕನ್ನಂಬಾಡಿಯ ಸುತ್ತಮುತ್ತಲಿನ ಪರಿಸರವನ್ನು ಉಳಿಸಿಕೊಂಡು ಬಂದಿದ್ದರು. ಕೆಆರ್‌ಎಸ್ ಭೇಟಿ ನೀಡುವವರು ಪ್ಲಾಸ್ಟಿಕ್ ಕಸಗಳನ್ನು ಹಾಕುವುದರಿಂದ ಪರಿಸರ ನಾಶವಾಗಲಿದೆ. ವಿಶ್ವೇಶ್ವರಯ್ಯನವರು ಇದ್ದಿದ್ದರೆ ಈ ಯೋಜನೆಗೆ ಒಪ್ಪುತ್ತಿರಲಿಲ್ಲ ಎನ್ನುವುದು ನನ್ನ ವಿಶ್ವಾಸ. ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಯ ಪ್ರಸ್ತಾವನೆ ಇಲಾಖೆಗೆ ಸಂಬಂಧಿಸಿದ ವಿಷಯವೂ ಆಗಿದೆ' ಎಂದು ಪತ್ರದಲ್ಲಿ ಅವರು ಹೇಳಿದ್ದಾರೆ.

ನಗರದಲ್ಲಿ ಇಂದು

ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರೊಂದಿಗೆ ಸಂವಾದ, ಉಪನ್ಯಾಸ, ಅಭಿನಂದನೆ: ಬೆಳಿಗ್ಗೆ 10ಕ್ಕೆ 'ಬಾನು ಅವರ ಕಥಾ ಲೋಕದಲ್ಲಿ ಒಂದು ಸುತ್ತು' ಉಪನ್ಯಾಸ: ವಿನಯಾ ಒಕ್ಕುಂದ, ಉಪಸ್ಥಿತಿ: ಸುಮಾ ಸತೀಶ್, ರವಿಕುಮಾರ್ ಬಾಗಿ, ಪ್ರಕಾಶ್ ರಾಜ್ ಮೇಹು, ಭಾರತಿ ಹೆಗಡೆ, ಬಾನು ಮುಷ್ತಾಕ್ ಅವರೊಂದಿಗೆ ಸಂವಾದ: ನಡೆಸಿಕೊಡುವವರು: ಜಿ.ಎನ್. ಮೋಹನ್, ಭಾಗವಹಿಸುವವರು: ಎಂ.ಎಸ್. ಆಶಾದೇವಿ, ಸುಬ್ಬು ಹೊಲೆಯಾರ್, ಕೆ.ವೈ. ನಾರಾಯಣಸ್ವಾಮಿ, ಡೊಮಿನಿಕ್ ಡಿ., ಶಾಕಿರಾ ಖಾನಂ, ನಜ್ಮಾ ಚಿಕ್ಕನೇರಳೆ, ಮಧ್ಯಾಹ್ನ 1ಕ್ಕೆ ಅಭಿನಂದನಾ ಸಮಾರಂಭ: ಅಭಿನಂದಿತರು: ಬಾನು ಮುಷ್ತಾಕ್, ಅಭಿನಂದನಾ ನುಡಿ: ಸಿ.ಎಚ್. ಹನುಮಂತರಾಯ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿಗಳು: ಕೆ.ಎಂ. ಗಾಯಿತ್ರಿ, ಡಾ. ವಸುಂಧರಾ ಭೂಪತಿ, ಉಪಸ್ಥಿತಿ: ಸುಜಾತಾ ಎಚ್.ಆರ್., ಅಕ್ಕೈ ಪದ್ಮಶಾಲಿ, ಎಚ್.ಎಲ್. ಪುಷ್ಪ, ಕರಿಯಪ್ಪ ಎನ್., ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ,

ವಚನ ಶ್ರಾವಣ–2025: ವಚನ ಗಾಯನ: ಇಂದಿರಾ ಶಾಂತಕುಮಾರ್, ವಚನ ಚಿಂತನ: ಎಸ್. ವಿಶಾಲಾಕ್ಷಿ, ಅತಿಥಿ: ಪ್ರಭು ಶಿವಬಸವಶೆಟ್ಟಿ, ಅಧ್ಯಕ್ಷತೆ: ವಿ.ಜಿ. ಶೈಲಜಾ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಶೇಷಾದ್ರಿಪುರಂ ಪ್ರಾಥಮಿಕ ಮತ್ತು ಪ್ರೌಢಶಾಲೆ, ಯಲಹಂಕ ನ್ಯೂಟೌನ್, ಬೆಳಿಗ್ಗೆ 10

ಪೌರಾಣಿಕ ರಂಗೋತ್ಸವ: ಉದ್ಘಾಟನೆ: ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಕೆ.ಎ. ದಯಾನಂದ, ಅತಿಥಿ: ಚಿನ್ನಪ್ಪ ಕಟ್ಟಿ, ಪದ ಗೌರವ: ಬಾನು ಮುಷ್ತಾಕ್, ಹಾಸನ ರಘು, 'ಸಂಚಿಗೆಕ್ಕ' ನಾಟಕ ಪ್ರದರ್ಶನ: ನಿರ್ದೇಶನ: ಎಸ್.ಎಲ್. ಎನ್. ಸ್ವಾಮಿ, ಆಯೋಜನೆ: ಪದ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ

ಹರಿನಾಮ ಸ್ಮರಣೆ: ಗಾಯನ: ವೈಷ್ಣವಿ ಕೊಪ್ಪ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಮಧುಸೂದನ್ ಕೊಪ್ಪ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರ ನಗರ, ಸಂಜೆ 6.30

ಚಾವಣಿಯಷ್ಟೇ ಅಲ್ಲ, ನೆಲದ ಮೇಲೂ ‘ಸೌರಶಕ್ತಿ’

ಚಾವಣಿ ಕೊರತೆಯಿದ್ದವರಿಗೆ ಅನುಕೂಲ • ವಿದ್ಯುತ್ ಮೇಲಿನ ಹೊರೆ ತಗ್ಗಿಸುವ ದಾರಿ • ಬಳಸಿ ಉಳಿದರೆ ಗ್ರಿಡ್‌ಗೆ ಮಾರಾಟ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಅಪಾರ್ಟ್‌ಮೆಂಟ್‌ನಲ್ಲಿರುವ ಫ್ಲಾಟ್‌ಗೆ ಸೌರವಿದ್ಯುತ್ ಅಳವಡಿಸಿಕೊಳ್ಳಬೇಕು. ಆದರೆ, ಚಾವಣಿಯಲ್ಲಿ ಸೌರಫಲಕಗಳನ್ನು ಅಳವಡಿಸಲು ಸಾಕಷ್ಟು ಜಾಗವಿಲ್ಲ, ಏನ್ಮಾಡೋದು?

ಚಿಂತಿಸಬೇಡಿ. ಇನ್ನು ಮುಂದೆ ಚಾವಣಿಯಷ್ಟೇ ಅಲ್ಲ, ಮನೆಯ ಅಂಗಳ, ಕಾರು ಪಾರ್ಕಿಂಗ್ ತಾಣ, ಗೋಡೆಗಳು ಅಷ್ಟೇ ಅಲ್ಲದೇ ಚಾವಣಿ ಲಭ್ಯವಿರುವ ಬೇರೆ ಕಟ್ಟಡಗಳ ಮೇಲೂ ಸೌರಫಲಕಗಳನ್ನು ಅಳವಡಿಸಿ, ವಿದ್ಯುತ್ ಉತ್ಪಾದಿಸಬಹುದು(ನೆಲದ ಮೇಲಾದರೆ, ನೆಲದಿಂದ 8 ಅಡಿ ಎತ್ತರದಲ್ಲಿ ಫಲಕ ಅಳವಡಿಸಬೇಕು). ಗ್ರಾಹಕರು ವಿದ್ಯುತ್ ಅನ್ನು ಬಳಸಿ, ಉಳಿದರೆ ಗ್ರಿಡ್‌ಗೆ ಮಾರಾಟ ಮಾಡಬಹುದು. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ(ಕೆಇಆರ್‌ಸಿ) ಇಂಥದ್ದೊಂದು ಅವಕಾಶವನ್ನು ಕಲ್ಪಿಸಿ, ಜುಲೈ 9ರಂದು ಆದೇಶ ಹೊರಡಿಸಿದೆ.

ಬೆಂಗಳೂರು: ಆರ್‌ಎಸ್‌ಟಿಪಿ ಪ್ರಗತಿ (ಜೂನ್ 23)

3,546 ‘ಸೌರಶಕ್ತಿ’ ಅಳವಡಿಸಿಕೊಂಡವರು

16.45 ಮೆಗಾವಾಟ್ ಉತ್ಪಾದನಾ ಸಾಮರ್ಥ್ಯ

ಇದಕ್ಕಾಗಿ ಹಿಂದೆ ಇದ್ದ ಚಾವಣಿ ಸೌರ ವಿದ್ಯುತ್ ಯೋಜನೆಯ (ಎಸ್‌ಆರ್‌ಟಿಪಿವಿ) ನಿಯಮಗಳನ್ನು ಪರಿಷ್ಕರಿಸಿ, ಡಿಸ್ಟ್ರಿಬ್ಯೂಟೆಡ್ ಸೋಲಾರ್ ಫೋಟೊವೊಲ್ಟಾಯಿಕ್ (ಡಿಎಸ್‌ಪಿವಿ) ಎಂದು ಮರು ನಾಮಕರಣ ಮಾಡಿದೆ.


ಎಸ್‌ಆರ್‌ಟಿಪಿವಿ ಯೋಜನೆಯ ಅನ್ವಯ ಎಲ್ಲಿ ಸೌರವಿದ್ಯುತ್ ಬಳಸುತ್ತೀರೊ, ಅಲ್ಲಿಯೇ ಸೌರಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸಬೇಕಿತ್ತು. ಆದರೆ,

ನೆಲದ ಮೇಲೂ ಸೌರಫಲಕ ಅಳವಡಿಸಲು ಅನುಮತಿ ನೀಡಿರುವುದರಿಂದ, ಸೌರವಿದ್ಯುತ್ ಉತ್ಪಾದನೆ ಹೆಚ್ಚಿಸಲು ಸಹಾಯವಾಗುತ್ತದೆ. ಇದರಿಂದ ಎಸ್ಕಾಂ ಪೂರೈಸುವ ವಿದ್ಯುತ್ ಮೇಲಿನ ಅವಲಂಬನೆ ತಗ್ಗುತ್ತದೆ. ಇದು ಪರೋಕ್ಷವಾಗಿ ಇಂಧನ ಕ್ಷೇತ್ರಕ್ಕೆ ಸಹಕಾರಿಯಾಗುತ್ತದೆ

ಬೆಸ್ಕಾಂ ಅಧಿಕಾರಿಗಳು

ಡಿಎಸ್‌ಪಿವಿ ಯೋಜನೆಗಳಲ್ಲಿ ವರ್ಚುವಲ್ ನೆಟ್ ಮೀಟರಿಂಗ್ (VNM) ಮತ್ತು ಗ್ರೂಪ್ ನೆಟ್ ಮೀಟರಿಂಗ್ (GNM) ವ್ಯವಸ್ಥೆಯನ್ನು ಆಯೋಗ ಅನುಮತಿಸಿದ್ದು, ಚಾವಣಿಯಲ್ಲದೇ ಬೇರೆ ಕಡೆಯೂ ಸೌರಫಲಕ ಅಳವಡಿಸಿ ವಿದ್ಯುತ್ ಉತ್ಪಾದಿಸಬಹುದು.

ವಿಎನ್‌ಎಂ ಅಡಿಯಲ್ಲಿ ಒಬ್ಬರಿಗಿಂತ ಹೆಚ್ಚು ಗ್ರಾಹಕರು ತಮ್ಮ ಎಸ್ಕಾಂ ವ್ಯಾಪ್ತಿಯಲ್ಲಿ ಲಭ್ಯವಿರುವ ಜಾಗದಲ್ಲಿ ಸೌರಫಲಕಗಳನ್ನು ಅಳವಡಿಸಿ, ವಿದ್ಯುತ್ ಉತ್ಪಾದಿಸಬಹುದು. ಅಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಪೂರ್ಣ ಪ್ರಮಾಣದಲ್ಲಿ ಗ್ರಿಡ್‌ಗೆ ಕೊಡಬೇಕು. ಉತ್ಪಾದಿತ ವಿದ್ಯುತ್‌ನಿಂದ ಗ್ರಾಹಕರು ತಮ್ಮ ಮನೆಗಳಲ್ಲಿ ಬಳಸಿದ ವಿದ್ಯುತ್‌ಗೆ ಹೊಂದಾಣಿಕೆ ಮಾಡುತ್ತಾರೆ. ಇದರಲ್ಲಿ ಹೆಚ್ಚುವರಿ ವಿದ್ಯುತ್ ಉಳಿದಿದ್ದರೆ, ಅದಕ್ಕೆ ಬೆಸ್ಕಾಂ ಹಣ ನೀಡುತ್ತದೆ. ಈ ಯೋಜನೆಗೆ ಸೇರುವ ಮುನ್ನ ಗ್ರಾಹಕರು ಉತ್ಪಾದಿತ ವಿದ್ಯುತ್ ಎಷ್ಟು ಶೇಕಡಾವಾರು ಹಂಚಿಕೆಯಾಗಬೇಕು ಎಂದು ಒಪ್ಪಂದ ಮಾಡಿಕೊಂಡು, ಅದನ್ನು ಬೆಸ್ಕಾಂಗೆ ಸಲ್ಲಿಸಿರಬೇಕು. ಆ ಪ್ರಕಾರ ಬೆಸ್ಕಾಂನವರು ಉತ್ಪಾದನೆಯಾದ ವಿದ್ಯುತ್ ಅನ್ನು ಗ್ರಾಹಕರ ಮನೆಯ ವಿದ್ಯುತ್ ಬಿಲ್‌ಗಳಿಗೆ ಹೊಂದಾಣಿಕೆ ಮಾಡುತ್ತಾರೆ.



‘ಜಿಎನ್‌ಎಂ’ ಎಂದರೆ

ಒಬ್ಬ ಗ್ರಾಹಕರಿಗೆ ಬೇರೆ ಬೇರೆ ಕಡೆ ಎರಡು–ಮೂರು ಮನೆಗಳಿರುತ್ತವೆ. ಒಂದು ಮನೆಯಲ್ಲಿ ಮಾತ್ರ ಸೌರಫಲಕ ಅಳವಡಿಕೆಗೆ ಅವಕಾಶವಿರುತ್ತದೆ. ಇಂಥ ವೇಳೆ ಒಂದು ಮನೆಗೆ ಸೌರಫಲಕ ಅಳವಡಿಸಿ, ವಿದ್ಯುತ್ ತಯಾರಿಸಿ, ಅದನ್ನು ಮೂರು ಮನೆಗೂ ಹಂಚಿಕೆ ಮಾಡಬಹುದು. ಇದಕ್ಕೆ ಗ್ರೂಪ್ ನೆಟ್ ಮೀಟರಿಂಗ್(ಜಿಎನ್‌ಎಂ)’ ಎನ್ನುತ್ತಾರೆ. ಡಿಎಸ್‌ಪಿವಿ ಯೋಜನೆಯಲ್ಲಿ ಈ ಸೌಲಭ್ಯಕ್ಕೂ ಕೆಇಆರ್‌ಸಿ ಅವಕಾಶ ಕಲ್ಪಿಸಿದೆ.

ವಿಎನ್‌ಎಂ ಮತ್ತು ಜಿಎನ್‌ಎಂ ಸೌಲಭ್ಯಗಳಡಿ ಗ್ರಾಹಕರು ಉತ್ಪಾದಿಸುವ ವಿದ್ಯುತ್ ಅನ್ನು ಗ್ರಿಡ್‌ಗೆ ಕಳಿಸಲು ಇಚ್ಛಿಸಿದರೆ, ಅಂಥವರು ಕನಿಷ್ಠ 5 ಕಿಲೋವಾಟ್ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಿರಬೇಕು ಎಂದು ಆಯೋಗ ಹೇಳುತ್ತದೆ.

ಈ ವಿಎನ್‌ಎಂ ಸೌಲಭ್ಯ, ಎಸ್ಕಾಂ ವ್ಯಾಪ್ತಿಯ ಗೃಹ ಬಳಕೆದಾರರು, ಹೌಸಿಂಗ್ ಸೊಸೈಟಿಗಳ ಸಮೂಹ, ಚಾರಿಟಬಲ್ ಟ್ರಸ್ಟ್‌ಗಳು ನಡೆಸುವ ಸಂಸ್ಥೆಗಳು, ಸರ್ಕಾರಿ ಶಾಲೆಗಳು, ಸ್ಥಳೀಯ ಸಂಸ್ಥೆಗಳ ಕಟ್ಟಡಗಳು, ಸರ್ಕಾರಿ ಕಟ್ಟಡಗಳಷ್ಟೇ ಅರ್ಹವಾಗಿರುತ್ತವೆ.

ಯಾರಿಗೆಲ್ಲ ಅನುಕೂಲ?: ಸೌರಫಲಕಗಳನ್ನು ಅಳವಡಿಸಲು ಪೂರಕವಾದ ಚಾವಣಿ ಇಲ್ಲದ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಸಣ್ಣ ಅಳತೆಯ ನಿವೇಶನದಲ್ಲಿ ಕಟ್ಟಿದ ಮನೆಗಳ ಚಾವಣಿಯಲ್ಲಿ ಸೌರಫಲಕ ಅಳವಡಿಕೆಗೆ ಜಾಗದ ಕೊರತೆ ಇರುತ್ತದೆ. ಆದರೆ ಮನೆ ಹಿಂದೆ ಅಥವಾ ಮುಂದೆ ಜಾಗವಿರುತ್ತದೆ. ಇಂಥ ನಿವಾಸಿಗಳಿಗೆ ಈ ಆದೇಶದಿಂದ ಅನುಕೂಲವಾಗಲಿದೆ. ಚಾವಣಿ ಇದ್ದೂ ಬಿಸಿಲಿನ ಅಭಾವವಿರುವವರಿಗೆ ಇದರಿಂದ ಅನುಕೂಲವಾಗುತ್ತದೆ. ‘ಅಪಾರ್ಟ್‌ಮೆಂಟ್‌ನಲ್ಲಿರುವ ಕಾರು, ಸೈಕಲ್ ಪಾರ್ಕಿಂಗ್‌ನಂತಹ ತಾಣಗಳಲ್ಲಿ ಸೌರಫಲಕ ಅಳವಡಿಸಿಕೊಂಡರೆ, ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್, ಕಾಮನ್ ಏರಿಯಾದಲ್ಲಿನ ವಿದ್ಯುತ್ ಬಳಕೆಗೂ ಅನುಕೂಲವಾಗುತ್ತದೆ’ ಎಂಬುದು ತಜ್ಞರ ವಿಶ್ಲೇಷಣೆ.

ನಕಲಿ ಕಾಲ್ ಸೆಂಟರ್ ಸಿಬ್ಬಂದಿ ಬಂಧನ, ಸಿಸಿಬಿ ಪೊಲೀಸರ ಕಾರ್ಯಾಚರಣೆ

ಬೃಹತ್ ಸೈಬರ್ ವಂಚನೆ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ವಂಚನೆಗೆ ಒಳಗಾದವರಿಗೆ ಕಾನೂನು ಸೇವೆ ಒದಗಿಸಿಕೊಡುವುದಾಗಿ ನಂಬಿಸಿ ಹಣ ಪಡೆದು ವಂಚಿಸುತ್ತಿದ್ದ ಬೃಹತ್ ಸೈಬರ್ ವಂಚನೆ ಜಾಲವನ್ನು ಪತ್ತೆ ಹಚ್ಚಿರುವ ಸಿಸಿಬಿ ಪೊಲೀಸರು, ತಮಿಳುನಾಡಿನ ತುಫೆಲ್ ಅಹಮದ್ ಎಂಬಾತನನ್ನು ಬಂಧಿಸಿದ್ದಾರೆ.



ತುಫೆಲ್ ಅಹಮದ್

ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ಕಾರ್ಯ ಮುಂದುವರೆಸಿದ್ದಾರೆ.

‘ನಕಲಿ ಕಾಲ್ ಸೆಂಟರ್‌ನಲ್ಲಿದ್ದ 10 ಹಾರ್ಡ್ ಡಿಸ್ಕ್, ನಕಲಿ ಕಂಪನಿಗಳ ಮುದ್ರೆ, ಬಾಡಿಗೆ ಒಪ್ಪಂದದ ಪತ್ರಗಳು, ಚೆಕ್‌ಬುಕ್, ಮೊಬೈಲ್, ಸಿಪಿಯು, ವೊಡಾಫೋನ್ ಕಂಪನಿಯ 11 ಸಿಮ್ ಕಾರ್ಡ್‌ಗಳು, ಎಸ್‌ಐಪಿ ಟ್ರಂಕ್ ಸರ್ವರ್ ವ್ಯವಸ್ಥೆಯ ಡೇಟಾ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಹೇಳಿದರು.

‘ಈ ಜಾಲವು ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸಿರುವುದು ಪತ್ತೆಯಾಗಿದೆ. ವಂಚನೆ ನಡೆಸಿರುವುದಕ್ಕೆ ಸಂಬಂಧಿಸಿದಂತೆ ದೇಶದಾದ್ಯಂತ ಸೈಬರ್ ಅಪರಾಧ ವರದಿ ಪೋರ್ಟಲ್‌ನಲ್ಲಿ 19 ಪ್ರಕರಣಗಳು ದಾಖಲಾಗಿವೆ’ ಎಂದು ಮಾಹಿತಿ ನೀಡಿದರು.

ಅಪರಾಧ ಸುದ್ದಿ

‘ಕಾಲ್ ಸೆಂಟರ್’ ಎಂದು ನಾಮಫಲಕ ಹಾಕಿಕೊಂಡು ಕೇಂದ್ರದ ಒಳಗೆ ವಂಚನೆ ವ್ಯವಹಾರಗಳನ್ನು ನಡೆಸಲಾಗುತ್ತಿತ್ತು. ಪೊಲೀಸರಿಗೆ ವಿಷಯ ತಿಳಿಯಬಾರದೆಂದು ಪದೇ ಪದೇ ಕಚೇರಿಗಳನ್ನು ಬದಲಾವಣೆ ಮಾಡಲಾಗುತ್ತಿತ್ತು. ಆರೋಪಿಗಳು ಐದು ಕಡೆ ಕಚೇರಿ ಬದಲಾವಣೆ ಮಾಡಿರುವ ಮಾಹಿತಿ ಸಿಕ್ಕಿದೆ’ ಎಂದು ಮಾಹಿತಿ ನೀಡಿದರು.

‘ರಾಷ್ಟ್ರೀಯ ಸೈಬರ್ ಅಪರಾಧ ಪೋರ್ಟಲ್ ಮೂಲಕ ಬಂದ ಮಾಹಿತಿ ಆಧರಿಸಿ, ಫೆಬ್ರುವರಿ 12ರಂದು ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ವಂಚನೆ ಜಾಲಪತ್ತೆ ಹಚ್ಚಲಾಯಿತು’ ಎಂದು ಪೊಲೀಸರು ಹೇಳಿದರು.

‘ಸೋಲಾರ್ ಘಟಕ ಅಳವಡಿಸಿ ಕೊಡುವುದಾಗಿ ದೂರುದಾರರಿಗೆ ಸೈಬರ್ ವಂಚಕರು ₹1.50 ಕೋಟಿ ವಂಚಿಸಿದ್ದರು. ಆ ಹಣವನ್ನು ವಾಪಸ್ ಪಡೆಯಲು ಕಾನೂನು ನೆರವಿಗಾಗಿ ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸುತ್ತಿದ್ದರು. ‘ಕ್ವಿಕ್‌ಮೊಟೊ ಲೀಗಲ್ ಸರ್ವಿಸ್’ ಹೆಸರಿನ ವೆಬ್‌ಸೈಟ್ ಅನ್ನು ದೂರುದಾರರು ಪತ್ತೆಹಚ್ಚಿದ್ದರು. ಅದಾದ ಮೇಲೆ ದೂರುದಾರಿಗೆ ಕರೆ ಮಾಡಿದ್ದ ವಂಚಕರು, ಕಾನೂನು ಸೇವೆ ಒದಗಿಸುವುದಾಗಿ ನಂಬಿಸಿದ್ದರು. ವಂಚಕರ ಮಾತು ನಂಬಿದ್ದ ದೂರುದಾರರು, ಹಂತಹಂತವಾಗಿ ₹12.50 ಲಕ್ಷವನ್ನು ವರ್ಗಾವಣೆ ಮಾಡಿದ್ದರು. ತನಿಖೆ ನಡೆಸಿದಾಗ ಕಂಪನಿಯೇ ನಕಲಿ ಎಂಬುದು ಗೊತ್ತಾಯಿತು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ವಂಚನೆ ಮಾರ್ಗ ಹೇಗೆ?

ಆರಂಭಿಕ ತನಿಖೆಯಲ್ಲಿ ‘ಕ್ವಿಕ್‌ಮೊಟೊ ಲೀಗಲ್ ಕಂಪನಿ’ಯು ವಿಳಾಸದಲ್ಲಿ ಇಲ್ಲದಿರುವುದು ಸಿಸಿಬಿ ಪೊಲೀಸರಿಗೆ ಪತ್ತೆಯಾಗಿತ್ತು. ತನಿಖೆ ಮುಂದುವರಿಸಿದಾಗ, ಕಸ್ತೂರಿನಗರದಲ್ಲಿ ‘ಇಂಡಿಯಾ ಲೀಗಲ್ ಸರ್ವಿಸ್’ ಹೆಸರಿನಲ್ಲಿ ಕಂಪನಿಯೊಂದು ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿತ್ತು.

‘12 ಟೆಲಿಕಾಲರ್‌ಗಳನ್ನು ನೇಮಿಸಿಕೊಂಡು ZOIPER-5 ಎನ್ನುವ ಅಪ್ಲಿಕೇಶನ್ ಬಳಸಿಕೊಂಡು ವಂಚನೆಗೆ ಒಳಗಾದವರನ್ನು ಆರೋಪಿಗಳು ಪತ್ತೆ ಹಚ್ಚುತ್ತಿದ್ದರು. ಸೈಬರ್ ವಂಚನೆಗೆ ಒಳಗಾದವರಿಗೆ ಕರೆ ಮಾಡುತ್ತಿದ್ದ ಟೆಲಿಕಾಲರ್‌ಗಳು, ಹಣ ಮರಳಿ ಕೊಡಿಸುವುದಾಗಿ ನಂಬಿಸುತ್ತಿದ್ದರು. ಅವರ ಮಾತು ನಂಬಿ ಹಣ ನೀಡಿದ ಬಳಿಕ ವಂಚನೆ ಮಾಡಲಾಗುತ್ತಿತ್ತು’ ಎಂದು ಪೊಲೀಸರು ಹೇಳಿದರು.

ದೂರಸಂಪರ್ಕ ಇಲಾಖೆಯ ತಾಂತ್ರಿಕ ನೆರವು

‘ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆ ಹಾಗೂ ಬಂಧನಕ್ಕೆ ದೂರಸಂಪರ್ಕ ಇಲಾಖೆ ಹಾಗೂ ಟಾಟಾ ಟೆಲಿ ಸರ್ವಿಸ್ ನೆರವು ಪಡೆದು ಕೊಳ್ಳಲಾಗುತ್ತಿದೆ. ಅಪರಾಧ ವಿಭಾಗದ ಡಿಸಿಪಿ ರಾಜಾ ಇಮಾಮ್ ಕಾಸಿಂ ಅವರ ನೇತೃತ್ವದಲ್ಲಿ ತನಿಖೆ ಮುಂದುವರಿದಿದೆ’ ಎಂದು ಮೂಲಗಳು ತಿಳಿಸಿವೆ.

ವಿಶೇಷ ತಂಡ ರಚಿಸಿ ತನಿಖೆ

ರಾಮಮೂರ್ತಿನಗರದಲ್ಲಿ ದಾಖಲಾದ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಜಂಟಿ ಪೊಲೀಸ್ ಕಮಿಷನರ್ ಅಜಯ್ ಹಿಲೋರಿ ಅವರ ನೇತೃತ್ವದಲ್ಲಿ ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು.

‘ಕಸ್ತೂರಿನಗರದಲ್ಲಿದ್ದ ನಕಲಿ ಕಾಲ್ ಸೆಂಟರ್‌ನಲ್ಲಿ 12 ಮಂದಿ ಟೆಲಿಕಾಲರ್‌ಗಳು ಕೆಲಸ ಮಾಡುತ್ತಿದ್ದರು. ಆ ಪೈಕಿ ತುಫೆಲ್ ಅಹಮದ್ ಅವರನ್ನು ಬಂಧಿಸಲಾಗಿದೆ. ತುಫೆಲ್‌ನ ಸಹೋದರ ದುಬೈನಲ್ಲಿ ನೆಲಸಿದ್ದು, ನಕಲಿ ಕಂಪನಿ ಸ್ಥಾಪಿಸಿ ಆನ್‌ಲೈನ್‌ನಲ್ಲಿ ವಂಚನೆ ನಡೆಸುತ್ತಿರುವುದು ಗೊತ್ತಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಸರ್ಕಾರ, ದೂರಸಂಪರ್ಕ ಸಂಸ್ಥೆಗಳಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತವಾಗಿ ಟೆಲಿಫೋನ್ ಎಕ್ಸ್‌ಚೇಂಜ್ ವ್ಯವಸ್ಥೆಯ ಮೂಲಕ ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸಿ, ದೂರಸಂಪರ್ಕ ಇಲಾಖೆ, ಸರ್ಕಾರಕ್ಕೆ ವಂಚಿಸುತ್ತಿದ್ದ ಜಾಲದಲ್ಲಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಮಹಮದ್ ಸಫಾಫ್ (31) ಹಾಗೂ ಎಂ.ಎ.ಫಯಾಜ್ (30) ಬಂಧಿತರು.



ಸಫಾಫ್



ಫಯಾಜ್

ಏರ್‌ಟೆಲ್, ಬಿಎಸ್‌ಎನ್‌ಎಲ್, ವೊಡಾಫೋನ್ ಸೇರಿದಂತೆ ವಿವಿಧ ಕಂಪನಿಗಳ 702 ಸಿಮ್ ಕಾರ್ಡ್‌ಗಳು, ಒಂಬತ್ತು ಸಿಮ್ ಬಾಕ್ಸ್‌ಗಳು, ಒಂದು ಮೊಬೈಲ್, ಆರು ರೌಟರ್‌ಗಳು, ಲ್ಯಾಪ್‌ಟಾಪ್ ಅನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹10 ಲಕ್ಷ ಎಂದು ಅಂದಾಜಿಸಿರುವುದಾಗಿ ಸಿಸಿಬಿ ಪೊಲೀಸರು ಹೇಳಿದರು.

ಜುಲೈ 30ರಂದು ಏರ್‌ಟೆಲ್ ಲಿಮಿಟೆಡ್‌ನ ನೋಡಲ್ ಅಧಿಕಾರಿಯೊಬ್ಬರು ಸೈಬರ್ ಅಪರಾಧ ಠಾಣೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಸಿಸಿಬಿ ಪೊಲೀಸರಿಗೆ ಪ್ರಕರಣವನ್ನು ವರ್ಗಾವಣೆ ಮಾಡಲಾಗಿತ್ತು. ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳಾಗಿ ಪರಿವರ್ತಿಸಿ ಸರ್ಕಾರ ಹಾಗೂ ದೂರಸಂಪರ್ಕ ಸಂಸ್ಥೆಗಳಿಗೆ ಕೋಟ್ಯಂತರ ರೂಪಾಯಿ ವಂಚಿಸಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರಲಾಗುತ್ತಿದೆ. ಅಲ್ಲದೇ ಮಾನ್ಯತೆ ಇಲ್ಲದೇ ಟೆಲಿಫೋನ್ ಎಕ್ಸ್‌ಚೇಂಜ್ ನಡೆಸಲಾಗುತ್ತಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

‘ಇದುವರೆಗೆ ನಡೆದ ತನಿಖೆಯಲ್ಲಿ ಸರ್ಕಾರ ಹಾಗೂ ದೂರಸಂಪರ್ಕ ಸಂಸ್ಥೆಗಳಿಗೆ ಕೋಟ್ಯಂತರ ರೂಪಾಯಿ ವಂಚನೆ ನಡೆಸಿರುವುದು ಗೊತ್ತಾಗಿದೆ. ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳಾಗಿ ಪರಿವರ್ತಿಸಿ, ಯಾವುದಾದರೂ ಅಪರಾಧ ಕೃತ್ಯ ಎಸಗಿದ್ದಾರೆಯೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಇಮ್ಮಡಿಹಳ್ಳಿಯಲ್ಲಿ ಸಿಮ್ ಬಾಕ್ಸ್ ಸ್ಥಾಪನೆ: ಸ್ಥಳೀಯ ಕರೆಗಳಾಗಿ ಮಾರ್ಪಡಿಸಲು ಇಮ್ಮಡಿಹಳ್ಳಿಯಲ್ಲಿ ಆರೋಪಿಗಳು ಸಿಮ್ ಬಾಕ್ಸ್ ಸ್ಥಾಪಿಸಿದ್ದರು. ಒಬ್ಬ ಆರೋಪಿ ವಿದೇಶದಲ್ಲಿದ್ದರೆ, ಮತ್ತೊಬ್ಬ ಬೆಂಗಳೂರಿನಿಂದ ಕೃತ್ಯಕ್ಕೆ ನೆರವು ನೀಡುತ್ತಿದ್ದ. ವಿದೇಶದಿಂದ ಕೊರಿಯರ್ ಮೂಲಕ ಕಳುಹಿಸಲಾದ ಸಿಮ್ ಬಾಕ್ಸ್‌ಗಳನ್ನು ಬಳಸಿ ಕೃತ್ಯ ಎಸಗಲಾಗುತ್ತಿತ್ತು. ಇದರಿಂದ ಹವಾಲ ಮೂಲಕ ಬೆಂಗಳೂರಿನಲ್ಲಿದ್ದ ಆರೋಪಿಗೆ ಪ್ರತಿ ತಿಂಗಳು ₹5 ಲಕ್ಷ ಹಣ ಲಭಿಸುತ್ತಿತ್ತು ಎಂದು ಪೊಲೀಸರು ಹೇಳಿದರು.

ವಿದೇಶದಲ್ಲಿ ನೆಲಸಿದ್ದ ಆರೋಪಿ, ಅಲ್ಲಿನ ಕಾರ್ಮಿಕರನ್ನು ಪತ್ತೆಹಚ್ಚುತ್ತಿದ್ದ. ತಮ್ಮ ಕುಟುಂಬದೊಂದಿಗೆ ಮಾತನಾಡಲು ಅಂತರರಾಷ್ಟ್ರೀಯ ಕರೆಗಳಿಗೆ ವೆಚ್ಚ ಹೆಚ್ಚಾಗುತ್ತದೆ ಎಂದು ಅವರಿಗೆ ಹೇಳುತ್ತಿದ್ದ. ಕಡಿಮೆ ದರದಲ್ಲಿ ಕರೆ ಮಾಡಲು ನೆರವು ನೀಡುವುದಾಗಿ ಹೇಳುತ್ತಿದ್ದ ಎಂದು ಪೊಲೀಸರು ಹೇಳಿದರು.

ಹವಾಲ ಮಾರ್ಗದಿಂದ ಹಣ

‘ಐಎಸ್‌ಡಿ ಕರೆಗಳನ್ನು ಸ್ಥಳೀಯ ಕರೆಯಾಗಿ ಪರಿವರ್ತಿಸುವುದು ಅಪರಾಧ. ಬೇರೆ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿರುವ ಭಾರತೀಯರು, ತಮ್ಮ ಕುಟುಂಬದವರ ಜತೆಗೆ ಮಾತನಾಡಲು ಐಎಸ್‌ಡಿ ಕರೆಗಳನ್ನು ಬಳಸಬೇಕು. ಈ ಕರೆಗಳ ದರ ಸ್ಥಳೀಯ ಕರೆಗಳಿಗಿಂತ ದುಬಾರಿ. ಕರೆಗಳನ್ನು ಪರಿವರ್ತಿಸುವುದರಿಂದ ಸ್ಥಳೀಯ ಕರೆಗಳ ದರದಲ್ಲೇ ಅಂತರರಾಷ್ಟ್ರೀಯ ಕರೆಗಳನ್ನು ಮಾಡಬಹುದು. ಎರಡೂ ದೇಶಗಳಲ್ಲಿ ಒಂದೇ ತಂತ್ರಜ್ಞಾನ ಬಳಸಿದಾಗ ಮಾತ್ರ ಇದು ಸಾಧ್ಯ. ಈ ಉದ್ದೇಶದಿಂದ ಆರೋಪಿಗಳು ದುಬಾರಿ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಬದಲಾಯಿಸುತ್ತಿದ್ದರು. ಕೃತ್ಯಕ್ಕೆ ಸಹಕಾರ ನೀಡಿದ ಸ್ಥಳೀಯರಿಗೆ ಹವಾಲದ ಮೂಲಕ ಹಣ ಸಂದಾಯ ಮಾಡುತ್ತಿದ್ದರು’ ಎಂದೂ ಪೊಲೀಸರು ಹೇಳಿದರು.

‘ಸಿಮ್ ಬಾಕ್ಸ್, ಪಿಆರ್‌ಐ ಮತ್ತು ಎಸ್‌ಐಪಿ ಟ್ರಂಕ್ ಕಾಲ್ ಸಾಧನಗಳನ್ನು ಬಳಸಿ ಸ್ಥಳೀಯ ಕರೆಗಳನ್ನಾಗಿ ವಂಚಕರು ಪರಿವರ್ತಿಸುತ್ತಿದ್ದರು. ಇದಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಮತ್ತು ನಕಲಿ ಐ.ಪಿ ವಿಳಾಸದ ಸಾಧನಗಳನ್ನು ಬಳಸುತ್ತಿದ್ದರು. ಕರೆಗಳು ಎಲ್ಲಿಂದ ಬರುತ್ತವೆ ಎಂಬುದನ್ನು ಗುರುತಿಸಲು ಸಾಧ್ಯ ಆಗುತ್ತಿರಲಿಲ್ಲ. ಆರೋಪಿಗಳು ವಿವಿಧ ರಾಜ್ಯಗಳಿಂದ ಬಿಎಸ್‌ಎನ್‌ಎಲ್ ಸಿಮ್‌ಕಾರ್ಡ್ ಖರೀದಿಸುತ್ತಿದ್ದರು. ಸಿಮ್ ಬಾಕ್ಸ್ ಉಪಕರಣಗಳಿಗೆ ಅವುಗಳನ್ನು ಅಳವಡಿಸಿ, ಬೇರೊಂದು ಕಂಪನಿಯ ಇಂಟರ್‌ನೆಟ್ ಬಳಸಿ ವಿದೇಶಿ ಕರೆಗಳನ್ನು ಪರಿವರ್ತನೆ ಮಾಡುತ್ತಿದ್ದರು’ ಎಂದು ಮೂಲಗಳು ಹೇಳಿವೆ.

ಆರೋಪಿಗಳಿಂದ ವಶಪಡಿಸಿಕೊಂಡಿರುವ ಸಿಮ್ ಕಾರ್ಡ್‌ಗಳನ್ನು ಸೈಬರ್ ಅಪರಾಧಕ್ಕೆ ಬಳಸಿರುವ ಶಂಕೆಯಿದೆ. ಸರ್ಕಾರ, ದೂರ ಸಂಪರ್ಕ ಕಂಪನಿಗಳಿಗೆ ಆಗಿರುವ ನಷ್ಟದ ಮೊತ್ತವನ್ನು ಅಂದಾಜಿಸಲಾಗುತ್ತಿದೆ

ಸೀಮಂತ್ ಕುಮಾರ್ ಸಿಂಗ್

ನಗರ ಪೊಲೀಸ್ ಕಮಿಷನರ್

ನಟಿ ರಮ್ಯಾಗೆ ಬೆದರಿಕೆ: ಮತ್ತಿಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬೆದರಿಕೆ ಸಂದೇಶ ಕಳುಹಿಸಿದ್ದ ಆರೋಪದ ಅಡಿ ಮತ್ತಿಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

ಭುವನ್‌ಗೌಡ ಹಾಗೂ ರಾಜೇಶ್ ಬಂಧಿತರು. ಇದೇ ಪ್ರಕರಣದಲ್ಲಿ ಆಗಸ್ಟ್ 2ರಂದು ಟಿ.ಓಬಣ್ಣ ಹಾಗೂ ಗಂಗಾಧರ ಎಂಬುವವರನ್ನು ಬಂಧಿಸಲಾಗಿತ್ತು.

‘ಇನ್‌ಸ್ಟಾಗ್ರಾಂನ 47 ಖಾತೆಗಳಿಂದ ಆರೋಪಿಗಳು ರಮ್ಯಾ ಅವರಿಗೆ ಅಶ್ಲೀಲ ಚಿತ್ರ ಹಾಗೂ ಬೆದರಿಕೆ ಸಂದೇಶ ಕಳುಹಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ಆ ಖಾತೆಗಳ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು.




ಸಾಮಾಜಿಕ ಮಾಧ್ಯಮಗಳ ಬಳಕೆದಾರರು ತಮ್ಮ ಅಭಿಪ್ರಾಯ ಹಂಚಿಕೊಳ್ಳುವಾಗ ಜವಾಬ್ದಾರಿ ಹಾಗೂ ವಿವೇಚನೆಯಿಂದ ನಡೆದುಕೊಳ್ಳಬೇಕು

ಸೀಮಂತ್ ಕುಮಾರ್ ಸಿಂಗ್

ನಗರ ಪೊಲೀಸ್ ಕಮಿಷನರ್

‘ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಕೋಲಾರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿರುವ ಉಳಿದ ಖಾತೆದಾರರಿಗೆ ಹುಡುಕಾಟ ನಡೆಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಜಾಲತಾಣಗಳಲ್ಲಿ ಅಶ್ಲೀಲ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ರಮ್ಯಾ ಅವರು ಜುಲೈ 28ರಂದು ದೂರು ನೀಡಿದ್ದರು. ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.



ಭುವನ್‌ಗೌಡ



ರಾಜೇಶ್

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತು ಇತರ ಆರು ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿತ್ತು. ಜಾಮೀನಿನ ಮೇಲಿನ ಆದೇಶವನ್ನು ಕಾಯ್ದಿರಿಸಿದೆ. ಈ ಬೆಳವಣಿಗೆಯ ನಂತರ ರಮ್ಯಾ ಅವರು ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿ ‘ಭಾರತದ ಸಾಮಾನ್ಯ ಜನರಿಗೆ ಸುಪ್ರೀಂ ಕೋರ್ಟ್ ಒಂದು ಭರವಸೆಯ ಕಿರಣ ಇದ್ದಂತೆ. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿ’ ಎಂದು ಅದರಲ್ಲಿ ಉಲ್ಲೇಖಿಸಿದ್ದರು.

ರಮ್ಯಾ ಅವರು ಈ ಪೋಸ್ಟ್ ಹಾಕಿದ ಬಳಿಕ ಅವರ ಇನ್‌ಸ್ಟಾಗ್ರಾಂ ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿದ್ದವು. ಸಂದೇಶಗಳ ಸ್ಕ್ರೀನ್‌ಶಾಟ್ ಅನ್ನು ರಮ್ಯಾ ತೆಗೆದುಕೊಂಡು ಪೊಲೀಸರಿಗೆ ದೂರು ನೀಡಿದ್ದರು.

‘ಸಾಮಾಜಿಕ ಜಾಲತಾಣಗಳಲ್ಲಿ ನಿಂದನೆ, ದ್ವೇಷಭಾಷಣ ಹಾಗೂ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ರೀತಿ ಬೆದರಿಕೆ ಪ್ರಕರಣಗಳನ್ನು ಭಾರತೀಯ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿಯಲ್ಲಿ ಅಪರಾಧಗಳೆಂದು ಪರಿಗಣಿಸಲಾಗಿದೆ’ ಎಂದು ಕಮಿಷನರ್ ಹೇಳಿದರು.

ಹಣಕ್ಕಾಗಿ ಅಡ್ಡಗಟ್ಟಿ ಯುವಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಮಲಿನಲ್ಲಿದ್ದಾಗ, ಬೈಕ್‌ನಲ್ಲಿ ತೆರಳುತ್ತಿದ್ದ ಯುವಕನನ್ನು ಅಡ್ಡಗಟ್ಟಿ ಕೊಲೆ ಮಾಡಿರುವ ಘಟನೆ ಬ್ಯಾಡರಹಳ್ಳಿಯ ತಿಗಳರಪಾಳ್ಯ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ನಡೆದಿದೆ.

ಪ್ರೇಮ್ ಕೊಲೆಯಾದ ಯುವಕ. ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶಾಲ್, ಹೇಮಂತ್ ಹಾಗೂ ಪುನೀತ್ ಅವರನ್ನು ಬಂಧಿಸಲಾಗಿದೆ ಎಂದು ಬ್ಯಾಡರಹಳ್ಳಿ ಠಾಣೆಯ ಪೊಲೀಸರು ತಿಳಿಸಿದರು.

ಕೊಲೆಯಾದ ಪ್ರೇಮ್ ಕಾರು ಸರ್ವಿಸ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಬಂಧಿತರ ಪೈಕಿ ವಿಶಾಲ್ ಎಂಬಾತ ಬ್ಯಾಡರಹಳ್ಳಿ ಠಾಣೆಯ ರೌಡಿಶೀಟರ್ ಆಗಿದ್ದಾನೆ. ಮತ್ತೊಬ್ಬ ರೌಡಿಶೀಟರ್ ನವೀನ್ ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದರು.

ಸ್ನೇಹಿತರಿಬ್ಬರ ಜತೆಗೆ ಪ್ರೇಮ್ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಆರೋಪಿಗಳ ಗುಂಪು ಅಡ್ಡಗಟ್ಟಿದೆ. ಹಣ ನೀಡುವಂತೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಸಿದೆ. ಈ ವೇಳೆ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದಿದೆ. ಆಗ ಆರೋಪಿಗಳು ಚಾಕುವಿನಿಂದ ಪ್ರೇಮ್ ಅವರಿಗೆ ಚುಚ್ಚಿ ಪರಾರಿಯಾಗಿದ್ದರು ಎಂದು ವಾಯುವ್ಯ ವಿಭಾಗದ ಡಿಸಿಪಿ ನಾಗೇಶ್ ತಿಳಿಸಿದರು.

ಪ್ರೇಮ್ ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು. ತೀವ್ರ ಗಾಯಗೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸುವಂತೆ ವೈದ್ಯರು ಸೂಚಿಸಿದ್ದರು. ಹಣವಿಲ್ಲದ ಕಾರಣ ಆಸ್ಪತ್ರೆಗೆ ದಾಖಲಿಸದೇ ಕಾರು ಸರ್ವಿಸ್ ಸೆಂಟರ್‌ನಲ್ಲಿ ಪ್ರೇಮ್ ಅವರನ್ನು ಮಲಗಿಸಿ ಹೋಗಿದ್ದರು. ಸ್ವಲ್ಪಸಮಯದ ನಂತರ ಬಂದು ನೋಡಿದಾಗ ಪ್ರೇಮ್ ಮೃತಪಟ್ಟಿದ್ದರು ಎಂದು ಮೂಲಗಳು ತಿಳಿಸಿವೆ.

ರಸ್ತೆಯಲ್ಲಿ ರಂಪಾಟ ಪ್ರಕರಣ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿನ ರಂಪಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಕಾರು ಚಾಲಕರ ವಿರುದ್ಧ ರಾಮಮೂರ್ತಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಇಬ್ಬರು ವ್ಯಕ್ತಿಗಳು ಸಾರ್ವಜನಿಕವಾಗಿ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಆಗಸ್ಟ್ 2ರಂದು ರಾತ್ರಿ ಈ ಘಟನೆ ನಡೆದಿದೆ. ಕಾರೊಂದು ಮತ್ತೊಂದು ಕಾರಿಗೆ ಗುದ್ದಿದ ನಂತರ ಜಗಳವಾಗಿದೆ ಎಂದು ಪೊಲೀಸರು ಹೇಳಿದರು.

ಮದ್ಯದ ಅಮಲಿನಲ್ಲಿದ್ದ ಕಾರಿನ ಚಾಲಕ ಇಳಿದು ಮತ್ತೊಂದು ಕಾರಿನ ಚಾಲಕನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಆಗ ಇಬ್ಬರಿಗೂ ಮಾತಿಗೆ ಮಾತು ಬೆಳೆದು ಪರಸ್ಪರ ಹೊಡೆದಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಮದ್ಯ ಸೇವಿಸಿ ವಾಹನ ಚಲಾಯಿಸಿದ್ದಕ್ಕಾಗಿ ಸಂಚಾರ ಪೊಲೀಸರೂ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

ಮಹಿಳೆ ಎದುರು ಪ್ಯಾಂಟ್ ಬಿಚ್ಚಿದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆ ಎದುರು ಪ್ಯಾಂಟ್ ಬಿಚ್ಚಿ ಅಸಭ್ಯ ವರ್ತನೆ ತೋರಿದ ಆರೋಪದ ಮೇಲೆ ಕಾವಲುಗಾರನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿ ಉಪನಗರ ನಿವಾಸಿ ಎಸ್.ಉಷಾರಾಣಿ ಅವರ ದೂರು ಆಧರಿಸಿ ವಿಶಾಲ್ ಮೆಗಾ ಮಾರ್ಟ್‌ನ ಕಾವಲುಗಾರ ಚಂದ್ರಹಾಸ ಎಂಬಾತನನ್ನು ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

‘ಮೀನಿನ ಅಂಗಡಿ ಜಾಗದ ವಿಚಾರಕ್ಕೆ ಆರೋಪಿ ಹಾಗೂ ಮಹಿಳೆ ನಡುವೆ ಜಗಳ ನಡೆದಿದೆ. ಈ ವಿಷಯವಾಗಿ ಆತನಿಗೆ ಬುದ್ಧಿ ಹೇಳಿಸುವ ಸಲುವಾಗಿ ಮಾರ್ಟ್‌ನ ವ್ಯವಸ್ಥಾಪಕರಿಗೆ ದೂರು ಹೇಳಲು ಮಹಿಳೆ ಹೋದ ಸಂದರ್ಭದಲ್ಲಿ ಚಂದ್ರಹಾಸ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾನೆ. ಅಷ್ಟೇ ಅಲ್ಲದೆ ಪ್ಯಾಂಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದಾನೆ’ ಎಂದು ಪೊಲೀಸರು ತಿಳಿಸಿದರು.



‘ಆರೋಪಿಯು ಚೂಪಾದ ವಸ್ತುವಿನಿಂದ ಕಿವಿ ಹಾಗೂ ಕುತ್ತಿಗೆ ಭಾಗಕ್ಕೆ ಬಲವಾಗಿ ಹೊಡೆದು ಗಾಯ ಮಾಡಿದ್ದಾನೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಂದ ಬಳಿಕ ದೂರು ನೀಡಿದ್ದೇನೆ. ಸಾರ್ವಜನಿಕರು 112ಕ್ಕೆ ಕರೆ ಮಾಡಿದ್ದರಿಂದ ಪೊಲೀಸರು ಸ್ಥಳಕ್ಕೆ ತೆರಳಿ ರಕ್ಷಣೆ ಮಾಡಿದ್ದಾರೆ’ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಹಲವು ಪೋಷಕಾಂಶಗಳನ್ನು ಹೊಂದಿರುವ ವಾಲ್‌ನಟ್‌ಗಳು ಮೂಳೆಯ ಆರೋಗ್ಯವನ್ನು ಕಾಪಾಡಬಲ್ಲವು

ಅರಳು–ಮರುಳನ್ನು ಮರೆಯಬೇಡಿ



• ಡಾ. ವೆಂಕಟೇಶ್ ಎಸ್.

ಮರೆವಿಗೆ ಸಂಬಂಧಿಸಿದ ಕಾಯಿಲೆಗಳು ತಕ್ಷಣವೇ ಬಂದು ಹೋಗುವ ಜ್ವರ ಅಥವಾ ಕೆಮ್ಮಿನಂತೆ ಅಲ್ಲ. ಇವು ದೀರ್ಘಕಾಲದಲ್ಲಿ ನಿಧಾನವಾಗಿ ಬೆಳೆದು, ವ್ಯಕ್ತಿಯ ಮಾನಸಿಕ ಶಕ್ತಿಯನ್ನು ನಾಶಮಾಡಬಲ್ಲ ಗಂಭೀರ ಸ್ವರೂಪದ ಕಾಯಿಲೆಗಳು. ಆರಂಭಿಕ ಹಂತದಲ್ಲಿಯೇ ಇವುಗಳ ಬಗ್ಗೆ ತಿಳಿಯುವುದರಿಂದ ಸಮಸ್ಯೆಯ ತೀವ್ರತೆಯನ್ನು ತಗ್ಗಿಸಬಹುದು.

ವಯಸ್ಸು ಹೆಚ್ಚಾಗುತ್ತಿದ್ದಂತೆ ನಾವು ಹಲವು ಬದಲಾವಣೆಗಳನ್ನು ನಮ್ಮ ದೇಹದಲ್ಲಿ ಮತ್ತು ಮನಸ್ಸಿನಲ್ಲಿ ಕಾಣುತ್ತೇವೆ. ಚರ್ಮ ಸುಕ್ಕುಗಟ್ಟುತ್ತದೆ, ದೇಹದ ಬಲ ಕುಗ್ಗುತ್ತದೆ, ಕಣ್ಣಿನ ದೃಷ್ಟಿ ಹಾಗೂ ಕಿವಿಯ ಗ್ರಹಣಶಕ್ತಿ ಕಡಿಮೆಯಾಗುತ್ತವೆ. ಇದೇ ರೀತಿ ಬುದ್ಧಿಶಕ್ತಿ ಕೂಡ ನಿಧಾನವಾಗಿ ಕುಗ್ಗ-ತೊಡಗುತ್ತದೆ. ಹೀಗೆಯೇ 'ಮರೆಯುವುವಿಕೆ' ಎಂಬುದು ಸಹಜ ನೈಸರ್ಗಿಕ ಕ್ರಿಯೆ.

ಮರೆವಿಕೆಯು ನಮ್ಮ ದೈನಂದಿನ ಕೆಲಸಗಳಲ್ಲಿ ತೊಂದರೆ ತರಲಾರಂಭಿಸಿದರೆ? ಆಗ ಅದು ಒಂದು ಕಾಯಿಲೆಯ ರೂಪ ತಾಳಬಹುದು. 60 ಅಥವಾ 70ರ ನಂತರ, 'ಅರಳು–ಮರುಳು' ಎನ್ನುತ್ತೇವೆ. ಮರೆವಿಗೆ ಸಂಬಂಧಿಸಿದ ಕಾಯಿಲೆಗಳು ತಕ್ಷಣವೇ ಬಂದು ಹೋಗುವ ಜ್ವರ ಅಥವಾ ಕೆಮ್ಮಿನಂತೆ ಅಲ್ಲ. ಇವು ದೀರ್ಘಕಾಲದಲ್ಲಿ ನಿಧಾನವಾಗಿ ಬೆಳೆಯುತ್ತವೆ ಹಾಗೂ ಮಾನಸಿಕ ಶಕ್ತಿಯನ್ನು ನಾಶಮಾಡಬಲ್ಲ ಗಂಭೀರ ಕಾಯಿಲೆಗಳಾಗಿರುತ್ತವೆ.

ಇಂತಹ ಕಾಯಿಲೆಗೆ 'ಡಿಮೆನ್ಷಿಯಾ' (Dementia) ಎಂದು ಹೆಸರು. ಉದಾಹರಣೆಗೆ, ಅಲ್ಝೀಮರ್ಸ್. ಡಿಮೆನ್ಷಿಯಾದಂತಹ ದೀರ್ಘಕಾಯಿಲೆಯ ಮೊದಲ ಹಂತ 'ಮೈಲ್ಡ್ ಕಾಗ್ನಿಟೀವ್ ಇಂಪೇರ್‌ಮೆಂಟ್' (Mild Cognitive Impairment - MCI). ಇದು ವಯೋಸಹಜ ಮರೆವಿನ ಸಮಸ್ಯೆಯಿಂದ ಕಾಯಿಲೆಯ ಹಂತಕ್ಕೆ ಬದಲಾಗುವ ಮಧ್ಯದ ಹಂತ. ಸಾಮಾನ್ಯ ಮರೆವಿನಿಂದ ಡಿಮೆನ್ಷಿಯಾವರೆಗೆ ಸಾಗುವ ಮಾರ್ಗದ ಆರಂಭಿಕ ಸೂಚನೆ ಇದಾಗಿರಬಹುದು.

2024ರಲ್ಲಿ ನಡೆದ ಅಧ್ಯಯನ ಪ್ರಕಾರ, 60 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ವ್ಯಕ್ತಿಗಳಲ್ಲಿ 'ಎಂಸಿಐ' (MCI) ವ್ಯಾಪ್ತಿ ಶೇ. 17.6ರಷ್ಟು. ಭಾರತದಲ್ಲಿ ವಯೋವೃದ್ಧಿಯ ಪ್ರಮಾಣ ಹೆಚ್ಚುತ್ತಿರುವುದರಿಂದ, 'ಎಂಸಿಐ' ಮತ್ತು ಡಿಮೆನ್ಷಿಯಾ ರೋಗಿಗಳ ಸಂಖ್ಯೆ ಮುಂದಿನ ದಶಕಗಳಲ್ಲಿ ಹೆಚ್ಚಾಗುವ ಸಾಧ್ಯತೆಯಿದೆ. 'ಎಂಸಿಐ' ಇರುವವರು ಸಾಮಾನ್ಯವಾಗಿ ತಮ್ಮ ಸ್ಮರಣಶಕ್ತಿಯಲ್ಲಿ ಬದಲಾವಣೆಗಳನ್ನು ಗಮನಿಸುತ್ತಾರೆ; ಇನ್ನೂ ತಮ್ಮ ಸ್ವಂತ ಕೆಲಸಗಳನ್ನು ನಿರ್ವಹಿಸಬಲ್ಲ ಸ್ಥಿತಿಯಲ್ಲಿರುತ್ತಾರೆ. ಜೊತೆಗೆ ಸಂಬಂಧಿಕರು ಅಥವಾ ಮನೆಯವರು ಈ ಬದಲಾವಣೆಗಳನ್ನು ಗಮನಿಸಬಹುದಾಗಿದೆ. ಕೆಲವೊಮ್ಮೆ ದಿನಚರಿಯ ಕೆಲವೊಂದು ಕಠಿಣ ಕೆಲಸಗಳಲ್ಲಿ ತೊಂದರೆ ಉಂಟಾಗಬಹುದು. 'ಎಂಸಿಐ' ಸಹಜ ಮರೆವಿಗಿಂತ ಹೆಚ್ಚು, ಆದರೆ ಡಿಮೆನ್ಷಿಯಾ ಅಥವಾ ಅಲ್ಝೀಮರ್ಸ್‌ಗಿಂತ ಕಡಿಮೆ ಪ್ರಭಾವ ಬೀರುತ್ತದೆ. 'ಎಂಸಿಐ' ಪೀಡಿತರು ಶೇ 15-20ರಷ್ಟು ಮುಂದಿನ ಹಂತದಲ್ಲಿ ಡಿಮೆನ್ಷಿಯಾ ಕಾಯಿಲೆಗೆ ಒಳಗಾಗುವ ಸಾಧ್ಯತೆ ಇದೆ. ಇದು ಎರಡು ಪ್ರಕಾರಗಳಾಗಿರಬಹುದು – 'ಅಮ್ನೆಸ್ಟಿಕ್ ಎಂಸಿಐ' (ಸ್ಮರಣಶಕ್ತಿ ಸಂಬಂಧಿತ), 'ನಾನ್-ಅಮ್ನೆಸ್ಟಿಕ್ ಎಂಸಿಐ' (ಇತರ ಬುದ್ಧಿಮತ್ತೆಯ ಕಾರ್ಯಗಳಿಗೆ ಸಂಬಂಧಿತ).

'ಎಂಸಿಐ'ಗೆ ನಿಖರವಾದ ಕಾರಣಗಳು ಇತ್ತೀಚಿನವರೆಗೆ ಸಂಶೋಧನೆಯಿಂದ ಸ್ಥಿರಗೊಂಡಿಲ್ಲ. ಕುಟುಂಬದಲ್ಲಿ ಮರೆವಿನ ತೊಂದರೆಗಳ ಇತಿಹಾಸವಿದ್ದರೆ ಇದು ಅಪಾಯಕಾರಿಯಾದ ಸೂಚನೆ ಆಗಬಹುದು. ದೀರ್ಘಕಾಲೀನ ದೇಹದ ತೊಂದರೆಗಳು (ಉದಾ: ರಕ್ತದೊತ್ತಡ ಸಮಸ್ಯೆ, ಹೃದಯಕಾಯಿಲೆಗಳು, ಕೊಲೆಸ್ಟ್ರಾಲ್, ಉಸಿರಾಟದ ತೊಂದರೆ, ಮಧುಮೇಹ), ಹಲವಾರು ಔಷಧಗಳ (ನಿದ್ರಾಜನಕ, ಅಲರ್ಜಿಯ, ಮಲಬದ್ಧತೆ ಔಷಧಗಳು) ಅತಿಯಾದ ಸೇವನೆ, ಮಾನಸಿಕ ತೊಂದರೆಗಳು , ಹಾರ್ಮೋನಲ್ ತೊಂದರೆಗಳು ಮತ್ತು ಪೋಷಕಾಂಶ ಕೊರತೆ (ವಿಟಮಿನ್12), ಪಾರ್ಕಿನ್ಸನ್ಸ್, ಮುಂತಾದವು ಪ್ರಭಾವವನ್ನು ಬೀರಬಹುದು. ಜೀವನಶೈಲಿಯೂ ಪ್ರಮುಖ ಕಾರಣವಾಗಬಹುದು. ಕೆಲವೊಮ್ಮೆ ವಿಟಮಿನ್ 12 ಕೊರತೆ, ನಿದ್ರೆಹೀನತೆ, ಖಿನ್ನತೆ, ತೀವ್ರ ಒತ್ತಡಗಳೂ 'ಎಂಸಿಐ'ಗೆ ಹೋಲುವ ಲಕ್ಷಣಗಳನ್ನು ತೋರಿಸಬಹುದು. ಆದರೆ ಅವುಗಳು ಚಿಕಿತ್ಸೆಯ ಮೂಲಕ ಮಿದುಳಿನ ಕಾರ್ಯಕ್ಷಮತೆ ಪುನಃ ಸುಧಾರಿಸಬಹುದು.

'ಎಂಸಿಐ'ಯನ್ನು ಪತ್ತೆ ಮಾಡುವುದರಲ್ಲಿ ಯಾವುದೇ ನಿರ್ದಿಷ್ಟ ಲ್ಯಾಬ್ ಪರೀಕ್ಷೆ ಅಥವಾ ಸ್ಕ್ಯಾನಿಂಗ್ ಮೂಲಕ ಖಚಿತಪಡಿಸಲು ಸಾಧ್ಯವಿಲ್ಲ. ಇದು ಸಂಪೂರ್ಣವಾಗಿ ವೈದ್ಯಕೀಯ ಅಧ್ಯಯನದ ಮೇಲೆ ಆಧಾರಿತವಾಗಿರುತ್ತದೆ. 'ಎಂಸಿಐ'ಗೆ ಯಾವುದೇ ಸ್ಪಷ್ಟವಾದ ಔಷಧ ಇಲ್ಲದಿದ್ದರೂ, ಕೆಲವೊಂದು ಔಷಧಗಳು ಇತರ ಸಂಬಂಧಿತ ಲಕ್ಷಣಗಳನ್ನು ತಡೆಹಿಡಿಯಲು ಉಪ ಯುಕ್ತವಾಗ-ಬಹುದು. 'ಎಂಸಿಐ'ಗೆ ಕಾರಣವಾಗುವ ಅಂಶಗಳನ್ನು ಗುರುತಿಸಿ ಚಿಕಿತ್ಸೆ ನೀಡುವುದು ಮುಖ್ಯ. ಉದಾ: ನಿದ್ರಾಸಮಸ್ಯೆ, ಖಿನ್ನತೆ, ಹಾರ್ಮೋನುಗಳ ಏರಿಳಿತ, ವಿಟಮಿನ್ ಕೊರತೆ, ಔಷಧಿಗಳ ಅತಿಸೇವನೆ. ನಿಯಮಿತ ವ್ಯಾಯಾಮ, ಸಾಮಾಜಿಕ ಚಟುವಟಿ-ಕೆಗಳಲ್ಲಿ ಪಾಲ್ಗೊಳ್ಳುವುದು, ಮಿದುಳಿನ ತರಬೇತಿ (ಮೆಮೊರಿ ಗೇಮ್‌ಗಳು), ಧ್ಯಾನ ಮತ್ತು ಯೋಗ – ಇವೆಲ್ಲವು ದೀರ್ಘಾವಧಿ-ಯಲ್ಲಿ ಮಿದುಳಿಗೆ ಬಲವನ್ನು ನೀಡುತ್ತವೆ.

ಆಯುರ್ವೇದದಲ್ಲಿ, ಎಂಟು ವಿಭಾಗಗಳಲ್ಲಿ 'ಜರಾಚಿಕಿತ್ಸೆ' (ರಸಾಯನ ಚಿಕಿತ್ಸೆ) ಒಂದು ಪ್ರಮುಖ ವಿಭಾಗ. ಇದು ವಯೋ-ವೃದ್ಧಿಯನ್ನು ತಡೆಹಿಡಿಯಲು ಮತ್ತು ದೈಹಿಕ-ಮಾನಸಿಕ ಶಕ್ತಿಯನ್ನು ಪುನರುಜ್ಜೀವನಗೊಳಿಸಲು ಬಳಸುವ ಪ್ರಮುಖ ವಿಧಾನವಾಗಿದೆ. ರಸಾಯನಪ್ರಯೋಗವು ಒಂದು ವಿಶಿಷ್ಟ ಆಯುರ್ವೇದ ಔಷಧ ಚಿಕಿತ್ಸೆಯ ಭಾಗವಾಗಿದೆ. ಆಯುರ್ವೇದದ ಪ್ರಕಾರ ಶುದ್ಧ ಮನಸ್ಸು, ಇಂದ್ರಿಯ ನಿಯಂತ್ರಣ, ಸಾತ್ವಿಕ ಆಹಾರ ಇವು ಜ್ಞಾನ ಶಕ್ತಿ ಮತ್ತು ಸ್ಮರಣಶಕ್ತಿಗೆ ಮೂಲ. ಈ ರೀತಿಯ ಮಿದುಳಿನ ಕಾಯಿಲೆಗಳಿಗೆ ವಿಶೇಷವಾಗಿ ಮೇಧ್ಯ ರಸಾಯನಗಳು ಪರಿಣಾಮಕಾರಿ ಎಂದು ಕಂಡುಬಂದಿದೆ. ವಿಶೇಷವಾಗಿ ಮಂಡೂಕಪರ್ಣಿ, ಬ್ರಾಹ್ಮಿ, ಶಂಖಪುಷ್ಪಿ ಮುಂತಾದವುಗಳ ಉಪಯೋಗವು ಮಿದುಳಿನ ಶಕ್ತಿಯ ಪುನರ್ ನಿರ್ಮಾಣಕ್ಕೆ ಸಹಕಾರಿ. ❖

ತಲೆನೋವಿಗೆ ಹತ್ತಾರು ತಲೆಗಳು



• ಡಾ. ಕವಿತಾ ಬಿ. ಎಸ್.

ತಲೆನೋವಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಚರಕ-ಸುಶ್ರುತರ ಕಾಲದಲ್ಲಿಯೇ ಅನೇಕ ವಿಧವಾದ ತಲೆನೋವುಗಳನ್ನು ಉಲ್ಲೇಖಿಸಿ ಅವುಗಳಿಗೆ ಚಿಕಿತ್ಸಾ ಕ್ರಮಗಳನ್ನೂ ಹೇಳಲಾಗಿದೆ. ಆಯುರ್ವೇದದಲ್ಲಿ ತಲೆನೋವನ್ನು 'ಶಿರಶೂಲ', 'ಶಿರೋರೋಗ', 'ಶಿರೋರುಕ್' ಎಂದು ಹೇಳಲಾಗಿದೆ. ತಲೆನೋವಿಗೆ ವಾತ, ಪಿತ್ತ, ಕಫ ಹಾಗೂ ರಕ್ತದೋಷಗಳೇ ಕಾರಣ.

ವಾತಜ ಶಿರೋರೋಗ: ವಾತದೋಷವು ಕೆರಳುವುದರಿಂದ ಉಂಟಾಗುವ ಇದರ ಲಕ್ಷಣಗಳೆಂದರೆ, ಕಾರಣವಿಲ್ಲದೆ ತೀವ್ರವಾದ ತಲೆನೋವು, ರಾತ್ರಿಯ ಸಮಯದಲ್ಲಿ ನೋವು ಹೆಚ್ಚಾಗುತ್ತದೆ.

ಪಿತ್ತಜ ಶಿರೋರೋಗ: ಪಿತ್ತದೋಷವು ಉಲ್ಬಣಗೊಳ್ಳುವುದರಿಂದ ಹಾಗೂ ಕಲುಷಿತಗೊಳ್ಳುವ ಪಿತ್ತ ಇದಕ್ಕೆ ಕಾರಣ.

ರಕ್ತಜ ಶಿರೋರೋಗ: ರಕ್ತದೋಷ ಹಾಗೂ ಪಿತ್ತದೋಷಗಳು ಕಾರಣ. ತಲೆಯನ್ನು ಸ್ಪರ್ಶಿಸುವುದು ಕೂಡ ಸಹಿಸಲು ಆಗದಷ್ಟು ತಲೆನೋವು ಇದರ ಲಕ್ಷಣ.

ಕಫಜ ಶಿರೋರೋಗ: ಕಫದ ದೋಷದ ಕೆರಳುವಿಕೆಯಿಂದ ಉಂಟಾಗುವ ಈ ತಲೆನೋವಿನಲ್ಲಿ ತಲೆಯು ಭಾರವಾಗುವಿಕೆ, ಕಫಾವೃತದ ಅನುಭವ, ಶೀತ, ಕಣ್ಣಿನ ಸುತ್ತ ಊತ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಸನ್ನಿಪಾತಜ ಶಿರೋರೋಗ: ತ್ರಿದೋಷಗಳ ಕೆರಳುವಿಕೆಯಿಂದ ಹಾಗೂ ಕಲುಷಿತಗೊಳ್ಳುವ ದೋಷಗಳಿಂದ ಉಂಟಾಗುತ್ತದೆ. ಮೇಲಿನ ಮೂರೂ ದೋಷಗಳಿಂದಾಗುವ ಎಲ್ಲ ಗುಣಲಕ್ಷಣಗಳನ್ನೂ ಹೊಂದಿರುತ್ತದೆ.

ರಕ್ತಜ ಶಿರೋರೋಗ: ರಕ್ತದೋಷ ಹಾಗೂ ಪಿತ್ತದ ಕಾರಣದಿಂದ ಬರುತ್ತದೆ. ಜೊತೆಗೆ ಪಿತ್ತಜ ರೋಗದ ಲಕ್ಷಣಗಳನ್ನು ಹೊಂದಿರುತ್ತದೆ.

ಕ್ಷಯಜ ಶಿರೋರೋಗ: ಸಾಮಾನ್ಯ ಪ್ರಮಾಣದಲ್ಲಿ ಇರಬೇಕಾದ ರಕ್ತ, ಮಾಂಸ, ಕಫ ಮತ್ತು ವಾತವು ಶಿರೋಭಾಗದಲ್ಲಿ ಅಗತ್ಯಕ್ಕಿಂತ ಕಡಿಮೆಯಾಗುವುದರಿಂದ ತೀವ್ರವಾದ ತಲೆನೋವು ಶಿರೋಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಇದನ್ನು ನಿವಾರಣೆ ಮಾಡುವುದು ತುಂಬಾ ಕಷ್ಟ. ಈ ನೋವು ಬಂದಾಗ ರೋಗಿಯು ತೀವ್ರವಾದ ತಲೆಬಿಸಿಯಾಗುವಿಕೆಯನ್ನು ಅನುಭವಿಸುತ್ತಾನೆ; ಕಣ್ಣು ಮತ್ತು ಮೂಗಿನಿಂದ ಹೊಗೆಯು ಬರುತ್ತಿರುವಂತಹ ಅನುಭವವಾಗುತ್ತದೆ.

ಕ್ರಿಮಿಜ ಶಿರೋರೋಗ: ಸೂಕ್ಷ್ಮಜೀವಿಗಳ ಸೋಂಕಿನಿಂದ ಇದು ಉಂಟಾಗುತ್ತದೆ. ಅತ್ಯಂತ ತೀವ್ರವಾದ ಹಾಗೂ ಚುಚ್ಚುವಂತಹ ತಲೆನೋವು, ತಲೆಯನ್ನು ಒಳಗಿನಿಂದ ಕೊರೆಯುತ್ತಿರುವಂತಹ ಅನುಭವ, ತಲೆಯಲ್ಲಿ ನಾಡಿಬಡಿತ ಹೆಚ್ಚಾದಂತೆ ಅನ್ನಿಸತೊಡಗಿ ಕಫಮಿಶ್ರಿತವಾದ ಮೂಗು ಸೋರುವಿಕೆ ಕಂಡುಬರುತ್ತದೆ.

ಸೂರ್ಯಾವರ್ತ ಶಿರೋರೋಗ: ಶಿರೋಭಾಗದಲ್ಲಿ ಸಂಗ್ರಹವಾಗುವ ಕಫವು ವಾತಾವರಣದ ಶಾಖಕ್ಕೆ ದ್ರವೀಕರಣಗೊಂಡು ಹರಿಯಲು ಪ್ರಾರಂಭಿಸುವುದರಿಂದ ಈ ರೀತಿಯ ತಲೆನೋವು ಬರುತ್ತದೆ. ಮುಖ್ಯವಾಗಿ ಸೂರ್ಯೋದಯವಾಗುವಾಗ ಪ್ರಾರಂಭವಾಗುವ ತಲೆನೋವಿನ ತಾಪವು ತೀವ್ರಗೊಳ್ಳುತ್ತಾ ಹೋಗಿ ಕೊನೆಗೆ ಸೂರ್ಯಾಸ್ತವಾಗುವಾಗ ಕಡಿಮೆಯಾಗುತ್ತದೆ.

ಅನಂತಾವರ್ತ: ತ್ರಿದೋಷಗಳು ಉಲ್ಬಣಾವಸ್ಥೆಯನ್ನು ತಲುಪಿದಾಗ ಹಾಗೂ ಕುಪಿತಗೊಂಡಾಗ ಉಂಟಾಗುವ ಈ ನೋವು ಸಾಮಾನ್ಯವಾಗಿ ಕತ್ತಿನ ಹಿಂಭಾಗದಲ್ಲಿ ಕಂಡುಬರುತ್ತದೆ. ಇದು ನಿಧಾನವಾಗಿ ಕಣ್ಣುಗಳು, ಹುಬ್ಬು ಹಾಗೂ ಕೆನ್ನೆಯ ಭಾಗದಲ್ಲಿ ಹರಡಿಕೊಂಡು, ಎದೆಬಡಿತದಂತಹ ನೋವನ್ನು ಉಂಟುಮಾಡುತ್ತದೆ.

ಅರ್ಧಾವಭೇದಕ ಶಿರೋರೋಗ: ಅತಿಯಾದ ಒಣ ಆಹಾರವನ್ನು ತಿನ್ನುವುದರಿಂದ, ಪದೇಪದೇ ಆಹಾರ ತಿನ್ನುವುದರಿಂದ, ಈ ಮೊದಲು ತಿಂದ ಆಹಾರವು ಪೂರ್ತಿಯಾಗಿ ಜೀರ್ಣವಾಗುವ ಮೊದಲೇ ಮತ್ತೆ ಆಹಾರ ತಿನ್ನುವುದರಿಂದ, ಹಿಮಪಾತ ಮತ್ತು ಕೊರೆವ ಚಳಿಗೆ ಮೈಯೊಡ್ಡುವುದು, ಅತಿಯಾದ ಮೈಥುನ ಮತ್ತು ದೈಹಿಕ ವ್ಯಾಯಾಮ, ಮಲಮೂತ್ರಗಳ ವಿಸರ್ಜನೆಗಳನ್ನು ಬಲವಂತವಾಗಿ ತಡೆಹಿಡಿಯುವುದು ಮೊದಲಾದ ಕಾರಣಗಳಿಂದ ಈ ತಲೆನೋವು ಕಾಣಿಸಿಕೊಳ್ಳುತ್ತದೆ. ಅತಿಯಾದ ವಾತದೋಷದ ಹೆಚ್ಚಳದಿಂದಾಗಿ ಶಿರೋಭಾಗದ ಎಡ ಮತ್ತು ಬಲಭಾಗದಲ್ಲಿ ತೀವ್ರವಾದ ನೋವಿರುತ್ತದೆ.

ಶಂಖಕ: ಉಲ್ಬಣಗೊಂಡ ಮತ್ತು ಕುಪಿತಗೊಂಡ ರಕ್ತ, ಪಿತ್ತ ಮತ್ತು ವಾತದಿಂದಾಗಿ ತಲೆಯಲ್ಲಿ ಜುಮ್ಮೆನಿಸುವ ನೋವು ಕಾಣಿಸಿಕೊಳ್ಳುತ್ತದೆ. ಕಣ್ಣಿನ ಪಕ್ಕ ಹಾಗೂ ಕಿವಿಗಳ ಮೇಲ್ಭಾಗದಲ್ಲಿ ಅತಿಯಾದ ನೋವು ಹಾಗೂ ಉರಿಯೂತದಿಂದ ಕೂಡಿರುತ್ತದೆ. ಇದರ ತೀವ್ರತೆಯು ಕತ್ತು ಮತ್ತು ತಲೆಯ ಭಾಗದಲ್ಲಿ ವಿಷದಂತೆ ತೀಕ್ಷ್ಣವಾಗಿ ಹರಡಿ ಮೂರೇ ದಿನಗಳಲ್ಲಿ ರೋಗಿಯ ಪ್ರಾಣಕ್ಕೇ ಅಪಾಯವನ್ನು ಒಡ್ಡಬಹುದು. ಇವುಗಳೊಂದಿಗೆ ಆಧುನಿಕ ಜೀವನಶೈಲಿ, ಕೆಲಸದ ಒತ್ತಡ, ಅತಿಯಾದ ಹುಳಿಪದಾರ್ಥ ಮತ್ತು ಎಣ್ಣೆಯಲ್ಲಿ ಕರಿದ ಪದಾರ್ಥಗಳ ಸೇವನೆ, ಅನಿಯಮಿತ ಆಹಾರಸೇವನೆ, ಜೀರ್ಣವಾಗುವ ಮೊದಲೇ ಮತ್ತೆ ಮತ್ತೆ ಆಹಾರಸೇವನೆ, ಮಲಮೂತ್ರಗಳ ವಿಸರ್ಜನೆಗಳನ್ನು ಬಲವಂತವಾಗಿ ತಡೆಹಿಡಿಯುವಿಕೆ, ಬಳಲುವಿಕೆ–ಇವು ಅನೇಕ ಬಗೆಯ ತಲೆನೋವಿಗೆ ಕಾರಣಗಳಾಗಿವೆ. ❖

ಚಿಕಿತ್ಸಾ ಕ್ರಮಗಳು

ನಿದಾನ ಪರಿವರ್ಜನ ಕ್ರಮ: ತಲೆನೋವಿಗೆ ಕಾರಣಗ-ಳಾಗಿರುವ ಜೀವನಶೈಲಿ ಮತ್ತು ಆಹಾರಕ್ರಮಗಳನ್ನು ತ್ಯಜಿಸುವುದು, ನಿದ್ರಾಹೀನತೆ ಮತ್ತು ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳುವುದು.

ಸಂಶೋಧನಾ ಚಿಕಿತ್ಸೆಗಳು: ನಶ್ಯ, ಶಿರೋವಿರೇಚನ, ವಿರೇಚನ, ಬಸ್ತಿ, ರಕ್ತಮೋಕ್ಷಣಗಳಂತಹ ಕ್ರಮಗಳು ತಲೆನೋವಿಗೆ ಪರಿಹಾರಗಳಾಗಿವೆ.

ಸಂಶಮನ ಚಿಕಿತ್ಸಾ ಕ್ರಮ: ಸ್ನೇಹ, ಸ್ವೇದನ, ಉಪನಾಹ, ಧೂಮಪಾನ ಲೇಪ ಮೊದಲಾದ ಕ್ರಮಗಳಿಂದ ಪರಿಹಾರ.

ಯೋಗ–ಪ್ರಾಣಾಯಾಮ: ಪ್ರಾಣಾಯಾಮ, ಯೋಗ ಮತ್ತು ಧ್ಯಾನಗಳಿಂದ ಮಾನಸಿಕ ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳುವುದು.

ಔಷಧಗಳ ಸೇವನೆ: ಶಿರಶೂಲ ವಜ್ರರಸ, ಲಕ್ಷ್ಮಿವಿಲಾಸ ರಸ, ಕಾಮದುಗಾರಸ ಮೊದಲಾದ ಔಷಧಗಳನ್ನು ವೈದ್ಯರ ಸಲಹೆಯೊಂದಿಗೆ ನಿಯಮಿತವಾಗಿ ಸೇವಿಸುವುದರಿಂದ ತಲೆನೋವಿಗೆ ಪರಿಹಾರವನ್ನು ಪಡೆಯಬಹುದು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

3) ಎರಡಂಕೆಗಳ ಒಂದು ಸಂಖ್ಯೆಗೆ ಅದರ ಅಂಕೆಗಳನ್ನು ಪರಸ್ಪರ ಬದಲಾಯಿಸಿದಾಗ ಸಿಗುವ ಇನ್ನೊಂದು ಸಂಖ್ಯೆಯನ್ನು ಕೂಡಿದಾಗ ದೊರೆಯುವ ಮೊತ್ತ 66. ಆ ಸಂಖ್ಯೆಗಳ ಅಂಕೆಗಳಿಗಿರುವ ವ್ಯತ್ಯಾಸವು 2 ಆಗಿದ್ದರೆ, ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ. ಇಂತಹ ಎಷ್ಟು ಸಂಖ್ಯೆಗಳಿವೆ?

ಪರಿಹಾರ: (ಹಿಂದಿನ ಸಂಚಿಕೆಯಿಂದ)

$x - y = 2$ ಆದರೆ, (1) ಮತ್ತು (2) ನ್ನು ವರ್ಜಿಸುವ ವಿಧಾನದಿಂದ ಬಿಡಿಸಿದಾಗ $x = 4,\ y = 2$ ಎಂದು ಸಿಗುತ್ತದೆ.

ಈ ಪ್ರಕರಣದಲ್ಲಿ, ಸಿಗುವ ಸಂಖ್ಯೆಯು 42.

$y - x = 2$ ಆದರೆ (1) ಮತ್ತು (2) ನ್ನು ವರ್ಜಿಸುವ ವಿಧಾನದಿಂದ ಬಿಡಿಸಿದಾಗ $x = 2,\ y = 4$ ಎಂದು ಸಿಗುತ್ತದೆ.

ಈ ಪ್ರಕರಣದಲ್ಲಿ, ಸಿಗುವ ಸಂಖ್ಯೆಯು 24.

ಹೀಗೆ, ಇಂತಹ ಎರಡು ಸಂಖ್ಯೆಗಳಿವೆ 42 ಮತ್ತು 24

ಅಭ್ಯಾಸ 3.3

1. ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ವರ್ಜಿಸುವ ವಿಧಾನ ಮತ್ತು ಆದೇಶ ವಿಧಾನಗಳಿಂದ ಬಿಡಿಸಿರಿ.

(i) $x + y = 5$ ಮತ್ತು $2x - 3y = 4$

(ii) $3x + 4y = 10$ ಮತ್ತು $2x - 2y = 2$

(iii) $3x - 5y - 4 = 0$ ಮತ್ತು $9x = 2y + 7$

(iv) $\frac{x}{2} + \frac{2y}{3} = -1$ and $x - \frac{y}{3} = 3$

ಪರಿಹಾರ: (i) $x + y = 5$ ಮತ್ತು $2x - 3y = 4$

ವರ್ಜಿಸುವ ವಿಧಾನ

$x + y = 5$ .... (i)
$2x - 3y = 4$ ....(ii)

ಸಮೀಕರಣ (1)ನ್ನು 2 ರಿಂದ ಗುಣಿಸಿದಾಗ ಪಡೆಯುತ್ತೇವೆ

$2x + 2y = 10$......................(iii)

ಸಮೀಕರಣ (2)ನ್ನು ಸಮೀಕರಣ (3)ರಿಂದ ಕಳೆದಾಗ, ನಾವು ಕೆಳಗಿನದನ್ನು ಪಡೆಯುತ್ತೇವೆ

$5y = 6$
$y = 6/5$ ....(iv)

yನ ಈ ಬೆಲೆಯನ್ನು ಸಮೀಕರಣ (1)ರಲ್ಲಿ ಆದೇಶಿಸಿದಾಗ

$x = 5 - 6/5 = 19/5$
$\therefore x = 19/5,\ y = 6/5$

ಆದೇಶ ವಿಧಾನ

ಸಮೀಕರಣ (1)ರಿಂದ ನಾವು ಕೆಳಗಿನದನ್ನು ಪಡೆಯುತ್ತೇವೆ

$x = 5 - y$........ (v)

ಸಮೀಕರಣ (2)ರಲ್ಲಿ ಮೌಲ್ಯ $x = 5 - y$ ಹಾಕಿದಾಗ

$2(5 - y) - 3y = 4$
$-5y = -6$
$y = 6/5$

ಸಮೀಕರಣ (5)ರಲ್ಲಿ ಮೌಲ್ಯ $y = 6/5$ ಹಾಕಿದಾಗ

$x = 5 - 6/5 = 19/5$
$\therefore x = 19/5,\ y = 6/5$

(ii) $3x + 4y = 10$ ಮತ್ತು $2x - 2y = 2$

ವರ್ಜಿಸುವ ವಿಧಾನ

$3x + 4y = 10$..........................(i)
$2x - 2y = 2$ .... (ii)

ಸಮೀಕರಣ ಸಮೀಕರಣ(2) ಅನ್ನು 2ರಿಂದ ಗುಣಿಸಿದಾಗ ಕೆಳಗಿನದ್ದನ್ನು ಪಡೆಯುತ್ತೇವೆ

: $4x - 4y = 4$ ....(iii)

ಸಮೀಕರಣ ಸಮೀಕರಣ(1) ಮತ್ತು ಸಮೀಕರಣ(3) ಅನ್ನು ಕೂಡಿದಾಗ, ಕೆಳಗಿನದ್ದನ್ನು ಪಡೆಯುತ್ತೇವೆ

$7x = 14$
$x = 2$ ....(iv)

ಸಮೀಕರಣ ಸಮೀಕರಣ(2)ಕ್ಕೆ ಸಮೀಕರಣ ಸಮೀಕರಣ(4)ರ ಬೆಲೆಯನ್ನು ಆದೇಶಿಸಿದಾಗ

$6 + 4y = 10$
$4y = 4$
$y = 1$

ಹೀಗಾಗಿ **$x = 2$ ಮತ್ತು $y = 1$**

ಆದೇಶ ವಿಧಾನ

$3x + 4y = 10$..........................(i)
$2x - 2y = 2$.. .... (ii)

ಸಮೀಕರಣ ಸಮೀಕರಣ(1)ಅನ್ನು ಬಿಡಿಸಿದಾಗ

$3x + 4y = 10$
$4y = 10 - 3x$
$y = (10 - 3x)/4$......................(iii)

ಸಮೀಕರಣ ಸಮೀಕರಣ(2)ರಲ್ಲಿ $y = (10 - 3x)/4$ ಮೌಲ್ಯವನ್ನು ಹಾಕಿದಾಗ ನಾವು ಕೆಳಗಿನದ್ದನ್ನು ಪಡೆಯುತ್ತೇವೆ

$$2x - 2y = 2$$
$$2x - 2\left(\frac{10 - 3x}{4}\right) = 2$$
$$\frac{4x - 10 - 3x}{2} = 2$$
$$7x - 10 = 4$$
$$7x = 4 + 10$$
$$x = \frac{14}{7}$$
$$x = 2$$

$x = 2$ ಈ ಬೆಲೆಯನ್ನು ಸಮೀಕರಣ (3)ರಲ್ಲಿ ಆದೇಶಿಸಿದಾಗ

$$y = \frac{10 - 3x2}{4}$$
$$y = \frac{10 - 6}{4}$$
$$y = \frac{4}{4}$$
$$y = 1$$
$$\therefore x = 2,\ y = 1$$

(iii) $3x - 5y - 4 = 0$ ಮತ್ತು $9x = 2y + 7$

ವರ್ಜಿಸುವ ವಿಧಾನ

$3x - 5y - 4 = 0$ .... (i)
$9x = 2y + 7$
$9x - 2y - 7 = 0$ ....(ii)

ಸಮೀಕರಣ (1)ನ್ನು 3ರಿಂದ ಗುಣಿಸಿದಾಗ ಕೆಳಗಿನದ್ದನ್ನು ಪಡೆಯುತ್ತೇವೆ

$9x - 15y - 12 = 0$ ... .(iii)

ಸಮೀಕರಣ (3)ನ್ನು ಸಮೀಕರಣ (2)ರಿಂದ ಕಳೆದಾಗ, ನಾವು ಕೆಳಗಿನದನ್ನು ಪಡೆಯುತ್ತೇವೆ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

DIFFERENTIABILITY

19) Differentiate $\frac{1}{\sqrt[3]{2x+3}}$ w.r.t 'x'

Soln :– Let $y = \frac{1}{\sqrt[3]{2x+3}} = (2x+3)^{-\frac{1}{3}}$

$$\frac{dy}{dx} = \frac{d}{dx}(2x+3)^{-\frac{1}{3}} = -\frac{1}{3}(2x+3)^{-\frac{1}{3}-1}.\frac{d}{dx}(2x+3)$$
$$= -\frac{1}{3(2x+3)^{\frac{4}{3}}} \times 2 = -\frac{2}{3\sqrt[3]{(2x+3)^4}}$$

20) Differentiate $\sin^n(ax)$ w.r.t 'x'.

Soln :– Let $y = \sin^n(ax)$

$$\frac{dy}{dx} = n\sin^{n-1}(ax).\frac{d}{dx}(\sin ax)$$
$$= n\sin^{n-1}(ax).\cos(ax)\frac{d}{dx}(ax)$$
$$= n\sin^{n-1}(ax).\cos(ax)a$$
$$\therefore \frac{dy}{dx} = na\sin^{n-1}(ax).\cos(ax)$$

21) Differentiate $\sqrt{\sin\sqrt{x}}$ w.r.t x

Soln :– Let $y = \sqrt{\sin\sqrt{x}}$

$$\frac{dy}{dx} = \frac{1}{2\sqrt{\sin\sqrt{x}}}\frac{d}{dx}(\sin\sqrt{x})$$
$$= \frac{1}{2\sqrt{\sin\sqrt{x}}}\cos\sqrt{x}\frac{d}{dx}(\sqrt{x})$$
$$= \frac{1}{2\sqrt{\sin\sqrt{x}}}\cos\sqrt{x}\frac{1}{2\sqrt{x}} = \frac{\cos\sqrt{x}}{4\sqrt{x}\sqrt{\sin\sqrt{x}}}$$

22) Differentiate $\log(\sin x).e^{\sqrt{x}}$ w.r.t x

Soln :– Let $y = \log(\sin x).e^{\sqrt{x}}$

$$\frac{dy}{dx} = \log(\sin x).e^{\sqrt{x}}\frac{d}{dx}(\sqrt{x}) + e^{\sqrt{x}}.\frac{1}{\sin x}.\frac{d}{dx}(\sin x)$$
$$= \log(\sin x).e^{\sqrt{x}}\frac{1}{2\sqrt{x}} + e^{\sqrt{x}}.\frac{1}{\sin x}.\cos x$$
$$\therefore \frac{dy}{dx} = e^{\sqrt{x}}\left[\frac{\log(\sin x)}{2\sqrt{x}} + \cot x\right]$$

23) Differentiate $\log_x(\log x)$ w.r.t. x.

Soln: - Let $y = \log_x(\log x)$

[Changing the base to e by $\log_b a = \frac{\log_e a}{\log_e b}$]

$$\therefore y = \frac{\log_e(\log x)}{\log_e x}$$

Using the quotient rule,

$$\frac{dy}{dx} = \frac{\log_e x.\frac{1}{\log x}.\frac{1}{x} - \log(\log x).\frac{1}{x}}{(\log_e x)^2}$$
$$\therefore \frac{dy}{dx} = \frac{\frac{1}{x}[1 - \log(\log x)]}{(\log_e x)^2}$$

24) If $y = \left(x + \sqrt{a^2 + x^2}\right)^n$;

Show that $(a^2 + x^2)y_1^2 = n^2y^2$

Soln :– Given that $y = \left(x + \sqrt{a^2 + x^2}\right)^n$ ....(1)

$$\frac{dy}{dx} = n\left(x + \sqrt{a^2 + x^2}\right)^{n-1}.\left(1 + \frac{1}{2\sqrt{a^2 + x^2}}.2x\right)$$
$$= n\left(x + \sqrt{a^2 + x^2}\right).\left(\frac{\sqrt{a^2 + x^2} + x}{\sqrt{a^2 + x^2}}\right)$$
$$= \frac{n\left(\sqrt{a^2 + x^2} + x\right)^n}{\sqrt{a^2 + x^2}} = \frac{ny}{\sqrt{a^2 + x^2}}$$

by using (1) we have, $\sqrt{a^2 + x^2}\,y_1 = ny$

Squaring both sides, we get

$(a^2 + x^2)(y_1^2) = n^2y^2$; hence proved.

25) If $y = \tan^{-1}\sqrt{\frac{1 - \cos x}{1 + \cos x}}$, find $\frac{d^2y}{dx^2}$.

Soln :– Given that $y = \tan^{-1}\sqrt{\frac{1 - \cos x}{1 + \cos x}}$

$$= \tan^{-1}\sqrt{\frac{2\sin^2(x/2)}{2\cos^2(x/2)}} = \tan^{-1}\sqrt{\tan^2(x/2)}$$
$$= \tan^{-1}(\tan x/2) = x/2$$
$$\Rightarrow \frac{dy}{dx} = \frac{d}{dx}\left(\frac{x}{2}\right) = \frac{1}{2};$$
$$\therefore \frac{d^2y}{dx^2} = \frac{d}{dx}\left(\frac{1}{2}\right) = 0$$

26) Differentiate $\sqrt{\frac{1 - \tan x}{1 + \tan x}}$ w.r.t x.

Soln :– Let $y = \sqrt{\frac{1 - \tan x}{1 + \tan x}}$

$$\frac{dy}{dx} = \frac{\left[\sqrt{1 + \tan x}.\frac{1}{2\sqrt{1 - \tan x}}.(-\sec^2 x) - \sqrt{1 - \tan x}.\frac{1}{2\sqrt{1 + \tan x}}.(\sec^2 x)\right]}{\left(\sqrt{1 + \tan x}\right)^2}$$
$$= \frac{(1 + \tan x)(-\sec^2 x) - (1 - \tan x)\sec^2 x}{2\sqrt{1 - \tan x}\,\sqrt{1 + \tan x}\,(1 + \tan x)}$$
$$= \frac{\sec^2(-1 - \tan x - 1 + \tan x)}{2\sqrt{1 - \tan x}\,(1 + \tan x)^{\frac{3}{2}}}$$
$$= \frac{-2\sec^2 x}{2\sqrt{1 - \tan x}\,(1 + \tan x)^{\frac{3}{2}}}$$
$$\therefore \frac{dy}{dx} = \frac{-2\sec^2 x}{2\sqrt{1 - \tan x}\,(1 + \tan x)^{\frac{3}{2}}}$$

27) If $y = \sqrt{\cos x + \sqrt{\cos x + \sqrt{\cos x + ... + \infty}}}$; $\frac{dy}{dx}$

Soln :–Given, $y = \sqrt{\cos x + \sqrt{\cos x + \sqrt{\cos x + ... + \infty}}}$

$y = \sqrt{\cos x + y}$

(Contd.....)

ಸಾವಿನ ಸಂಖ್ಯೆ ಕೊಂಚ ಇಳಿಕೆ

ರಸ್ತೆ ಅಪಘಾತ: ಬ್ಲಾಕ್ ಸ್ಪಾಟ್ ಗುರುತು, ಚಾಲರಿಗೆ ವಿಶೇಷ ತರಬೇತಿ

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ಬ್ಲಾಕ್ ಸ್ಪಾಟ್‌ಗಳ (ಹೆಚ್ಚು ಅಪಘಾತ ಸಂಭವಿಸುವ ಸ್ಥಳ) ಗುರುತು, ಬಿಎಂಟಿಸಿ ಚಾಲಕರಿಗೆ ವಿಶೇಷ ತರಬೇತಿ ಸೇರಿ ಹಲವು ಕ್ರಮಗಳನ್ನು ಕೈಗೊಂಡ ಪರಿಣಾಮ ರಸ್ತೆ ಅಪಘಾತ ಪ್ರಕರಣಗಳು ಕಡಿಮೆ ಆಗುತ್ತಿವೆ. ಜತೆಗೆ ಗಾಯಗೊಂಡವರು ಹಾಗೂ ಮೃತಪಟ್ಟವರ ಸಂಖ್ಯೆಯಲ್ಲಿಯೂ ಕೊಂಚ ಇಳಿಕೆಯಾಗಿದೆ.

ಅಂಕಿಅಂಶಗಳ ಪ್ರಕಾರ ಕೆಲ ವರ್ಷಗಳಿಂದ ನಗರದಲ್ಲಿ ಕಾರು ಮತ್ತು ದ್ವಿಚಕ್ರ ವಾಹನಗಳ ಸಂಖ್ಯೆ ದ್ವಿಗುಣಗೊಂಡಿದೆ. ನಗರದಲ್ಲಿ 25,72,486 ಕಾರುಗಳಿವೆ. ದೇಶದ ಇತರೆ ಮಹಾನಗರಗಳಿಗೆ ಹೋಲಿಸಿದರೆ ನಗರದಲ್ಲಿ ಜನಸಂಖ್ಯೆ ಮತ್ತು ವಾಹನಗಳ ನಡುವಿನ ಅನುಪಾತ ದಾಖಲೆ ಮಟ್ಟದಲ್ಲಿ ಏರಿಕೆಯಾಗಿದೆ. ಇದು ಸಂಚಾರಕ್ಕೆ ತೊಡಕಾಗಿದೆ.

ನಗರದಲ್ಲಿ ನಿತ್ಯ ಸರಾಸರಿ 2,300 ಹೊಸ ವಾಹನಗಳು ರಸ್ತೆಗಿಳಿಯುತ್ತಿವೆ. ಹೀಗಾಗಿ ವಾಹನಗಳ ಸಂಖ್ಯೆಯು 1.25 ಕೋಟಿಯ ಗಡಿ ದಾಟಿದೆ. ಈ ಪೈಕಿ ಶೇಕಡ 72ರಷ್ಟು ದ್ವಿಚಕ್ರ ವಾಹನಗಳಿವೆ. ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಪ್ರತಿದಿನ ಸಾವಿರಾರು ಪ್ರಕರಣಗಳು ದಾಖಲಾಗುತ್ತಿವೆ.

2022ರಲ್ಲಿ ಸಂಭವಿಸಿದ 3,822 ರಸ್ತೆ ಅಪಘಾತಗಳಲ್ಲಿ 772 ಜನರು ಮೃತಪಟ್ಟಿದ್ದರು. 2023ರಲ್ಲಿ 4,974 ಅಪಘಾತಗಳಾಗಿ 910 ಮಂದಿ ಸಾವಿಗೀಡಾಗಿದ್ದರು. 2024ರಲ್ಲಿ 4,351 ಅಪಘಾತಗಳಲ್ಲಿ 802 ಮಂದಿ ಮೃತಪಟ್ಟಿದ್ದರೆ, ಪ್ರಸ್ತುತ ವರ್ಷ ಜೂನ್‌ವರೆಗೆ ಸಂಭವಿಸಿದ ಅಪಘಾತಗಳಲ್ಲಿ 306 ಮಂದಿ ಅಸುನೀಗಿದ್ದಾರೆ.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ನೈಸ್ ರಸ್ತೆಯಲ್ಲಿ ಅತಿ ವೇಗದ ಸಂಚಾರಕ್ಕೆ ಕಡಿವಾಣ ಹಾಕಿದ ಪರಿಣಾಮ ಅಪಘಾತಗಳ ಪ್ರಮಾಣ ಕಡಿಮೆಯಾಗುತ್ತಿದೆ. ವಿಮಾನ ನಿಲ್ದಾಣ ರಸ್ತೆಯಲ್ಲಿ ವಿಪರೀತ ವಾಹನ ದಟ್ಟಣೆ ಹಾಗೂ ಅಪಘಾತಗಳು ಹೆಚ್ಚು ಸಂಭವಿಸುತ್ತಿದ್ದವು.

2023ರಲ್ಲಿ ಈ ರಸ್ತೆಯಲ್ಲಿ 322 ಅಪಘಾತಗಳು ಸಂಭವಿಸಿದ್ದು, ಹಲವರು ಪ್ರಾಣ ಕಳೆದುಕೊಂಡಿದ್ದರು.

‘ಅಪಘಾತಗಳಿಗೆ ಅತಿ ವೇಗವೇ ಕಾರಣ ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಹಾಗಾಗಿ, ಅಪಘಾತಗಳನ್ನು ನಿಯಂತ್ರಿಸುವ ಉದ್ದೇಶದಿಂದ ವಾಹನಗಳ ಗರಿಷ್ಠ ವೇಗವನ್ನು 80 ಕಿ.ಮೀ.ಗೆ ನಿಗದಿಪಡಿಸಲಾಗಿದೆ. ವೇಗಮಿತಿ ನಿಗದಿ ಬಳಿಕ ಅಪಘಾತಗಳ ಪ್ರಮಾಣ ಕಡಿಮೆಯಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದ್ದಾರೆ.

‘ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಕೃತಕ ಬುದ್ಧಿಮತ್ತೆ ಕ್ಯಾಮೆರಾ ಅಳವಡಿಕೆ, ಹೆಚ್ಚು ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತು ಮಾಡಿ, ಕ್ರಮ ಕೈಗೊಳ್ಳಲಾಗಿದೆ. ರಸ್ತೆ ನಿರ್ವಹಣೆ ಮಾಡುವ ಬಿಬಿಎಂಪಿ, ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜತೆಗೆ ಒಟ್ಟಿಗೆ ಕೆಲಸ ಮಾಡಿದ್ದರಿಂದ ಅಪಘಾತಗಳ ಸಂಖ್ಯೆ ಇಳಿಮುಖವಾಗಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

‘ಅಪಘಾತ ನಿಯಂತ್ರಿಸಲು ಹಲವು ಕ್ರಮಗಳನ್ನು ಕೈಗೊಂಡರೂ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗುತ್ತಲೇ ಇವೆ. ಅತಿ ವೇಗದ ಸಂಚಾರದಿಂದಲೇ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಸಂಚಾರ ನಿಯಮ ಕುರಿತು ಶಾಲಾ, ಕಾಲೇಜು ವಿದ್ಯಾರ್ಥಿಗಳು ಹಾಗೂ ನಾಗರಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ’ ಎಂದು ಹೇಳಿದರು.

> **ಅವಘಡಗಳಿಗೆ ಕಾರಣ ಅಧ್ಯಯನ ಮಾಡಿ, ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿದೆ. ದಂಡ ವಿಧಿಸುವುದು ಇಲಾಖೆ ಉದ್ದೇಶವಲ್ಲ, ಸಾರ್ವಜನಿಕರು ಸಂಚಾರ ನಿಯಮ ಪಾಲಿಸಬೇಕು**
> **ಕಾರ್ತಿಕ್‌ರೆಡ್ಡಿ,** ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್

ಚಾಲಕರಿಗೆ ವಿಶೇಷ ತರಬೇತಿ

ಬಿಎಂಟಿಸಿ ಬಸ್‌ಗಳಿಂದ ಸಂಭವಿಸುತ್ತಿರುವ ಅಪಘಾತಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ನಗರ ಸಂಚಾರ ಪೊಲೀಸ್ ವಿಭಾಗದ ವತಿಯಿಂದ ಚಾಲಕರು ಹಾಗೂ ನಿರ್ವಾಹಕರಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. ವರ್ಷದಿಂದ ತರಬೇತಿ ನೀಡುತ್ತಿದ್ದು, ಈವರೆಗೆ 10 ಸಾವಿರಕ್ಕೂ ಹೆಚ್ಚು ಮಂದಿಗೆ ತರಬೇತಿ ನೀಡಲಾಗಿದೆ. 12 ಸಾವಿರ ಸಿಬ್ಬಂದಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದರು.



ಪೀಣ್ಯದಲ್ಲಿ ಸಂಭವಿಸಿದ್ದ ರಸ್ತೆ ಅಪಘಾತದ ದೃಶ್ಯ

ವರ್ಷ	ಅಪಘಾತ	ತೀವ್ರವಾಗಿ ಗಾಯಗೊಂಡವರು	ಮೃತರು	ಗಾಯಗೊಂಡವರು
2022	3,822	752	772	3,189
2023	4,974	882	910	4,191
2024	4,351	780	802	3,685
2025 (ಜೂನ್‌ವರೆಗೆ)	2,279	389	306	2047



ಬನ್ನೇರುಘಟ್ಟದಲ್ಲಿ ರಾಮರಾಜ್ ಕಾಟನ್ ಕಂಪನಿಯ ಶೋರೂಂ ಅನ್ನು ಸಂಸ್ಥಾನ ಟ್ರಸ್ಟ್ ಅಧ್ಯಕ್ಷ ಗುರುಮೂರ್ತಿ ಗುರೂಜಿ ಉದ್ಘಾಟಿಸಿದರು. ಬಿಬಿಎಂಪಿ ಮಾಜಿ ಸದಸ್ಯರಾದ ಎ.ಎನ್.ಪುರುಷೋತ್ತಮ್, ಎ.ಎನ್.ಮುರುಳಿ, ಭಾಗ್ಯಲಕ್ಷ್ಮೀ ಮುರುಳಿ ಇದ್ದಾರೆ

ಕೆಪಿಎಸ್‌ಸಿ: ನೇಮಕಾತಿ ಪ್ರಕ್ರಿಯೆ ಮುಂದುವರಿಕೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ನೇಮಕಾತಿಯಲ್ಲಿ ಮೀಸಲಾತಿ ಜಾರಿಗೊಳಿಸಲು ನಿಯಮ ಉಲ್ಲಂಘನೆ ಮಾಡಲಾಗಿದೆ’ ಎಂದು 348 ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿ ಅಧಿಸೂಚನೆ ರದ್ದುಗೊಳಿಸಿದ್ದ ಕೆಎಟಿ ಆದೇಶವನ್ನು ಪ್ರಶ್ನಿಸಲಾದ ಮೇಲ್ಮನವಿ ವಿಚಾರಣೆ ನಡೆಸಿರುವ ಹೈಕೋರ್ಟ್, ನೇಮಕಾತಿ ಪ್ರಕ್ರಿಯೆ ಮುಂದುವರಿಕೆಗೆ ಸಮ್ಮತಿಸಿದೆ.

ಕಳೆದ ಮೇ 28ರಂದು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ನೀಡಿದ್ದ ಆದೇಶ ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ಹೊರಡಿಸಿದೆ.

ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಕೆಪಿಎಸ್‌ಸಿಗೆ ಅನುಮತಿ ನೀಡಿರುವ ನ್ಯಾಯಪೀಠ, ‘ಆಯ್ಕೆ ಪಟ್ಟಿಯ ಫಲಿತಾಂಶವನ್ನು ನ್ಯಾಯಾಲಯದ ಅನುಮತಿ ಇಲ್ಲದೆ ಪ್ರಕಟಿಸುವಂತಿಲ್ಲ’ ಎಂದು ಮಧ್ಯಂತರ ಆದೇಶದಲ್ಲಿ ವಿವರಿಸಿದೆ. ಮೂಲ ಅರ್ಜಿದಾರರಾದ ಬಿ.ಎನ್.ಮಧು, ಕರ್ನಾಟಕ ಲೋಕಸೇವಾ ಆಯೋಗ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ಐದು ವಾರಗಳ ಕಾಲ ವಿಚಾರಣೆ ಮುಂದೂಡಿದೆ.

‘ಸರ್ಕಾರದ ಪ್ರತಿ ಆಕ್ಷೇಪಣೆ ಏನಾದರೂ ಇದ್ದರೆ ಅದನ್ನು ಒಂದು ವಾರದಲ್ಲಿ ಸಲ್ಲಿಸಬೇಕು’ ಎಂದು ಸೂಚಿಸಿದೆ.

‘ಬಿ’ ಪ್ಲಾನಿಂಗ್ ಕೋರ್ಸ್ ಆರಂಭ

ಬೆಂಗಳೂರು: ಸರ್.ಎಂ.ವಿ.ಸ್ಕೂಲ್ ಆಫ್ ಆರ್ಕಿಟೆಕ್ಚರ್ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ನಾಲ್ಕು ವರ್ಷಗಳ ಬ್ಯಾಚುಲರ್ ಆಫ್ ಪ್ಲಾನಿಂಗ್ (ಬಿ.ಪ್ಲಾನಿಂಗ್) ಕೋರ್ಸ್ ಆರಂಭಿಸಿದೆ. ವಾಸ್ತುಶಿಲ್ಪಿ, ಸಿವಿಲ್ ಎಂಜಿನಿಯರ್ ಅಥವಾ ಇತರ ವಿಭಾಗಗಳ ಸ್ನಾತಕೋತ್ತರ ಯೋಜನಾ ಕಾರ್ಯಕ್ರಮಗಳಿಗಿಂತ ಇದು ಭಿನ್ನವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ವಾರದಲ್ಲಿ ನಿಯಮ ರೂಪಿಸಿ’

ಒಂದನೇ ಪುಟದಿಂದ...

ಅರ್ಜಿದಾರರ ಪರ ವಕೀಲರು, ‘ಪಾಲಿಕೆಗೆ ಚುನಾವಣೆ ನಡೆಯದೆ 10 ವರ್ಷಗಳು ಕಳೆದಿವೆ. ರಾಜ್ಯ ಸರ್ಕಾರ ಕಾಲಹರಣ ಮಾಡುತ್ತಿದೆ. ಈ ಬಗ್ಗೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಕೋರಿದರು.

ಬಿಬಿಎಂಪಿ ಸದಸ್ಯರ ಅಧಿಕಾರ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿತ್ತು. ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ–2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಮುಂದಿನ ವರ್ಷವೇ ಪಾಲಿಕೆ ಚುನಾವಣೆ?

ರಾಜ್ಯ ಚುನಾವಣಾ ಆಯೋಗವು ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸಿತು. ರಾಜ್ಯ ಸರ್ಕಾರವು ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ನಗರ ಪಾಲಿಕೆಗಳಿಗೆ ಮತದಾರರ ಪಟ್ಟಿ ಸಿದ್ಧಪಡಿಸಲು ಮತ್ತು ಅಂತಿಮಗೊಳಿಸಲು 60-90 ದಿನಗಳ ಅಗತ್ಯವಿದೆ ಎಂದು ಆಯೋಗವು ತಿಳಿಸಿತು.

‘ಐದು ನಿಗಮಗಳಿಗೆ ಮತದಾರರ ಪಟ್ಟಿ ಅಂತಿಮಗೊಳಿಸುವ ಕೆಲಸವನ್ನು ಪುನರಾರಂಭಿಸುವಂತೆ ನಾವು ಆಯೋಗಕ್ಕೆ ನಿರ್ದೇಶಿಸುತ್ತೇವೆ. ಕರ್ನಾಟಕ ರಾಜ್ಯವು ವೇಳಾಪಟ್ಟಿಯ ಬಗ್ಗೆ ಅನುಸರಣಾ ಪ್ರಮಾಣಪತ್ರ ಸಲ್ಲಿಸಬೇಕು. ಆಯೋಗದ ಹೆಚ್ಚುವರಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಒಂದು ವಾರದೊಳಗೆ ನಿಯಮಗಳನ್ನು ರೂಪಿಸಿ ಅಧಿಸೂಚನೆ ಹೊರಡಿಸಬೇಕು’ ಎಂದು ಪೀಠ ಆದೇಶಿಸಿತು.

ಮತದಾರರ ಪಟ್ಟಿ ಅಂತಿಮಗೊಳಿಸಿದ ನಂತರ ಐದು ನಗರ ಪಾಲಿಕೆಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುವುದಾಗಿ ಆಯೋಗವು ತನ್ನ ಪ್ರಮಾಣಪತ್ರದಲ್ಲಿ ತಿಳಿಸಿದೆ.

ವಾರ್ಡ್‌ಗಳ ಮರುವಿಂಗಡಣೆಯ ಅಂತಿಮ ಅಧಿಸೂಚನೆ ಹೊರಡಿಸಿದ ತಕ್ಷಣ ಮತದಾರರ ಪಟ್ಟಿ ಸಿದ್ಧಪಡಿಸುವ ಕಾರ್ಯ ಪ್ರಾರಂಭಿಸಲಾಗುವುದು ಎಂದು ಆಯೋಗ ಹೇಳಿದೆ.

ಪಾಲಿಕೆಗಳ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು 45 ದಿನಗಳು ಬೇಕು. ಇದು ಚುನಾವಣಾ ವೇಳಾಪಟ್ಟಿ ಘೋಷಣೆಯಾದ ದಿನಾಂಕದಿಂದ ಫಲಿತಾಂಶಗಳ ಘೋಷಣೆಯವರೆಗಿನ ಅವಧಿ ಎಂದು ಆಯೋಗ ಹೇಳಿದೆ.

ವಾರ್ಡ್‌ಗಳ ಮರು ವಿಂಗಡಣೆ ಮತ್ತು ವಾರ್ಡ್‌ಗಳ ಮೀಸಲಾತಿಗಾಗಿ ಅಂತಿಮ ಅಧಿಸೂಚನೆಗಳನ್ನು ಹೊರಡಿಸುವ ಬಗ್ಗೆ ರಾಜ್ಯ ಸರ್ಕಾರವು ತನ್ನ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವ ವೇಳಾಪಟ್ಟಿಗೆ ಬದ್ಧವಾಗಿರಬೇಕು ಎಂದು ಆಯೋಗವು ನ್ಯಾಯಾಲಯದಲ್ಲಿ ಒತ್ತಾಯಿಸಿತು.

ಚುನಾವಣೆ ನಿಯಮಗಳನ್ನು ಜಾರಿಗೆ ತರಲು ರಾಜ್ಯ ಸರ್ಕಾರದೊಂದಿಗೆ ಆಯೋಗ ಪತ್ರವ್ಯವಹಾರ ನಡೆಸುತ್ತದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು ಅನುಕೂಲವಾಗುವಂತೆ ಈ ನಿಯಮಗಳನ್ನು ಜಾರಿಗೆ ತರಲು ರಾಜ್ಯ ಸರ್ಕಾರವನ್ನು ವಿನಂತಿಸುತ್ತದೆ ಎಂದು ಆಯೋಗ ತಿಳಿಸಿದೆ.

ಜನವರಿ– ಫೆಬ್ರುವರಿಗೆ ಚುನಾವಣೆ?

‘ನಾವು ಅಂದುಕೊಂಡಂತೆ ನಡೆದರೆ ಗ್ರೇಟರ್ ಬೆಂಗಳೂರಿಗೆ ಜನವರಿ ಅಥವಾ ಫೆಬ್ರುವರಿಯಲ್ಲಿ ಚುನಾವಣೆ ನಡೆಸಲು ಸಿದ್ಧರಿದ್ದೇವೆ’ ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಹೇಳಿದರು.

ಚುನಾವಣೆ ನಡೆಸಲು ಒಂದು ವಾರದೊಳಗೆ ನಿಯಮಾವಳಿ ರೂಪಿಸುವಂತೆ ಸರ್ಕಾರಕ್ಕೆ ಸೂಚಿಸಿರುವ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ನ.3 ಕ್ಕೆ ಮುಂದೂಡಿದೆ. ‘ನವೆಂಬರ್ 30ರೊಳಗೆ ಮೀಸಲಾತಿ ಪಟ್ಟಿ ಸಿದ್ಧಪಡಿಸಿ ಕೊಟ್ಟರೆ 60ರಿಂದ 90 ದಿನಗಳಲ್ಲಿ ಚುನಾವಣೆನಡೆಸುತ್ತೇವೆ’ ಎಂದರು.


‘ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯನ್ನು ತಯಾರಿಸುವ ಅಧಿಕಾರ ಒಂದೋ ನಮಗೆ ನೀಡಬೇಕು. ಇಲ್ಲವೇ, ವಿಧಾನಸಭಾ ಚುನಾವಣಾ ಮತದಾರರ ಪಟ್ಟಿಯನ್ನಾದರೂ ನೀಡಬೇಕು. ಇದಕ್ಕಾಗಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024ರ ಸೆಕ್ಷನ್ 35ಕ್ಕೆ ತಿದ್ದುಪಡಿ ಮಾಡಬೇಕು ಎಂದು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದೇವೆ’ ಎಂದು ಅವರು ತಿಳಿಸಿದರು.

ಅಧಿಕಾರಿಗಳನ್ನು ಜೈಲಿಗೆ ಕಳಿಸಬೇಕಾದೀತು: ಸಂಗ್ರೇಶಿ

‘ಚುನಾವಣೆ ವಿಳಂಬಕ್ಕೆ ಸರ್ಕಾರ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬಕ್ಕೆ ರಾಜ್ಯ ಸರ್ಕಾರವೇ ಕಾರಣ. ನ್ಯಾಯಾಲಯ ಸೂಚನೆ ನೀಡಿದ್ದರೂ ಸರ್ಕಾರ ಮೀಸಲಾತಿ ನಿಗದಿ ಮಾಡುತ್ತಿಲ್ಲ ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 187 ಸ್ಥಳೀಯ ಸಂಸ್ಥೆಗಳ ಅವಧಿ ನವೆಂಬರ್‌ನಲ್ಲಿ ಮುಗಿಯಲಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.



ಜಿ ಎಸ್ ಸಂಗ್ರೇಶಿ

ಮೀಸಲಾತಿ ನಿಗದಿ ಮಾಡುವುದಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆ ಎರಡು ಬಾರಿ ಹೈಕೋರ್ಟ್ ಆದೇಶ ಉಲ್ಲಂಘಿಸಿ ನ್ಯಾಯಾಂಗ ನಿಂದನೆ ಮಾಡಿದೆ. ಇದೇ ಪ್ರವೃತ್ತಿ ಮುಂದುವರಿಸಿದರೆ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಜೈಲಿಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

‘ಚುನಾವಣೆ ನಡೆಸಲು ನಾವು ಸಿದ್ಧರಿದ್ದೇವೆ. ಮೀಸಲಾತಿ ನಿಗದಿ ಮಾಡುವ ಅಧಿಕಾರ ನಮಗೇ ಕೊಟ್ಟರೆ, ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಸುತ್ತೇವೆ. ಚುನಾವಣೆ ನಡೆಸದೆ ಎಷ್ಟೋ ವರ್ಷ ಕಳೆದಿವೆ. ಚುನಾವಣೆ ನಡೆಸಲು ಮೀಸಲಾತಿ ನಿಗದಿ ಮಾಡುವಂತೆ ಕೋರಿ, ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದೇವೆ. ಆದಷ್ಟು ಬೇಗ ಮೀಸಲಾತಿ ನಿಗದಿ ಮಾಡಬೇಕು. ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ತಯಾರಿಸಬೇಕೋ ಅಥವಾ ವಿಧಾನ ಸಭಾ ಚುನಾವಣೆಯಲ್ಲಿ ಬಳಸಿದ ಪಟ್ಟಿಯನ್ನೇ ಅನುಸರಿಸಬೇಕೊ ಎಂಬುದನ್ನು ಸ್ಪಷ್ಟಪಡಿಸಬೇಕು ’ ಎಂದರು.


ಅಲ್ಲದೇ ‘ಇದನ್ನು ಮಾಡದೇ ಇದ್ದರೆ ಸರ್ಕಾರಕ್ಕೆ ಆಸಕ್ತಿ ಇಲ್ಲ ಎಂದು ಭಾವಿಸಬೇಕಾಗುತ್ತದೆ’ ಎಂದು ಸಂಗ್ರೇಶಿ ಹೇಳಿದರು.

‘ಕೇಂದ್ರ ಚುನಾವಣಾ ಆಯೋಗಕ್ಕೆ ಎಷ್ಟು ಅಧಿಕಾರ ಇದೆಯೋ ರಾಜ್ಯ ಚುನಾವಣಾ ಆಯೋಗಕ್ಕೂ ಅಷ್ಟೇ ಅಧಿಕಾರ ಇದೆ. ನಮ್ಮದೂ ಸ್ವತಂತ್ರ ಸಂಸ್ಥೆ. ಸರ್ಕಾರ ಅನುಮತಿ ನೀಡಿದರೆ, ನಾವೇ ಸ್ವತಂತ್ರವಾಗಿ ಮತದಾರರ ಪಟ್ಟಿ ತಯಾರಿಸಲು ಸಿದ್ಧರಿದ್ದೇವೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಆಯೋಗದ ಅಧಿಕಾರ ಮೊಟಕುಗೊಳಿಸಲಾಯಿತು’ ಎಂದು ಅವರು ಹೇಳಿದರು.

‘ಜನವರಿ ಅಥವಾ ಫೆಬ್ರುವರಿ ವೇಳೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕಿದೆ. ಚುನಾವಣೆಯನ್ನು ಮತ ಪತ್ರಗಳ ಮೂಲಕ ನಡೆಸಲು ಸಿದ್ಧರಿದ್ದೇವೆ. ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಮತಪತ್ರ ಬಳಸಲಾಗುತ್ತಿದೆ. ನಮ್ಮಲ್ಲಿರುವ ವಿದ್ಯುನ್ಮಾನ ಮತ ಯಂತ್ರಗಳು 15– 20 ವರ್ಷಗಳಷ್ಟು ಹಳೆಯದಾಗಿವೆ. ಅವುಗಳನ್ನು ಬದಲಿಸಬೇಕಾಗಿದೆ’ ಎಂದು ತಿಳಿಸಿದರು.

ಸುರಂಗ ರಸ್ತೆ: ಅದಾನಿ, ಟಾಟಾ ಆಸಕ್ತಿ

ಪೂರ್ವಭಾವಿ ಸಭೆಯಲ್ಲಿ ಮಾಹಿತಿ ಪಡೆದ ಅಗ್ರ ನಿರ್ಮಾಣ ಸಂಸ್ಥೆಗಳ ಪ್ರತಿನಿಧಿಗಳು



'ಅವಳಿ ಸುರಂಗ ರಸ್ತೆ'ಯ ಮಾದರಿ

• ನವೀನ್ ಮಿನೇಜಸ್

ಮುಖ್ಯಾಂಶಗಳು

- ಒಂದೂವರೆ ಗಂಟೆ ನಡೆದ ಸಭೆ
- 200ಕ್ಕೂ ಹೆಚ್ಚು ಪ್ರಶ್ನೆ ಕೇಳಿದ ಪ್ರತಿನಿಧಿಗಳು
- ಬಿಡ್ ಸಲ್ಲಿಸುವ ದಿನಾಂಕ ವಿಸ್ತರಿಸಲು ಮನವಿ

ಬೆಂಗಳೂರು: ಅದಾನಿ ಗ್ರೂಪ್, ಎಲ್ ಆ್ಯಂಡ್ ಟಿ, ಟಾಟಾ ಪ್ರಾಜೆಕ್ಟ್ಸ್ ಸೇರಿದಂತೆ ದೇಶದ ಪ್ರಮುಖ ಹತ್ತು ಸಂಸ್ಥೆಗಳು ನಗರದಲ್ಲಿನ ಉದ್ದೇಶಿತ ಸುರಂಗ ರಸ್ತೆ ಯೋಜನೆಯ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿ ತೋರಿವೆ.

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ (ಬಿ-ಸ್ಮೈಲ್) ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ 16.75 ಕಿ.ಮೀ ಸುರಂಗ ರಸ್ತೆ ನಿರ್ಮಿಸಲು ಟೆಂಡರ್ ಆಹ್ವಾನಿಸಿದೆ. ಈ ಪ್ರಕ್ರಿಯೆಯಲ್ಲಿ ಸೋಮವಾರ ನಡೆದ ಪ್ರೀ-ಬಿಡ್ ಸಭೆಯಲ್ಲಿ, ಮೆಗಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್, ಐಟಿಡಿ ಸಿಮೆಂಟೇಷನ್ ಇಂಡಿಯಾ, ವಿಶ್ವ ಸಮುದ್ರ ಎಂಜಿನಿಯರಿಂಗ್ ಲಿಮಿಟೆಡ್, ಜಯಶಂಕರ್, ಸೀಗಲ್ ಇಂಡಿಯಾ, ಆಫ್‌ಕಾನ್ಸ್ ಇನ್‌ಫ್ರಾಸ್ಟ್ರಕ್ಚರ್, ಐಆರ್‌ಬಿ ಇನ್‌ಫ್ರಾಸ್ಟ್ರಕ್ಚರ್ ಪ್ರತಿನಿಧಿಗಳು ಭಾಗವಹಿಸಿದ್ದರು.

ನಿರ್ಮಾಣ, ಕಾರ್ಯಾಚರಣೆ, ವರ್ಗಾವಣೆ (ಬೂಟ್) ಆಧಾರದಲ್ಲಿ ಸುರಂಗ ರಸ್ತೆ ಯೋಜನೆಯನ್ನು ಕೈಗೊಳ್ಳುತ್ತಿರುವುದರಿಂದ, ಎಷ್ಟು ಸಂಸ್ಥೆಗಳು ಆಸಕ್ತಿ ವಹಿಸುತ್ತವೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಬೂಟ್ ಪ್ರಕಾರ, ಯೋಜನೆಯ ಶೇ 60ರಷ್ಟು ಮೊತ್ತವನ್ನು ಕಂಪನಿಗಳು ಭರಿಸಬೇಕು. ಅದು ಸುಮಾರು ₹10,619 ಕೋಟಿಯಾಗಲಿದ್ದು, ಬಿಡ್ ಸಲ್ಲಿಸುವ ಸಂದರ್ಭದಲ್ಲಿ ₹44 ಕೋಟಿಯನ್ನು ಠೇವಣಿಯನ್ನಾಗಿ ಇಡಬೇಕು. 30 ವರ್ಷಗಳ ಅವಧಿಗೆ ಟೋಲ್ ಅನ್ನು ಗುತ್ತಿಗೆದಾರ ಸಂಸ್ಥೆ ಸಂಗ್ರಹಿಸಬಹುದು.

ಒಂದೂವರೆ ಗಂಟೆ ನಡೆದ ಸಭೆಯಲ್ಲಿ, 200ಕ್ಕೂ ಹೆಚ್ಚು ಪ್ರಶ್ನೆಗಳನ್ನು ಪ್ರತಿನಿಧಿಗಳು ಕೇಳಿದರು ಎನ್ನಲಾಗಿದೆ.

'ಅಗ್ರ ನಿರ್ಮಾಣ ಕಂಪನಿಗಳು ಅವರ ಪ್ರತಿನಿಧಿಗಳನ್ನು ಪ್ರೀ-ಬಿಡ್ ಸಭೆಗೆ ಕಳುಹಿಸಿದ್ದವು. ಬಿಡ್ ಸಲ್ಲಿಸುವ ದಿನವನ್ನು ವಿಸ್ತರಿಸಬೇಕು ಎಂದು ಕೆಲವರು ಮನವಿ ಮಾಡಿಕೊಂಡರು. ತ್ಯಾಜ್ಯ ವಿಲೇವಾರಿಗೆ ಭೂಮಿಯ ಬಗ್ಗೆಯೂ ಅವರು ಪ್ರಶ್ನಿಸಿದರು. ಅಂತಿಮ ಬಿಡ್‌ನಲ್ಲಿ ಹಲವು ಕಂಪನಿಗಳು ಭಾಗವಹಿಸುವ ನಿರೀಕ್ಷೆ ಇದೆ' ಎಂದು ಬಿ-ಸ್ಮೈಲ್ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದ ಸಂಸ್ಥೆಯವರೊಂದಿಗೆ ಬಿಬಿಎಂಪಿ ಯೋಜನಾ ವಿಭಾಗದ ವಿಶೇಷ ಆಯುಕ್ತ ಕರೀಗೌಡ ಮಾತುಕತೆ ನಡೆಸಿದರು.

ಯೋಜನೆಯಂತೆ, ನಿರ್ಮಾಣ ಕಂಪನಿಗಳು ಒಟ್ಟು ಎಂಟು ಸುರಂಗ ಕೊರೆಯುವ ಯಂತ್ರಗಳನ್ನು (ಟಿಪಿಎಂ) ಅಳವಡಿಸಿಕೊಳ್ಳಬೇಕು. ಪ್ರತಿವರ್ಷ ಪ್ರತಿ ಯಂತ್ರ 2 ಕಿ.ಮೀ ಉದ್ದದ ಸುರಂಗ ಮಾರ್ಗ ಕೊರೆಯಬೇಕಾಗಿದೆ.

ಸುರಂಗ ಮಾರ್ಗ ಟೆಂಡರ್

ಪ್ಯಾಕೇಜ್ 1 (ಉತ್ತರ) ಹೆಬ್ಬಾಳ ಜಂಕ್ಷನ್‌ನಿಂದ ಶೇಷಾದ್ರಿ ರಸ್ತೆ (ಸ್ವಾತಂತ್ರ್ಯ ಉದ್ಯಾನ)	ಪ್ಯಾಕೇಜ್ 2 (ದಕ್ಷಿಣ) ಶೇಷಾದ್ರಿ ರಸ್ತೆಯಿಂದ ಸಿಲ್ಕ್ ಬೋರ್ಡ್ ಜಂಕ್ಷನ್
₹3,508 ಕೋಟಿ ಬಿಬಿಎಂಪಿ ಪಾಲು	₹3,517 ಕೋಟಿ ಬಿಬಿಎಂಪಿ ಪಾಲು
₹5,262 ಕೋಟಿ ಖಾಸಗಿಯವರ ವಿನಿಯೋಗ	₹5,357 ಕೋಟಿ ಖಾಸಗಿಯವರ ವಿನಿಯೋಗ:

₹17,698 ಕೋಟಿ ಒಟ್ಟು ವೆಚ್ಚ

ಆಂಬುಲೆನ್ಸ್ ನಿರ್ವಹಣೆ: ಅವ್ಯವಹಾರದ ತನಿಖೆ

ಬೆಂಗಳೂರು: '108-ಆರೋಗ್ಯ ಕವಚ' ಯೋಜನೆಯ ಆಂಬುಲೆನ್ಸ್‌ಗಳ ನಿರ್ವಹಣೆಯಲ್ಲಿ ನ್ಯೂನತೆ ಹಾಗೂ ಅವ್ಯವಹಾರಗಳು ನಡೆದಿರುವ ಕುರಿತು ದೂರುಗಳು ಬಂದಿದ್ದು, ಈ ಬಗ್ಗೆ ತನಿಖೆ ನಡೆಸಿ, 15 ದಿನಗಳಲ್ಲಿ ವರದಿ ನೀಡುವಂತೆ ಆರೋಗ್ಯ ಇಲಾಖೆಯು ವಿಭಾಗೀಯ ಸಹ ನಿರ್ದೇಶಕರಿಗೆ ಸೂಚಿಸಲಾಗಿದೆ.

ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗಗಳ ವ್ಯಾಪ್ತಿಯಲ್ಲಿ, ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು, ತಾಲ್ಲೂಕು ಆರೋಗ್ಯ ಅಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿ ಆಂಬುಲೆನ್ಸ್‌ನ ಪಿ.ಸಿ.ಆರ್, ಪಿ.ಡಿ.ಆರ್, ಹಾಜರಾತಿ ವಹಿ, ಲಾಗ್ ಪುಸ್ತಕಗಳನ್ನು ಪರಿಶೀಲಿಸಬೇಕು. ಆಂಬುಲೆನ್ಸ್‌ನಲ್ಲಿರುವ ನ್ಯೂನತೆಗಳು, ಅವ್ಯವಹಾರದ ಕುರಿತು ತನಿಖೆ ನಡೆಸಿ, ವರದಿ ನೀಡಬೇಕು ಎಂದು ಆರೋಗ್ಯ ಇಲಾಖೆಯ ಆಯುಕ್ತರು ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಅಧಿಕಾರಿಗಳಿಗೆ ಲೋಕಾಯುಕ್ತ ತರಾಟೆ

ಎಲ್ಲಾ ವಾರ್ಡ್‌ಗಳಲ್ಲಿ ಶ್ವಾನ ನಿಗಾ ಕೇಂದ್ರ ಸ್ಥಾಪಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೂರ ಪ್ರವೃತ್ತಿ ಹೊಂದಿರುವ ನಾಯಿಗಳನ್ನು ಪತ್ತೆ ಹಚ್ಚಿ, ಶ್ವಾನ ನಿಗಾ ಕೇಂದ್ರದಲ್ಲಿ ಇಡದೇ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳನ್ನು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ತರಾಟೆಗೆ ತೆಗೆದುಕೊಂಡರು.

ಕೊಡಿಗೆಹಳ್ಳಿ ಠಾಣಾ ವ್ಯಾಪ್ತಿಯ ಟೆಲಿಕಾಂ ಲೇಔಟ್‌ನಲ್ಲಿ ಬೀದಿ ನಾಯಿಗಳ ದಾಳಿಗೆ ಸಿಲುಕಿ ಮೃತಪಟ್ಟ ಸೀತಪ್ಪ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದರು.

'ಶ್ವಾನ ನಿಗಾ ಕೇಂದ್ರ ಸ್ಥಾಪಿಸುವಂತೆ ಈ ಹಿಂದೆ ಸಾಕಷ್ಟು ಮಾರ್ಗದರ್ಶನ ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಆದೇಶವನ್ನು ಸರಿಯಾಗಿ ಅರ್ಥೈಸಿಕೊಂಡಿಲ್ಲ. ಕ್ರೂರ ಮನೋಭಾವ ಹೊಂದಿರುವ ನಾಯಿಗಳಿಗೆ ಕೆನಲ್ಸ್ ಶೆಲ್ಟರ್‌ಗಳನ್ನು ಸ್ಥಾಪಿಸಿ, ಅವುಗಳಲ್ಲಿ ಇಡಬೇಕೆಂಬ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ ಅವರು, 'ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆರೋಗ್ಯ ಇಲಾಖೆಯ ವಿಶೇಷ ಆಯುಕ್ತರು, 'ಯಲಹಂಕದಲ್ಲಿ 15 ದಿನಗಳಲ್ಲಿ 50 ನಾಯಿಗಳ ಸಾಮರ್ಥ್ಯ ಹೊಂದಿರುವ ನಿಗಾ ಕೇಂದ್ರ ಸ್ಥಾಪಿಸಲಾಗುವುದು' ಎಂದು ಉತ್ತರಿಸಿದರು.

ಕ್ರೂರ ನಾಯಿ ಹಾಗೂ ಪದೇ ಪದೇ ಜನರನ್ನು ಕಚ್ಚುತ್ತಿರುವ ನಾಯಿಗಳ ಬಗ್ಗೆ ನಿಗಾ ವಹಿಸಲು ಶ್ವಾನ ನಿಗಾ ಕೇಂದ್ರವನ್ನು ಎಲ್ಲಾ ವಾರ್ಡ್‌ಗಳಲ್ಲಿ ಸ್ಥಾಪಿಸಬೇಕು ಎಂದು ಪಾಟೀಲರು ಸೂಚನೆ ನೀಡಿದರು.

ಬೆಂಗಳೂರು ನಗರ ಮಾತ್ರವಲ್ಲದೆ, ಇತರೆ ಜಿಲ್ಲೆಗಳಲ್ಲಿಯೂ ಬೀದಿ ನಾಯಿಗಳ ದಾಳಿಯಿಂದ ಜನರು ಮೃತಪಟ್ಟಿರುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಮೂರ್ತಿ, 'ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪಶು ಸಂಗೋಪನಾ ಇಲಾಖೆ ಆಯುಕ್ತರು, ಮಹಾನಗರ ಪಾಲಿಕೆ, ನಗರಸಭೆಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿ ವರ್ಷದಲ್ಲಿ ಬೀದಿ ನಾಯಿ ಕಚ್ಚಿದ ಪ್ರಕರಣಗಳು, ರೇಬಿಸ್ ಪ್ರಕರಣಗಳು, ವ್ಯಾಕ್ಸಿನೇಷನ್ , ಎಬಿಸಿ ಮಾಡಿಸಿದ ಪ್ರಕರಣಗಳ ಸಂಖ್ಯೆ, ಶ್ವಾನ ತಾಣಗಳ ಬಗ್ಗೆ ವರದಿ ನೀಡಬೇಕು' ಎಂದು ಸೂಚಿಸಿದರು.

ನ್ಯಾಯಾಲಯದ ಆದೇಶದಂತೆ ಸೀತಪ್ಪ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಹೇಳಿ, ಪ್ರಕರಣದ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 19ಕ್ಕೆ ನಿಗದಿಪಡಿಸಿದರು.

ನೆಲ ಅಂತಸ್ತು ಪಾರ್ಕಿಂಗ್‌ಗೆ ಮೀಸಲು

ಒಂದು ಅಂತಸ್ತು ಹೆಚ್ಚು ನಿರ್ಮಿಸಲು ಅವಕಾಶ: 3 ಮೀಟರ್ ಎತ್ತರಕ್ಕೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ನೆಲ ಅಂತಸ್ತನ್ನು 'ಸ್ಟಿಲ್ಟ್ ಫ್ಲೋರ್' ಆಗಿ ಪರಿಗಣಿಸಿ, ಸಂಪೂರ್ಣವಾಗಿ ವಾಹನ ನಿಲುಗಡೆಗೆ ಮೀಸಲಿಡುವ ನಿಯಮಗಳು ಜಾರಿಯಾಗಿವೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ ಸೆಕ್ಷನ್ 13–ಇಗೆ ತಿದ್ದುಪಡಿಯಾಗಿ, ಪರಿಷ್ಕೃತ ಮಾಸ್ಟರ್ ಪ್ಲಾನ್–2015ರ ವಲಯ ನಿಯಮಗಳಿಗೆ 'ಬೆಂಗಳೂರು ಸ್ಥಳೀಯ ಯೋಜನಾ ಪ್ರಾಧಿಕಾರ (ತಿದ್ದುಪಡಿ) ನಿಯಮಗಳು–2025' ಜಾರಿಯಾಗಿವೆ.

2025ರ ಜೂನ್ 12ರಂದು ಕರಡು ಆದೇಶ ಹೊರಡಿಸಿದ್ದ ನಗರಾಭಿವೃದ್ಧಿ ಇಲಾಖೆ, ಆಕ್ಷೇಪಣೆಗೆ ನೀಡಿದ್ದ 30 ದಿನದ ಅವಕಾಶ ಮುಗಿದ ಮೇಲೆ ಅವುಗಳನ್ನು ಪರಿಗಣಿಸಿ ಆಗಸ್ಟ್ 1ರಂದು ಅಂತಿಮ ಅಧಿಸೂಚನೆ ಹೊರಡಿಸಿದೆ.

ಬಿಬಿಎಂಪಿ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ನಿರ್ಮಿಸಿರುವ, ನಿರ್ಮಾಣ ಹಂತದಲ್ಲಿರುವ ಹಾಗೂ ಮುಂದೆ ನಿರ್ಮಾಣವಾಗಲಿರುವ ಕಟ್ಟಡಗಳಲ್ಲಿನ ನೆಲ ಅಂತಸ್ತನ್ನು 'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಎಂದು ಪರಿಗಣಿಸಿ, ಅದರ ಎತ್ತರವನ್ನು ಮೂರು ಮೀಟರ್‌ಗೆ ನಿಗದಿಪಡಿಸಲಾಗಿದೆ. ಈ 'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಅನ್ನು ಪಾರ್ಕಿಂಗ್‌ಗೆ ಬಳಸುವುದರಿಂದ ಕಟ್ಟಡದ ಒಟ್ಟಾರೆ ಎತ್ತರದಲ್ಲಿ ಪರಿಗಣಿಸಬಾರದು. ಕಟ್ಟಡದ ಒಟ್ಟಾರೆ ಎತ್ತರ 15 ಮೀಟರ್ ಮೀರಬಾರದು. ಅದರಂತೆಯೇ ನಕ್ಷೆ ಅನುಮೋದನೆ ಅಥವಾ ಪರಿಷ್ಕೃತ ನಕ್ಷೆ ನೀಡಲು ಹೊಸ ನಿಯಮಗಳು ಅವಕಾಶ ಮಾಡಿಕೊಟ್ಟಿವೆ.

ನೆಲ ಅಂತಸ್ತನ್ನು ಪಾರ್ಕಿಂಗ್‌ಗೆ ಮೀಸಲಿಟ್ಟ ಕಟ್ಟಡಕ್ಕೆ ಸೆಟ್‌ಬ್ಯಾಕ್‌ನಲ್ಲಿ ರಿಯಾಯಿತಿ ನೀಡಿ ನಾಲ್ಕನೇ ಅಂತಸ್ತನ್ನು (ಜಿ + 4) ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಈಗಾಗಲೇ ಜಿ + 3 ಕಟ್ಟಡ ನಿರ್ಮಿಸಿರುವವರು ನೆಲ ಅಂತಸ್ತನ್ನು ಸಂಪೂರ್ಣವಾಗಿ ಪಾರ್ಕಿಂಗ್‌ಗೆ ಮೀಸಲಿಟ್ಟರೆ, ಅವರಿಗೆ ಇನ್ನೊಂದು ಅಂತಸ್ತು ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಪಾರ್ಕಿಂಗ್ ಅಂತಸ್ತನ್ನು ಬೇರೆ ರೀತಿಯಲ್ಲಿ ಬಳಕೆ ಮಾಡಿದರೆ, ಬೆಸ್ಕಾಂ, ಜಲಮಂಡಳಿ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ. ವಸತಿಯೇತರ ಕಟ್ಟಡಗಳಲ್ಲಿ ಪಾರ್ಕಿಂಗ್ ಜಾಗವನ್ನು ದುರುಪಯೋಗಪಡಿಸಿಕೊಂಡರೆ ಉದ್ದಿಮೆ ಪರವಾನಗಿಯನ್ನೂ ರದ್ದುಗೊಳಿಸಲಾಗುತ್ತದೆ.

'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಅವಕಾಶ ಜಾರಿಯಾಗುವ ಬಗ್ಗೆ 'ಪ್ರಜಾವಾಣಿ'ಯಲ್ಲಿ 2025ರ ಜೂನ್ 3ರಂದು ವರದಿ ಪ್ರಕಟವಾಗಿತ್ತು.

'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಕಟ್ಟಡಗಳಿಗೆ ಸೆಟ್‌ಬ್ಯಾಕ್

ಕಟ್ಟಡದ ಎತ್ತರ,		ಸೆಟ್‌ಬ್ಯಾಕ್	
'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಇರುವ 12 ಮೀಟರ್‌ನಿಂದ 15 ಮೀಟರ್			
4 ಸಾವಿರ ಚದರ ಮೀಟರ್‌ವರೆಗಿನ ನಿವೇಶನ	ಮುಂದೆ ಕನಿಷ್ಠ 1.5 ಮೀ	ಹಿಂದೆ ಕನಿಷ್ಠ 1 ಮೀ	ಅಕ್ಕಪಕ್ಕ ಕನಿಷ್ಠ 1 ಮೀ
4 ಸಾವಿರ ಚದರ ಮೀಟರ್‌ಗೂ ಹೆಚ್ಚಿನ ನಿವೇಶನ			ಸುತ್ತಲೂ 5 ಮೀ
'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಇಲ್ಲದ 12 ಮೀಟರ್‌ನಿಂದ 15 ಮೀಟರ್‌ವರೆಗಿನ ಕಟ್ಟಡ			ಸುತ್ತಲೂ 5 ಮೀ
15 ಮೀ ನಿಂದ 18 ಮೀ			ಸುತ್ತಲೂ 6 ಮೀ
18 ಮೀ ನಿಂದ 21 ಮೀ			ಸುತ್ತಲೂ 7 ಮೀ
21 ಮೀ ನಿಂದ 24 ಮೀ			ಸುತ್ತಲೂ 8 ಮೀ
24 ಮೀ ನಿಂದ 27 ಮೀ			ಸುತ್ತಲೂ 9 ಮೀ
27 ಮೀ ನಿಂದ 30 ಮೀ			ಸುತ್ತಲೂ 10 ಮೀ
30 ಮೀ ನಿಂದ 35 ಮೀ			ಸುತ್ತಲೂ 11 ಮೀ
35 ಮೀ ನಿಂದ 40 ಮೀ			ಸುತ್ತಲೂ 12 ಮೀ
40 ಮೀ ನಿಂದ 45 ಮೀ			ಸುತ್ತಲೂ 13 ಮೀ
45 ಮೀ ನಿಂದ 50 ಮೀ			ಸುತ್ತಲೂ 14 ಮೀ
50 ಮೀಟರ್‌ಗೂ ಹೆಚ್ಚು			ಸುತ್ತಲೂ 16 ಮೀ



ರಸ್ತೆಗಳಲ್ಲಿ ನೀರು ಹರಿದು ವಾಹನ ಸವಾರರು ಪರದಾಟ

ನಗರದ ವಿವಿಧೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ



ನಗರದ ರಾಜಾಜಿನಗರ ನವರಂಗ್ ಸಿಗ್ನಲ್ ಬಳಿ ಮಳೆ ಸುರಿದ ಪರಿಣಾಮ ಮಳೆಯಲ್ಲೇ ಬಾಲಕನನ್ನು ವ್ಯಕ್ತಿಯೊಬ್ಬರು ಹೊತ್ತುಕೊಂಡು ಸಾಗಿದರು —ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ನಗರದ ವಿವಿಧೆಡೆ ಸೋಮವಾರ ಸಂಜೆ 6 ಗಂಟೆ ನಂತರ ಬಿರುಸಿನ ಮಳೆ ಆರಂಭವಾಗಿ ತಡರಾತ್ರಿವರೆಗೂ ಮುಂದುವರಿಯಿತು.

ಮಧ್ಯಾಹ್ನದಿಂದಲೂ ಮೋಡ ಕವಿದ ವಾತಾವರಣವಿತ್ತು. ಸಂಜೆ ದಿಢೀರನೆ ಮಳೆ ಆರಂಭವಾಯಿತು. ರಸ್ತೆಗಳಲ್ಲಿ ನೀರು ಹರಿದು ವಾಹನ ಸವಾರರು ಪರದಾಡಿದರು.

ವಿಧಾನಸೌಧ, ಶಾಂತಿನಗರ, ಮೆಜೆಸ್ಟಿಕ್, ಮಲ್ಲೇಶ್ವರ, ಶೇಷಾದ್ರಿಪುರ, ಮೈಸೂರು ರಸ್ತೆ, ವಿಜಯನಗರ, ಬಸವನಗುಡಿಯ ಕೆಲವು ಭಾಗಗಳಲ್ಲಿ ಬಿರುಸಿನ ಮಳೆಯಾಯಿತು. ಎಂ.ಜಿ. ರಸ್ತೆ, ಚರ್ಚ್‌ಸ್ಟ್ರೀಟ್, ಹಲಸೂರು ಸುತ್ತಮುತ್ತ ಮಳೆಯಾಯಿತು.

ಬಾಗಲಕುಂಟೆಯಲ್ಲಿ 3.5 ಸೆಂ.ಮೀ, ಶೆಟ್ಟಿಹಳ್ಳಿಯಲ್ಲಿ 2.8 ಸೆಂ.ಮೀ, ಯಲಹಂಕದಲ್ಲಿ 2.7 ಸೆಂ.ಮೀ, ಚೌಡೇಶ್ವರಿನಗರದಲ್ಲಿ 2 ಸೆಂ.ಮೀಗೂ ಅಧಿಕ ಮಳೆಯಾಗಿದೆ. ವಿದ್ಯಾರಣ್ಯಪುರ, ನಾಗಸಂದ್ರ, ದೊಡ್ಡಬಿದರಕಲ್ಲು ವ್ಯಾಪ್ತಿಯಲ್ಲಿ ಒಂದು ಸೆಂ.ಮೀಗೂ ಹೆಚ್ಚು ಮಳೆಯಾಯಿತು.

ಭಾನುವಾರ ರಾತ್ರಿ ಕೂಡ ನಗರದ ಬಹುತೇಕ ಕಡೆ ಮಳೆಯಾಯಿತು. 11 ಗಂಟೆಗೆ ಆರಂಭವಾದ ಮಳೆ 2 ಗಂಟೆಯವರೆಗೆ ಸುರಿಯಿತು. ಮೆಜೆಸ್ಟಿಕ್, ಶಾಂತಿನಗರ, ಎಂ.ಜಿ.ರಸ್ತೆ, ಪೂರ್ವ ಬಾಣಸವಾಡಿ, ಎಚ್‌ಬಿಆರ್ ಲೇಔಟ್, ಬ್ಯಾಟರಾಯನಪುರ ಸುತ್ತಮುತ್ತ 5 ಸೆಂ.ಮೀಗೂ ಹೆಚ್ಚು ಮಳೆಯಾಗಿದೆ. ಪೀಣ್ಯ ದಾಸರಹಳ್ಳಿ, ನಾಗಸಂದ್ರ, ಚಿಕ್ಕಬಾಣಾವರ ವ್ಯಾಪ್ತಿಯಲ್ಲಿ ಹದವಾದ ಮಳೆಯಾಯಿತು.

ಜಕ್ಕೂರು, ಎಚ್.ಗೊಲ್ಲಹಳ್ಳಿ, ಕೊಡಿಗೆಹಳ್ಳಿ, ಯಲಹಂಕ, ಅಟ್ಟೂರು, ಪುಲಕೇಶಿ ನಗರ ಮತ್ತು ಸಂಪಂಗಿರಾಮನಗರ ಸುತ್ತಮುತ್ತ 4.5 ಸೆಂ.ಮೀಗೂ ಹೆಚ್ಚು ಮಳೆಯಾಗಿದೆ. ಹೊರಮಾವು ಕಾಟನ್‌ಪೇಟೆ, ಸಾರಕ್ಕಿ ಮತ್ತು ಕೋಣನಕುಂಟೆ ಸುತ್ತಮುತ್ತ 3 ಸೆಂ.ಮೀ ಮಳೆಯಾದ ಬಗ್ಗೆ ವರದಿಯಾಗಿದೆ.

ಮಳೆಪ್ರಮಾಣ (ಸೋಮವಾರ) (ಸೆಂ.ಮೀ)

ಪ್ರದೇಶ	ಪ್ರಮಾಣ
ಬಾಗಲಕುಂಟೆ	3.5
ದೊಡ್ಡಬಿದರೆಕಲ್ಲು	3.5
ಶೆಟ್ಟಿಹಳ್ಳಿ	2.8
ಯಲಹಂಕ	2.7
ಚೊಕ್ಕಸಂದ್ರ	2.4
ಚೌಡೇಶ್ವರಿ	2.0
ವಿದ್ಯಾರಣ್ಯಪುರ	1.1

ದಸರಾ: ಮೈಸೂರಿಗೆ ಬಂದ ಗಜಪಡೆ

ವೀರನಹೊಸಹಳ್ಳಿಯಲ್ಲಿ ಸಾಂಪ್ರದಾಯಿಕ ಪೂಜೆ • ಅಭಿಮನ್ಯು ನೇತೃತ್ವದ ಗಜಪಯಣ

• ಮೋಹನ್ ಕುಮಾರ ಸಿ.

ಮೈಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಬ್ಬಾಗಿಲು ಹುಣಸೂರು ತಾಲ್ಲೂಕಿನ ವೀರನ ಹೊಸಹಳ್ಳಿಯಲ್ಲಿ ಸೋಮವಾರ 'ಗಜಪಯಣ' ಆರಂಭವಾಯಿತು. ಆನೆಗಳು ಸಾಗುವ 2 ಕಿ.ಮೀ ದೂರದ ಇಕ್ಕೆಲಗಳಲ್ಲಿ ನಿಂತ ಸಾವಿರಾರು ಜನ 'ಜಂಬೂಸವಾರಿ'ಯನ್ನು ನೆನಪಿಸಿದರು.

ಐದು ವರ್ಷದಿಂದ ಚಿನ್ನದ ಅಂಬಾರಿ ಹೊರುತ್ತಿರುವ 'ಕ್ಯಾಪ್ಟನ್ ಅಭಿಮನ್ಯು' ನೇತೃತ್ವದ 9 ಆನೆಗಳನ್ನು ನೋಡಲು ಜನ ಮುಗಿಬಿದ್ದರು. ಹಾಡಿ ನಿವಾಸಿಗಳು, ಗ್ರಾಮಸ್ಥರು, ನೆರೆ ಜಿಲ್ಲೆಗಳ ಜನರಷ್ಟೇ ಅಲ್ಲದೆ, ಈ ಬಾರಿ ವಿದೇಶಿ ಪ್ರವಾಸಿಗರೂ ಬಂದದ್ದು ವಿಶೇಷ.

ಸಾಂಪ್ರದಾಯಿಕ ಪೂಜೆ: ಅರಣ್ಯ ಸಚಿವ ಈಶ್ವರ ಖಂಡ್ರೆ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಆನೆಗಳಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು.

'ಕಾವೇರಿ', 'ಲಕ್ಷ್ಮಿ' ಜೊತೆ ಗಂಭೀರ ಹೆಜ್ಜೆಗಳನ್ನಿರಿಸಿ ಬಂದ 59 ವರ್ಷದ 'ಅಭಿಮನ್ಯು' ಸಡಗರಕ್ಕೆ ಕಳೆ ತುಂಬಿದ. ಮತ್ತಿಗೋಡು ಶಿಬಿರದ ಸಹ ಸದಸ್ಯರಾದ 'ಭೀಮ', 'ಮಹೇಂದ್ರ', ಎರಡನೇ ದಸರೆಯಲ್ಲಿ ಪಾಲ್ಗೊಳ್ಳುತ್ತಿರುವ 'ಏಕಲವ್ಯ' ಜೊತೆಯಾಗಿದ್ದರು. ಕೊಡಗು ಜಿಲ್ಲೆಯ ದುಬಾರೆ ಶಿಬಿರದ 'ಧನಂಜಯ', 'ಪ್ರಶಾಂತ', 'ಕಂಜನ್', 'ಕಾವೇರಿ' ಹಾಗೂ ಬಳ್ಳೆ ಆನೆ ಶಿಬಿರದ 'ಲಕ್ಷ್ಮಿ' ಹೆಜ್ಜೆ ಹಾಕಿದವು.

ಅರಮನೆ ಪುರೋಹಿತ ಪ್ರಹ್ಲಾದ್ ರಾವ್ ಪೂಜೆ ನೇತೃತ್ವ ವಹಿಸಿದ್ದರು. ಆನೆಗಳಿಗೆ ಪಂಚಫಲ, ಕಡುಬು, ಚಕ್ಕುಲಿ, ನಿಪ್ಪಟ್ಟು, ಬೆಲ್ಲ, ಕಬ್ಬು, ಮೋದಕ ನೈವೇದ್ಯ ನೀಡಿ 'ಶೋಡಷೋಪಚಾರ' ಪೂಜೆ ಮಾಡಿದರು. ಗಣಪತಿ ಅರ್ಚನೆ ಜೊತೆ ವನದೇವತೆ, ಚಾಮುಂಡೇಶ್ವರಿಗೆ ಪ್ರಾರ್ಥನೆ ಸಲ್ಲಿಸಿದರು. ಮಾವುತರು, ಕಾವಡಿಗಳಿಗೆ ಸಚಿವ ಈಶ್ವರ ಖಂಡ್ರೆ ಫಲ-ತಾಂಬೂಲ ನೀಡಿ ಆಹ್ವಾನಿಸಿದರು. ನಂತರ 2 ಕಿ.ಮೀ ವರೆಗೆ ಆನೆಗಳನ್ನು ನಡೆಸಿಕೊಂಡು ಬರಲಾಯಿತು.



ಗಜಪಡೆಗೆ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿಯಲ್ಲಿ ಸೋಮವಾರ ಬೀಳ್ಕೊಡಲಾಯಿತು ಚಿತ್ರ: ಅನೂಪ್ ರಾಘ.ಟಿ.

'ಅರ್ಜುನ'ನ ನೆನಪಿನಲ್ಲಿ ಪ್ರಶಸ್ತಿ

'ಭೀಮ' ಆನೆಯ ಮಾವುತ ಗುಂಡಣ್ಣ, ಕಾವಾಡಿ ನಂಜುಂಡಸ್ವಾಮಿ ಅವರಿಗೆ, ಆನೆ ಸೆರೆ ಕಾರ್ಯಾಚರಣೆಯಲ್ಲಿ ಮೃತಪಟ್ಟ 'ಅರ್ಜುನ' ಆನೆಯ ನೆನಪಿನಲ್ಲಿ 'ಅರ್ಜುನ ಆನೆ ಪ್ರಶಸ್ತಿ' ಹಾಗೂ ತಲಾ ₹ 10 ಸಾವಿರ ನಗದನ್ನು ಇದೇ ವೇಳೆ ಸಚಿವ ಈಶ್ವರ ಖಂಡ್ರೆ ಪ್ರದಾನ ಮಾಡಿದರು.

ಸಂಜೆ ಮೈಸೂರಿನ ಅರಣ್ಯ ಭವನಕ್ಕೆ ಆನೆಗಳು ಆಗಮಿಸಿದವು. ಸೆ.22ರಂದು ನವರಾತ್ರಿ ಆರಂಭವಾಗಲಿದ್ದು, ಅ.2ರ ವಿಜಯದಶಮಿ ದಿನ ಜಂಬೂಸವಾರಿ ನಡೆಯಲಿದೆ.

ಬಾಲಕಿ ಅಪಹರಣ: ಆರೋಪಿ ಸೆರೆ

ಬೆಳಗಾವಿ: ಬಾಲ್ಯವಿವಾಹಕ್ಕೆ ಒಳಗಾಗಿ ಮಕ್ಕಳ ರಕ್ಷಣಾ ಘಟಕದಲ್ಲಿ ಆಶ್ರಯ ಪಡೆದಿದ್ದ ಬಾಲಕಿಯನ್ನು ಮದುವೆ ಆಗಿದ್ದ ಚಂದ್ರಕಾಂತ ಎಂಬುವವನು, ಬಾಲಕಿ ಅಪಹರಿಸಿದ ಪ್ರಕರಣದಡಿ ಬಂಧಿಸಲಾಗಿದೆ.

ಗೋಕಾಕ ತಾಲ್ಲೂಕಿನ 13 ವರ್ಷದ ಬಾಲಕಿಯನ್ನು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ರಕ್ಷಿಸಿ,ಜುಲೈ 25ರಂದು ಆಶ್ರಯ ಕೇಂದ್ರದಲ್ಲಿ ಇರಿಸಿದ್ದರು.

'ಜುಲೈ 31ರಂದು ಆಶ್ರಯ ಕೇಂದ್ರಕ್ಕೆ ಬಂದಿದ್ದ ಆರೋಪಿ, ನಾನು ಬಾಲಕಿಯ ಚಿಕ್ಕಪ್ಪ, [illegible] ಎಂದು ಹೇಳಿದ್ದ. ಬಳಿಕ, ಸ್ಕೂಟಿಯಲ್ಲಿ ಚಾಕು ತೋರಿಸಿ ಬೆದರಿಸಿ ಬಾಲಕಿ ಸಮೇತ ಬೈಕ್‌ನಲ್ಲಿ ಪರಾರಿಯಾಗಿದ್ದ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಂ.ಎಸ್. ಚೇತನ್‌ಕುಮಾರ್ ತಿಳಿಸಿದರು. 'ಸೋಮವಾರ ಆರೋಪಿ ಬಂಧಿಸಿ, ಬಾಲಕಿ ರಕ್ಷಿಸಲಾಯಿತು' ಎಂದು ನಗರ ಪೊಲೀಸ್ ಕಮಿಷನರ್ ತಿಳಿಸಿದರು.

ಚಿಟಿಕೆ ಸುದ್ದಿ

ಚಿಕ್ಕಮಗಳೂರು: ಮತ್ತೊಂದು ಆನೆ ಸೆರೆ



ಅರಣ್ಯ ಇಲಾಖೆ ಸೆರೆ ಹಿಡಿದಿರುವ ಸಲಗ

ಚಿಕ್ಕಮಗಳೂರು: ನರಸಿಂಹರಾಜಪುರ ತಾಲ್ಲೂಕಿನಲ್ಲಿ ಉಪಟಳ ನೀಡುತ್ತಿದ್ದ ಮತ್ತೊಂದು ಕಾಡಾನೆಯನ್ನು ಅರಣ್ಯ ಇಲಾಖೆಯು ಕಾರ್ಯಾಚರಣೆಯ ಮೊದಲ ದಿನವೇ ಸೆರೆ ಹಿಡಿದಿದೆ.

ಹಳೇ ಹಾರೇಕೊಪ್ಪ ಅರಣ್ಯದಲ್ಲಿ ಅಂದಾಜು 20 ವರ್ಷದ ಸಲಗವನ್ನು ಸೆರೆ ಹಿಡಿದಿದ್ದು, ಕೊಡಗು ಜಿಲ್ಲೆ ದುಬಾರೆ ಆನೆ ಶಿಬಿರಕ್ಕೆ ಕೊಂಡೊಯ್ಯಲಾಗುವುದು ಎಂದು ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು. ಶಿವಮೊಗ್ಗದ ಸಕ್ರೆಬೈಲಿನ ನಾಲ್ಕು, ದುಬಾರೆ ಶಿಬಿರದ ಮೂರು ಸಾಕಾನೆಗಳ ನೆರವನ್ನು ಕಾರ್ಯಾಚರಣೆಗೆ ಪಡೆಯಲಾಗಿತ್ತು. ಕಳೆದ ವಾರ ಕಾಡಾನೆ ದಾಳಿಗೆ ಇಬ್ಬರು ಮೃತಪಟ್ಟಿದ್ದರು.

ಎರಡು ಆನೆ ಸೆರೆಗೆ ಅನುಮತಿ ಇತ್ತು. ಜು.29ರಂದು ಒಂದು ಆನೆ ಸೆರೆ ಹಿಡಿಯಲಾಗಿತ್ತು.

ವಸತಿ ಶಾಲೆಯ ನಾಲ್ವರ ಅಮಾನತು

ನಂಜನಗೂಡು (ಮೈಸೂರು): ತಾಲ್ಲೂಕಿನ ತಗಡೂರಿನ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಪ್ರಾಂಶುಪಾಲೆ ಸೇರಿ ನಾಲ್ವರನ್ನು ಅಮಾನತುಗೊಳಿಸಿ, ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಕಾಂತರಾಜು ಆದೇಶ ಹೊರಡಿಸಿದ್ದಾರೆ.

ಪ್ರಾಂಶುಪಾಲೆ ವಸಂತ ಕುಮಾರಿ, ಪ್ರಭಾರ ನಿಲಯಪಾಲಕ ಮಹದೇವಪ್ಪ, ಗಣಿತ ವಿಷಯ ಶಿಕ್ಷಕ ಮಂಜುನಾಥ್, ಅತಿಥಿ ಶಿಕ್ಷಕ ಗಣೇಶ್ ಅವರನ್ನು ಅಮಾನತು ಮಾಡಲಾಗಿದೆ. 'ಮೂಲಸೌಕರ್ಯ ಕಲ್ಪಿಸಿಲ್ಲ' ಎಂದು ಆರೋಪಿಸಿ ವಿದ್ಯಾರ್ಥಿಗಳು ಭಾನುವಾರ ಪ್ರತಿಭಟಿಸಿ, ಕ್ರಮಕ್ಕೆ ಒತ್ತಾಯಿಸಿದ್ದರು.

ನೇಹಾ ಕೊಲೆ ಪ್ರಕರಣ: ಜಾಮೀನು ತಿರಸ್ಕೃತ

ಹುಬ್ಬಳ್ಳಿ: ವಿದ್ಯಾರ್ಥಿನಿ ನೇಹಾ ಹೀರೇಮಠ ಕೊಲೆ ಪ್ರಕರಣದ ಆರೋಪಿ ಫಯಾಜ್ ಕೊಂಡುನಾಯ್ಕ್ ಜಾಮೀನು ಅರ್ಜಿಯನ್ನು ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತಿರಸ್ಕರಿಸಿದೆ.

ಜಾಮೀನು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ ಆದೇಶ ಕಾಯ್ದಿರಿಸಿತ್ತು. ನ್ಯಾಯಾಧೀಶೆ ಪಲ್ಲವಿ ಬಿ.ಆರ್. ಸೋಮವಾರ ಅರ್ಜಿ ತಿರಸ್ಕರಿಸಿ ಆದೇಶ ಹೊರಡಿಸಿದರು. 2024ರ ಏ.18ರಂದು ನೇಹಾ ಕೊಲೆಯಾಗಿತ್ತು.

ಜಾನಪದ ಕೋರ್ಸ್: ಅರ್ಜಿ ಆಹ್ವಾನ

ರಾಮನಗರ: ಜಾನಪದ ಲೋಕದಲ್ಲಿ 2025-2026ನೇ ಶೈಕ್ಷಣಿಕ ಸಾಲಿಗೆ ಜಾನಪದ ಮತ್ತು ಪ್ರದರ್ಶಕ ಕಲೆಗಳ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೋರ್ಸ್ ಅವಧಿ ಒಂದು ವರ್ಷ. ಪ್ರತಿ ಭಾನುವಾರ ಮತ್ತು ಸರ್ಕಾರಿ ರಜೆ ದಿನ ತರಗತಿ ನಡೆಯುತ್ತವೆ. ಕನಿಷ್ಠ ಎಸ್‌ಎಸ್‌ಎಲ್‌ಸಿ ಪಾಸಾಗಿರುವ ಆಸಕ್ತರು ಆ.21ರೊಳಗೆ ಅರ್ಜಿ ಸಲ್ಲಿಸಬೇಕು.

ಸಂಪರ್ಕ: ಡಾ. ಸಂದೀಪ್ ಕೆ.ಎಸ್, ಸಂಚಾಲಕರು, ನಾಡೋಜ ಎಚ್.ಎಲ್. ನಾಗೇಗೌಡ ಸಂಶೋಧನಾ ಕೇಂದ್ರ, ಜಾನಪದ ಲೋಕ, ಐಜೂರು ಅಂಚೆ, ಬೆಂಗಳೂರು ದಕ್ಷಿಣ ಜಿಲ್ಲೆ-562159 ಅಥವಾ ಕರ್ನಾಟಕ ಜಾನಪದ ಪರಿಷತ್ತು ನಂ.1, ಜಲದರ್ಶಿನಿ ಬಡಾವಣೆ, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು.

ಮೊಬೈಲ್ ಸಂಖ್ಯೆ: 9844673191

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

ನಿಮ್ಮ ಗುರಿ ಸೇವೆಯಾಗಿರಲಿ. ಅದನ್ನು ಗೆಲುವಿಗಾಗಿ ಮಾಡಬೇಡಿ. ಗೆಲುವು ತನ್ನಷ್ಟಕ್ಕೆ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

–ವಿನೋಬಾ ಭಾವೆ

ಸಂಪಾದಕೀಯ

ಮಾಲೇಗಾಂವ್ ಸ್ಫೋಟ ಪ್ರಕರಣ ಹಳಿ ತಪ್ಪಿತೆ ನ್ಯಾಯದಾನ ವ್ಯವಸ್ಥೆ?

2008ರಲ್ಲಿ ಮಾಲೇಗಾಂವ್‌ನಲ್ಲಿ ನಡೆದ ಸ್ಫೋಟ ಪ್ರಕರಣದ ತನಿಖೆ ನಡೆಸಿದ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ದೋಷಾರೋಪ ಪಟ್ಟಿಯಲ್ಲಿ ಹೆಸರಿಸಿದ್ದ ಏಳೂ ಮಂದಿಯನ್ನು ನ್ಯಾಯಾಲಯವು ದೋಷಮುಕ್ತಗೊಳಿಸಿದೆ. ಮಾಲೇಗಾಂವ್‌ನಲ್ಲಿ ನಡೆದ ಸ್ಫೋಟವು ಆರು ಮಂದಿಯ ಜೀವ ತೆಗೆದಿತ್ತು. 2006ರಲ್ಲಿ ಮುಂಬೈನಲ್ಲಿ ನಡೆದ ರೈಲು ಸ್ಫೋಟದ ಎಲ್ಲ ಆರೋಪಿಗಳನ್ನು ನ್ಯಾಯಾಲಯವೊಂದು ದೋಷಮುಕ್ತಗೊಳಿಸಿದ ಕೆಲವೇ ದಿನಗಳ ನಂತರದಲ್ಲಿ, ಮಾಲೇಗಾಂವ್ ಸ್ಫೋಟ ಪ್ರಕರಣದ ಆರೋಪಿಗಳು ದೋಷಮುಕ್ತರಾಗಿದ್ದಾರೆ. ಇದು ಪ್ರಮುಖ ಪ್ರಕರಣಗಳಲ್ಲಿ ನ್ಯಾಯ ಕೊಡಿಸುವಲ್ಲಿ ತನಿಖಾಧಿಕಾರಿಗಳು ಹಾಗೂ ಪ್ರಾಸಿಕ್ಯೂಷನ್ ವಿಫಲವಾಗುತ್ತಿರುವುದಕ್ಕೆ ಇನ್ನೊಂದು ನಿದರ್ಶನದಂತೆ ಇದೆ. ಎರಡೂ ಪ್ರಕರಣಗಳಲ್ಲಿ ಆರೋಪಿಗಳನ್ನು ದೋಷಮುಕ್ತಗೊಳಿಸುತ್ತಿರುವುದಕ್ಕೆ ಸಾಕ್ಷ್ಯಾಧಾರಗಳ ಕೊರತೆ ಹಾಗೂ ಅಸಮರ್ಪಕ ತನಿಖೆಯನ್ನು ನ್ಯಾಯಾಲಯಗಳು ಕಾರಣವನ್ನಾಗಿ ಉಲ್ಲೇಖಿಸಿವೆ. ಮುಂಬೈ ಸ್ಫೋಟ ಪ್ರಕರಣದಲ್ಲಿ ಬಲವಂತವಾಗಿ ತಪ್ಪೊಪ್ಪಿಗೆ ಹೇಳಿಕೆ ಪಡೆದುಕೊಳ್ಳಲಾಗಿತ್ತು, ಸಾಕ್ಷಿಗಳಿಗೆ ಏನು ಹೇಳಬೇಕು ಎಂಬುದನ್ನು ಹೇಳಿಕೊಡಲಾಗಿತ್ತು ಎಂಬ ಗಂಭೀರ ಲೋಪಗಳನ್ನು ನ್ಯಾಯಾಲಯವು ಗುರುತಿಸಿದೆ. ಮಾಲೇಗಾಂವ್ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯವು 'ತೀವ್ರ ಪ್ರಮಾಣದಲ್ಲಿ ಅನುಮಾನವನ್ನು ಸಾಬೀತು ಮಾಡಲಾಗಿದೆಯಾದರೂ, ಆರೋಪಿಗಳು ದೋಷಿಗಳು ಎಂದು ಹೇಳಲು ಸಾಕಾಗುವಷ್ಟು ಆಧಾರ ಇರಲಿಲ್ಲ' ಎಂದು ಹೇಳಿದೆ. ಹೀಗಾಗಿ ಈ ಪ್ರಕರಣದಲ್ಲಿ ನ್ಯಾಯಾಲಯವು ಸಂದೇಹದ ಲಾಭವನ್ನು ಆರೋಪಿಗಳಿಗೆ ನೀಡಿದೆ.



ಮಾಲೇಗಾಂವ್ ಸ್ಫೋಟ ಪ್ರಕರಣದ ಆರೋಪಿಗಳು ಖುಲಾಸೆ ಆಗಿದ್ದಾರೆ. ಈ ವಿದ್ಯಮಾನ, ಪ್ರಮುಖ ಪ್ರಕರಣಗಳಲ್ಲಿ ನ್ಯಾಯದಾನ ವ್ಯವಸ್ಥೆ ಕುಂಟುತ್ತಿರುವುದಕ್ಕೆ ಮತ್ತೊಂದು ಉದಾಹರಣೆಯಂತಿದೆ.

ಮಾಲೇಗಾಂವ್ ಪ್ರಕರಣವು ಹಲವು ಬಗೆಯ ತಿರುವುಗಳನ್ನು ಪಡೆದುಕೊಂಡಿತ್ತು. ಆ ತಿರುವುಗಳು ರಾಜಕೀಯ ಸ್ಥಿತ್ಯಂತರಗಳು, ಸರ್ಕಾರದ ಚುಕ್ಕಾಣಿ ಹಿಡಿದವರಲ್ಲಿ ಆದ ಬದಲಾವಣೆಗಳಿಗೆ ಅನುಗುಣವಾಗಿ ಇದ್ದವು. ಹೇಮಂತ ಕರ್ಕರೆ ನೇತೃತ್ವದ 'ಮಹಾರಾಷ್ಟ್ರ ಭಯೋತ್ಪಾದನಾ ವಿರೋಧಿ ದಳ'ವು (ಎಟಿಎಸ್) ಬಲಪಂಥೀಯ ಹಿಂದೂ ಸಂಘಟನೆ 'ಅಭಿನವ ಭಾರತ'ದ ಜೊತೆ ನಂಟು ಹೊಂದಿದ್ದ ವ್ಯಕ್ತಿಗಳನ್ನು ಬಂಧಿಸಿತ್ತು. ಅವರಲ್ಲಿ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ಅವರೂ ಒಬ್ಬರು. ಪ್ರಜ್ಞಾ ಅವರು ನಂತರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಲೋಕಸಭಾ ಸದಸ್ಯರೂ ಆಗಿದ್ದರು. ಸ್ಫೋಟ ನಡೆದಾಗ ಮಹಾರಾಷ್ಟ್ರದಲ್ಲಿ ಹಾಗೂ ಕೇಂದ್ರದಲ್ಲಿ ಸರ್ಕಾರದ ನೇತೃತ್ವವನ್ನು ಕಾಂಗ್ರೆಸ್ ವಹಿಸಿತ್ತು. ಆಗ 'ಕೇಸರಿ ಭಯೋತ್ಪಾದನೆ' ಎಂಬ ಪದವು ಚಾಲ್ತಿಗೆ ಬಂದಿತ್ತು. ಪ್ರಕರಣದ ತನಿಖೆಯನ್ನು ನಂತರದಲ್ಲಿ ಎನ್‌ಐಎಗೆ ವಹಿಸಲಾಯಿತು. ಇದಾದ ನಂತರದಲ್ಲಿ, ಎನ್‌ಐಎ ಅಧಿಕಾರಿಗಳು ಕೆಲವರ ವಿರುದ್ಧದ ಆರೋಪಗಳನ್ನು ಕೈಬಿಟ್ಟರು. ಸಾಕ್ಷ್ಯಗಳ ಬಗ್ಗೆ ಪ್ರಶ್ನೆಗಳು ಮೂಡಿದ್ದವು. ವಿಚಾರಣೆಯ ಸಂದರ್ಭದಲ್ಲಿ 37 ಜನ ಪ್ರತಿಕೂಲ ಸಾಕ್ಷಿಗಳಾದರು. ಆರೋಪಿಗಳ ವಿಚಾರದಲ್ಲಿ 'ಮೃದು ಧೋರಣೆ' ತಳೆಯುವಂತೆ ಎನ್‌ಐಎ ಸೂಚಿಸಿದೆ ಎಂದು ಆಗ ಪ್ರಕರಣದ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್ ಆಗಿದ್ದ ರೋಹಿಣಿ ಸಾಲಿಯಾನ್ ಬಹಿರಂಗವಾಗಿ ಆರೋಪಿಸಿದ್ದರು. ನಂತರ ರೋಹಿಣಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಭಯೋತ್ಪಾದನೆಗೆ ಸಂಬಂಧಿಸಿದ ಹಲವು ಪ್ರಕರಣಗಳು ಈ ಹಿಂದೆಯೂ ತಾರ್ಕಿಕ ಅಂತ್ಯ ಕಂಡಿಲ್ಲ. 2006ರಲ್ಲಿ ನಡೆದ ಮಾಲೇಗಾಂವ್ ಸ್ಫೋಟ ಪ್ರಕರಣವು 37 ಜನರನ್ನು ಬಲಿ ಪಡೆದಿತ್ತು. ಆ ಸ್ಫೋಟಕ್ಕೆ ಸಂಬಂಧಿಸಿದ ಪ್ರಕರಣಗಳು ತಾರ್ಕಿಕ ಅಂತ್ಯ ಕಂಡಿಲ್ಲ. 2007ರಲ್ಲಿ 68 ಜನರ ಸಾವಿಗೆ ಕಾರಣವಾದ ಸಂಝೋತಾ ಎಕ್ಸ್‌ಪ್ರೆಸ್ ಸ್ಫೋಟ ಪ್ರಕರಣ, ಹೈದರಾಬಾದ್ ಮೆಕ್ಕಾ ಮಸೀದಿಯಲ್ಲಿ 2007ರಲ್ಲಿ ಒಂಬತ್ತು ಜನರ ಸಾವಿಗೆ ಕಾರಣವಾದ ಸ್ಫೋಟ, ಅಜ್ಮೇರ್ ದರ್ಗಾ ಷರೀಫ್‌ನಲ್ಲಿ ಮೂವರ ಸಾವಿಗೆ ಕಾರಣವಾದ ಸ್ಫೋಟ ಪ್ರಕರಣ ಕೂಡ ತಾರ್ಕಿಕ ಅಂತ್ಯ ಕಂಡಿಲ್ಲ. ಈ ಎಲ್ಲ ಪ್ರಕರಣಗಳ ಪೂರ್ಣ ಸತ್ಯ ಏನು ಎಂಬುದು ದೇಶಕ್ಕೆ ಗೊತ್ತಾಗುವ ಸಾಧ್ಯತೆಯೂ ಕಾಣುತ್ತಿಲ್ಲ. ಮುಂಬೈ ರೈಲು ಸ್ಫೋಟ ಪ್ರಕರಣದ ಆರೋಪಿಗಳನ್ನು ದೋಷಮುಕ್ತಗೊಳಿಸಿದ ಆದೇಶ ಪ್ರಶ್ನಿಸಿ ದೇವೇಂದ್ರ ಫಡಣವೀಸ್ ನೇತೃತ್ವದ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಆದರೆ ಮಾಲೇಗಾಂವ್ ಪ್ರಕರಣದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದೇ ಎಂಬ ಬಗ್ಗೆ ಎನ್‌ಐಎ ಏನೂ ಹೇಳಿಲ್ಲ. ಆರೋಪಿಗಳು ದೋಷಮುಕ್ತರಾಗಿರುವುದಕ್ಕೆ ಕಾರಣ ಅಸಮರ್ಥ ತನಿಖೆಯೇ, ತನಿಖಾ ಸಂಸ್ಥೆಗಳ ಪಕ್ಷಪಾತಿ ಧೋರಣೆಯೇ, ಅವುಗಳಲ್ಲಿ ಇರುವ ಪೂರ್ವಗ್ರಹಗಳೇ ಅಥವಾ ತನಿಖೆಯಲ್ಲಿ ಇದ್ದಿರಬಹುದಾದ ರಾಜಕೀಯ ಹಸ್ತಕ್ಷೇಪವೇ? ಇವುಗಳಲ್ಲಿ ಯಾವುದು ಕಾರಣ ಆಗಿದ್ದರೂ, ಪ್ರಮುಖ ಪ್ರಕರಣಗಳಲ್ಲಿ ನ್ಯಾಯದಾನ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡದೆ ಇರುವುದನ್ನು ಅದು ತೋರಿಸುತ್ತದೆ.

ಸುಸ್ಥಿರ ನಾಳೆಗೆ ಜೈವಿಕ ಇಂಧನ



ವಿಶ್ಲೇಷಣೆ

ಗುರುರಾಜ ಎಸ್. ದಾವಣಗೆರೆ

ಭವಿಷ್ಯದ ಇಂಧನ ಎಂದೇ ಪ್ರಸಿದ್ಧಿಯಾಗಿರುವ 'ಜೈವಿಕ ಇಂಧನ' ಪರಿಸರಕ್ಕೆ ಪೂರಕ ಆಗಿರುವುದರ ಜೊತೆಗೆ, ದೇಶದ ಆರ್ಥಿಕತೆ ಉತ್ತಮಗೊಳ್ಳಲೂ ಸಹಕಾರಿ. ರೈತರ ಹಿತ ಗಮನದಲ್ಲಿ ಇರಿಸಿಕೊಂಡು ಸಮರ್ಪಕ ಜೈವಿಕ ಇಂಧನ ನೀತಿ ಜಾರಿಯಾದರೆ, 2070ರ ವೇಳೆಗೆ ಶೂನ್ಯ ಇಂಗಾಲ ಹೊರಸೂಸುವಿಕೆಯ ಗುರಿ ಮುಟ್ಟಬಹುದು.

ಪಳೆಯುಳಿಕೆ ಇಂಧನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಶುದ್ಧ ಮತ್ತು ನವೀಕರಿಸಬಹುದಾದ ಇಂಧನದ ಬಳಕೆಯ ಮಾತು ಬಂದಾಗಲೆಲ್ಲ 'ಜೈವಿಕ ಇಂಧನ' ನೆನಪಾಗುತ್ತದೆ. 19ನೇ ಶತಮಾನದ ಕೊನೆಯ ವೇಳೆಗೆ ಜರ್ಮನ್ ಸಂಶೋಧಕ ಸರ್ ರುಡಾಲ್ಫ್ ಡೀಸೆಲ್, ಕಡಲೆಕಾಯಿ ಎಣ್ಣೆಯನ್ನು ಬಳಸಿ ಡೀಸೆಲ್ ಎಂಜಿನ್ ಅನ್ನು ಯಶಸ್ವಿಯಾಗಿ ಚಲಾಯಿಸಿ ತೋರಿಸಿದ್ದರು. ಅದು ಪರ್ಯಾಯ ಇಂಧನಗಳ ಸಾಧ್ಯತೆಗಳನ್ನು ಜಗತ್ತಿಗೆ ಪರಿಚಯಿಸಿತ್ತು. ಆ ಮಹತ್ವದ ಘಟನೆಯು ಅಚ್ಚರಿ ಹುಟ್ಟಿಸುವುದರ ಜೊತೆಗೆ ಭವಿಷ್ಯದ ಇಂಧನ ಮೂಲಗಳ ಕುರಿತು ಹೊಸ ದೃಷ್ಟಿಕೋನವನ್ನೇ ನೀಡಿತು. ಕೆಲವು ದೇಶಗಳಲ್ಲಿ ಜೈವಿಕ ಇಂಧನ ತಯಾರಿಕೆ ಮತ್ತು ಬಳಕೆ ಕುರಿತು ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳು ಶುರುವಾದವು.

ಸಸ್ಯಗಳು, ಪ್ರಾಣಿಗಳ ಕೊಬ್ಬು, ಕೃಷಿ ತ್ಯಾಜ್ಯ, ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳು ಮತ್ತು ಪಾಚಿಗಳಿಂದ ಜೈವಿಕ ಇಂಧನಗಳನ್ನು ಉತ್ಪಾದಿಸಲಾಗುತ್ತದೆ. ಜೈವಿಕ ಇಂಧನ ತಯಾರಿಕೆಯ ಪ್ರಕ್ರಿಯೆ ಸಂಕೀರ್ಣವಾದರೂ ಪರಿಣಾಮಕಾರಿ. ಜೈವಿಕ ಡೀಸೆಲ್ ತಯಾರಿಕೆಗೆ ಬಳಸುವ ಹೊಂಗೆ, ಹಿಪ್ಪೆ, ಬೇವಿನ ಎಣ್ಣೆ ಅಥವಾ ಬಳಸಿದ ಅಡುಗೆ ಎಣ್ಣೆಯನ್ನು 'ಟ್ರಾನ್ಸ್‌ಎಸ್ಟರಿಫಿಕೇಷನ್' (ಪರ್ಯಾಂತರೀಕರಣ) ರಾಸಾಯನಿಕ ಪ್ರಕ್ರಿಯೆ ಮೂಲಕ ಪರಿವರ್ತಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತೈಲವನ್ನು ಆಲ್ಕೋಹಾಲ್ ಜೊತೆ ಸಂಯೋಜಿಸಿ, ಗ್ಲಿಸರಿನ್ ಬೇರ್ಪಡಿಸಿ, ಶುದ್ಧ ಜೈವಿಕ ಡೀಸೆಲ್ ಪಡೆಯಲಾಗುತ್ತದೆ. ಇದನ್ನು ಪೆಟ್ರೋಲಿಯಂ, ಡೀಸೆಲ್ ಜೊತೆ ಮಿಶ್ರಣ ಮಾಡಿ ವಾಹನಗಳಲ್ಲಿ ಬಳಸಬಹುದು. ಅದೇ ರೀತಿ, ಜೈವಿಕ ಎಥೆನಾಲ್ ತಯಾರಿಕೆಗೆ ಕಬ್ಬು, ಜೋಳ, ಬೀಟ್‌ರೂಟ್ ಮತ್ತು ಬಾರ್ಲಿಯಂತಹ ಸಕ್ಕರೆ ಅಂಶ ಹೆಚ್ಚಿರುವ ಬೆಳೆಗಳನ್ನು ಹುದುಗು ಬರುವ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಯೀಸ್ಟ್‌ಗಳು ಸಕ್ಕರೆಯನ್ನು ಎಥೆನಾಲ್ ಆಗಿ ಪರಿವರ್ತಿಸುತ್ತವೆ. ನಂತರ ಅದನ್ನು ಶುದ್ಧೀಕರಿಸಿ ಪೆಟ್ರೋಲ್ ಜೊತೆ ಮಿಶ್ರಣ ಮಾಡಿ ಬಳಸಲಾಗುತ್ತದೆ.

ಜೈವಿಕ ಇಂಧನಗಳ ಬಳಕೆಯಿಂದ ಪರಿಸರದ ಮೇಲೆ ಗಂಭೀರವಾದ ಅಡ್ಡ ಪರಿಣಾಮಗಳಾಗುವುದಿಲ್ಲ. ಪಳೆಯುಳಿಕೆ ಇಂಧನಗಳು ಇಂಗಾಲದ ಡೈಆಕ್ಸೈಡ್ ಅನ್ನು ವಾತಾವರಣಕ್ಕೆ ಸೇರಿಸುವ ಮೂಲಕ ಶಾಖವರ್ಧಕ ಅನಿಲಗಳ ಪ್ರಮಾಣವನ್ನು ಹೆಚ್ಚಿಸಿದರೆ, ಜೈವಿಕ ಇಂಧನಗಳನ್ನು ಉತ್ಪಾದಿಸುವ ಸಸ್ಯಗಳು ತಮ್ಮ ಬೆಳವಣಿಗೆ ಸಮಯದಲ್ಲಿ ವಾತಾವರಣದಿಂದ ಇಂಗಾಲದ ಡೈಆಕ್ಸೈಡ್ ಹೀರಿಕೊಳ್ಳುತ್ತವೆ. ಇದು ಇಂಗಾಲದ ಚಕ್ರವನ್ನು ಸಮತೋಲನದಲ್ಲಿ ಇಡಲು ಮತ್ತು ಒಟ್ಟು ಇಂಗಾಲದ ಹೊರಸೂಸುವಿಕೆ ಕಡಿಮೆಯಾಗಲು ಸಹಕಾರಿ. ಇದರ ಜೊತೆಗೆ, ಜೈವಿಕ ಇಂಧನಗಳಲ್ಲಿ ಗಂಧಕ ಮತ್ತು ಇತರೆ ವಿಷಕಾರಿ ರಾಸಾಯನಿಕಗಳ ಪ್ರಮಾಣ ಬಹಳ ಕಡಿಮೆ ಇರುತ್ತದೆ. ಇದರಿಂದಾಗಿ, ವಾಯುಮಾಲಿನ್ಯ ಗಣನೀಯವಾಗಿ ಕಡಿಮೆಯಾಗುತ್ತದೆ. ಜೈವಿಕ ಇಂಧನ ಬಳಕೆಯಾದಾಗ ಅಪಾಯಕಾರಿ ತೇಲುಕಣಗಳ ಮತ್ತು ನೈಟ್ರಸ್ ಆಕ್ಸೈಡ್‌ಗಳ ಹೊರಸೂಸುವಿಕೆಯು, ಪಳೆಯುಳಿಕೆ ಇಂಧನಗಳು ಹೊಮ್ಮಿಸುವುದಕ್ಕಿಂತ ಹಲವು ಪಟ್ಟು ಕಡಿಮೆ ಇರುತ್ತದೆ.

ಜೈವಿಕ ಇಂಧನ ಕ್ಷೇತ್ರದಲ್ಲಿನ ಹೂಡಿಕೆಯು ಆರ್ಥಿಕತೆ, ಇಂಧನ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ ದೃಷ್ಟಿಯಿಂದ ಮಹತ್ವದ ಪಾತ್ರ ವಹಿಸುತ್ತಿದೆ. ಈ ಇಂಧನಗಳು ಪಳೆಯುಳಿಕೆ ಇಂಧನಗಳ ಆಮದನ್ನು ಕಡಿಮೆ ಮಾಡಲು ಸಹಾಯ ಮಾಡುವುದರಿಂದ ವಿದೇಶಿ ವಿನಿಮಯದ ಉಳಿತಾಯವಾಗುತ್ತದೆ.

ಕಬ್ಬಿನಿಂದ ತಯಾರಾದ ಎಥೆನಾಲ್ ಅನ್ನು ಬ್ರೆಜಿಲ್ ತನ್ನ ಆರ್ಥಿಕತೆಯ ಪ್ರಮುಖ ಭಾಗವನ್ನಾಗಿ ಮಾಡಿಕೊಂಡಿದೆ. ಅಲ್ಲಿನ ಬಹುತೇಕ ವಾಹನಗಳು 'ಫ್ಲೆಕ್ಸ್ ಫ್ಯೂಯಲ್' ಎಂಜಿನ್‌ಗಳನ್ನು ಹೊಂದಿದ್ದು, ಎಥೆನಾಲ್ ಅಥವಾ ಪೆಟ್ರೋಲ್ ಬಳಸುವ ಸಾಮರ್ಥ್ಯವನ್ನು ಹೊಂದಿವೆ. ಅಮೆರಿಕವು ಜೋಳವನ್ನು ಮುಖ್ಯ ಮೂಲವನ್ನಾಗಿ ಬಳಸಿಕೊಂಡು ಎಥೆನಾಲ್ ಉತ್ಪಾದನೆಯಲ್ಲಿ ವಿಶ್ವದಲ್ಲಿಯೇ ಮುಂಚೂಣಿಯಲ್ಲಿದೆ. ಯುರೋಪಿಯನ್ ಒಕ್ಕೂಟವು ಕಟ್ಟುನಿಟ್ಟಾದ ನೀತಿಗಳ ಮೂಲಕ ಜೈವಿಕ ಇಂಧನ ಬಳಕೆಯನ್ನು ಉತ್ತೇಜಿಸುತ್ತಿದೆ. ಈ ಬೆಳವಣಿಗೆಗಳು ಜೈವಿಕ ಇಂಧನಗಳು ಪರಿಸರಸ್ನೇಹಿ ಆಯ್ಕೆಯಷ್ಟೇ ಅಲ್ಲ, ಭವಿಷ್ಯದ ಆರ್ಥಿಕತೆಯ ನಿರ್ಣಾಯಕ ಭಾಗವೂ ಆಗಿವೆ ಎಂಬುದನ್ನು ತೋರಿಸುತ್ತವೆ.

ಜೈವಿಕ ಇಂಧನ ಕ್ಷೇತ್ರದಲ್ಲಿ ಭಾರತ ಮಹತ್ವದ ಹೆಜ್ಜೆಗಳನ್ನು ಇಟ್ಟಿದೆ. 2018ರಲ್ಲಿ ಜಾರಿಗೆ ತಂದ 'ಜೈವಿಕ ಇಂಧನಗಳ ರಾಷ್ಟ್ರೀಯ ನೀತಿ' ಅಡಿಯಲ್ಲಿ, ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣದ ಪ್ರಮಾಣವನ್ನು ಹೆಚ್ಚಿಸುವ ಗುರಿ ನಿಗದಿಪಡಿಸಲಾಗಿದೆ. ಆರಂಭದಲ್ಲಿ ಶೇ 10ರ ಮಿಶ್ರಣದ ಗುರಿ ಹೊಂದಿದ್ದರೂ, ಅದನ್ನು ಶೇ 20ಕ್ಕೆ ಹೆಚ್ಚಿಸುವ ಮಹತ್ವಾಕಾಂಕ್ಷೆಯ ಯೋಜನೆ ರೂಪಿಸಲಾಗಿದೆ. ಈ ಕಾರ್ಯಕ್ರಮ ಯಶಸ್ವಿಯಾಗಿ ಜಾರಿಯಲ್ಲಿದ್ದು, ತೈಲ ಆಮದು ವೆಚ್ಚ ಕಡಿಮೆಯಾಗಲು ಸಹಾಯ ಮಾಡುತ್ತಿದೆ. ಇದಲ್ಲದೆ, ಅಡುಗೆಗೆ ಬಳಕೆಯಾದ ಎಣ್ಣೆಯಿಂದ ಮತ್ತು ಹೊಂಗೆ, ಹಿಪ್ಪೆಗಳಿಂದ ಜೈವಿಕ ಡೀಸೆಲ್ ಉತ್ಪಾದನೆಗೆ ಒತ್ತು ನೀಡಲಾಗಿದೆ. ಅನೇಕ ರಾಜ್ಯಗಳಲ್ಲಿ ಜೈವಿಕ ಡೀಸೆಲ್ ಉತ್ಪಾದನಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕವು 'ಜೈವಿಕ ಇಂಧನ ಅಭಿವೃದ್ಧಿ ಮಂಡಳಿ'ಯನ್ನು ರಚಿಸಿದ ಮೊದಲ ರಾಜ್ಯವಾಗಿದೆ. ಜೈವಿಕ ಇಂಧನಗಳ ಅಭಿವೃದ್ಧಿಯು ದೇಶದ ಆರ್ಥಿಕತೆಗೆ ಲಾಭ ತರುವುದಲ್ಲದೆ, ಕೃಷಿ ವಲಯದಲ್ಲಿ ಹೆಚ್ಚುವರಿ ಆದಾಯದ ಮೂಲವನ್ನು ಸೃಷ್ಟಿಸುವ ಸಾಧ್ಯತೆಗಳಿವೆ.

ಆಹಾರ ಬೆಳೆಗಳನ್ನು ಜೈವಿಕ ಇಂಧನ ಉತ್ಪಾದನೆಗಾಗಿ ಬಳಸುವುದು ಸರಿಯೇ ಎಂಬ ಪ್ರಶ್ನೆ ಮೊದಲಿನಿಂದಲೂ ಇದೆ. ಆಹಾರ ಬೆಳೆಗಳನ್ನು ಜೈವಿಕ ಇಂಧನಕ್ಕಾಗಿ ಬಳಸುವುದರಿಂದ ರೈತರಿಗೆ ಉತ್ತಮ ಬೆಲೆ ಸಿಗುತ್ತದೆ. ಅದರಿಂದಾಗಿ, ಕೃಷಿ ಕ್ಷೇತ್ರದ ಆರ್ಥಿಕತೆ ಸುಧಾರಿಸುತ್ತದೆ ಮತ್ತು ಮಾರಾಟವಾಗದ ಹೆಚ್ಚುವರಿ ಕೃಷಿ ಉತ್ಪನ್ನಗಳು ವ್ಯರ್ಥವಾಗುವುದು ತಪ್ಪುತ್ತದೆ. ಆದರೆ, ಆಹಾರ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಜೈವಿಕ ಇಂಧನಕ್ಕಾಗಿ ಬಳಸಿದರೆ ಆಹಾರದ ಬೆಲೆಗಳು ಹೆಚ್ಚಾಗಿ, ಬಡ ದೇಶಗಳಲ್ಲಿ ಆಹಾರ ಭದ್ರತೆಗೆ ಅಪಾಯ ತರುವ ಸಾಧ್ಯತೆ ಇದೆ. ಜಾಗತಿಕವಾಗಿಯೂ ಆಹಾರದ ಕೊರತೆ ಉಂಟಾಗಬಹುದು. ಈ ಸಮಸ್ಯೆ ಪರಿಹರಿಸಿಕೊಳ್ಳಲು ಜನ– ಜಾನುವಾರು ಸೇವಿಸುವ ಆಹಾರಕ್ಕೆ ಪೈಪೋಟಿ ನೀಡದ ಬೆಳೆಗಳಿಂದ ಜೈವಿಕ ಇಂಧನಗಳನ್ನು ಉತ್ಪಾದಿಸುವುದು ಸೂಕ್ತ. ಹೊಂಗೆ, ಹಿಪ್ಪೆ, ಜಟ್ರೋಫಾದಂತಹ ಕೃಷಿಯೇತರ ಬೆಳೆಗಳು, ಪಾಚಿ, ವ್ಯರ್ಥ ಆಹಾರ, ಅವಧಿ ಮೀರಿದ ಪ್ಯಾಕ್ ಮಾಡಿದ ಆಹಾರ, ಕೃಷಿ ತ್ಯಾಜ್ಯ ಮತ್ತು ನಗರ ತ್ಯಾಜ್ಯಗಳನ್ನು ಜೈವಿಕ ಇಂಧನ ಉತ್ಪಾದಿಸಲು ಬಳಸುವುದರಿಂದ ಆಹಾರ ಭದ್ರತೆಗೆ ಧಕ್ಕೆಯಾಗುವುದಿಲ್ಲ ಮತ್ತು ಪರಿಸರಕ್ಕೂ ಹಾನಿ ಇರುವುದಿಲ್ಲ. ಭಾರತವು ಈ ನಿಟ್ಟಿನಲ್ಲಿ ಸುಧಾರಿತ ನೀತಿಗಳನ್ನು ಅಳವಡಿಸಿಕೊಂಡು ಮುನ್ನಡೆಯುತ್ತಿರುವುದು, 2070ರ ವೇಳೆಗೆ ಶೂನ್ಯ ಇಂಗಾಲ ಉತ್ಸರ್ಜನೆಯ ಗುರಿ ತಲುಪಲು ನೆರವಾಗಲಿದೆ.

ಜೈವಿಕ ಇಂಧನ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆಗಳು ಮತ್ತು ಪ್ರಯೋಗಗಳು ನಡೆದಿವೆ. ಪ್ರಖ್ಯಾತ ಗಾಂಧೀವಾದಿ ವಿಜ್ಞಾನಿ ಡಾ. ರಘುನಾಥ್ ಅನಂತ ಮಾಶೇಲ್ಕರ್ ಭಾರತದ ಜೈವಿಕ ಇಂಧನ ನೀತಿಗಳಿಗೆ ವೈಜ್ಞಾನಿಕ ಮತ್ತು ಸಾಮಾಜಿಕ ಆಯಾಮಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ವಿಜ್ಞಾನಿಗಳಾದ ಡಾ. ಅನಿಲ್ ಕುಮಾರ್ ಸಿನ್ಹಾ, ಡಾ. ಸಲೀಂ ಅಖ್ತರ್ ಫರೂಕಿ, ಡಾ. ನೀರಜ್ ಅತ್ರೇ, ಡಾ. ಜಯತಿ ತ್ರಿವೇದಿ ಮತ್ತು ಅವರ ತಂಡವು ಸೇರಿದಂತೆ ಹಲವು ವಿಜ್ಞಾನಿಗಳು, ಕೃಷಿ ತ್ಯಾಜ್ಯ ಮತ್ತು ಅಡುಗೆ ಎಣ್ಣೆಯಿಂದ ಜೈವಿಕ ಇಂಧನ ಉತ್ಪಾದಿಸುವ ವಿಧಾನಗಳ ಬಗ್ಗೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ', 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ಮತ್ತು ಇತರ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ.

ಜೈವಿಕ ಇಂಧನ, ತಂತ್ರಜ್ಞಾನಗಳ ಸುಧಾರಣೆ ಮತ್ತು ವಾಣಿಜ್ಯ ಬಳಕೆಗೆ ಪ್ರಮುಖ ಕೊಡುಗೆ ನೀಡಿದ್ದಾರೆ. ವಿಜ್ಞಾನಿ ಡಾ. ಎ.ಕೆ. ಸಿಂಗ್ ಅವರು ಸೆಣಬು ಮತ್ತು ಕೆನಾಫ್ (ದಾಸವಾಳ ಸೆಣಬು) ರೀತಿಯ ಬೆಳೆಗಳ ಕೃಷಿ ತ್ಯಾಜ್ಯದಿಂದ ಜೈವಿಕ ಎಥೆನಾಲ್ ಉತ್ಪಾದಿಸುವ ಸಾಧ್ಯತೆಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಈ ಸಂಶೋಧನೆಗಳು ಯಶಸ್ವಿಯಾದರೆ ಆಹಾರ ಬೆಳೆಗಳ ಮೇಲಿನ ಒತ್ತಡ ತನ್ನಿಂತಾನೇ ಕಡಿಮೆಯಾಗುತ್ತದೆ.

ತಮಿಳುನಾಡು ಕೃಷಿ ವಿಶ್ವವಿದ್ಯಾಲಯವು ಹೊಂಗೆ, ಲಕ್ಷ್ಮೀತರು (ಸಿಮರೂಬಾ), ಕಾಸಿಗಿಡ (ಜಟ್ರೋಫಾ) ಮತ್ತು ಇತರ ಎಣ್ಣೆಬೀಜಗಳಿಂದ ತೈಲವನ್ನು ಹೊರತೆಗೆಯುವ ವಿಧಾನಗಳು, ಆ ತೈಲವನ್ನು ಜೈವಿಕ ಡೀಸೆಲ್ ಆಗಿ ಪರಿವರ್ತಿಸುವ ಪ್ರಕ್ರಿಯೆಗಳು ಮತ್ತು ಅದರ ಇಂಧನ ಗುಣಮಟ್ಟದ ಬಗ್ಗೆ ವ್ಯಾಪಕ ಸಂಶೋಧನೆ ನಡೆಸಿದೆ. ಜೈವಿಕ ಇಂಧನಗಳು ಬರೀ ಪರಿಸರಸ್ನೇಹಿ ಇಂಧನಗಳಾಗಿರದೆ, ದೇಶದ ಆರ್ಥಿಕತೆ, ರೈತರ ಜೀವನಮಟ್ಟ ಮತ್ತು ಇಂಧನ ಭದ್ರತೆಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ವಿಶ್ವದ ಸುಸ್ಥಿರ ಭವಿಷ್ಯಕ್ಕಾಗಿ ಪರ್ಯಾಯ ಇಂಧನದ ರೂಪದಲ್ಲಿ ಜೈವಿಕ ಇಂಧನ ಸಿಕ್ಕಿದೆ. ರೈತರ ಹಿತ ಕಡೆಗಣಿಸದೆ ತಂತ್ರಜ್ಞಾನ ಹಾಗೂ ನೀತಿಗಳ ಸಮರ್ಥ ಅನುಷ್ಠಾನದಿಂದ ಜೈವಿಕ ಇಂಧನಗಳನ್ನು ಭವಿಷ್ಯದ ಇಂಧನ ಮೂಲವನ್ನಾಗಿ ಮಾಡಬಹುದು.



ವಾಚಕರ ವಾಣಿ

'ಮಿಶ್ರ–ಪತಿ'ಗಳು ಎನ್ನಬೇಕೇ?

ಖುಷಿಯಿಂದ ಚಪಾತಿ ತಿನ್ನಬಹುದು. ಅಂತೆಯೇ, ಉಪ್ಪಿಟ್ಟನ್ನೂ ಸವಿಯಬಹುದು. ಇವೆರಡನ್ನೂ ಮಿಶ್ರಣ ಮಾಡಿ ಬಡಿಸಿದರೆ ಏನಾಗಲಿದೆ? ಇದು ತುಸು 'ತಲೆಹರಟೆ', ಕಲ್ಪನೆ ಅನಿಸಬಹುದು. ಕೇಂದ್ರ ಸ್ವಾಸ್ಥ್ಯ ಸಚಿವಾಲಯದ ಹೊಸ ಯೋಜನೆಯು ಇಂತಹದ್ದೇ ಆಗಿದೆ. ಎಂಬಿಬಿಎಸ್ ಜತೆಯಲ್ಲಿ ಬಿಎಎಂಎಸ್ ಕೋರ್ಸ್ ಅನ್ನು ಮಿಶ್ರಣ ಮಾಡಿ ಒಂದು ವೈದ್ಯಕೀಯ ಪದವಿ ಶಿಕ್ಷಣ ಆರಂಭಿಸುವ ತುರಾತುರಿಯಲ್ಲಿದೆ! ಈ ಶಿಕ್ಷಣ ಪಡೆಯುವ ಪದವೀಧರರು ಮತ್ತು ವೈದ್ಯರನ್ನು 'ಮಿಶ್ರ-ಪತಿ'ಗಳು ಎಂದು ಕರೆಯಬೇಕೇ?

ಸಿದ್ಧ, ಆಯುರ್ವೇದ, ಯುನಾನಿ, ಅಲೋಪತಿ, ಹೋಮಿಯೊಪತಿ – ಈ ಒಂದೊಂದು ವೈದ್ಯಕೀಯ ಪದ್ಧತಿಯೂ ದೀರ್ಘಕಾಲದ ಅವಧಿಯಲ್ಲಿ ವಿಕಸನ ಹೊಂದಿ, ಪ್ರತ್ಯೇಕ ಅಸ್ಮಿತೆ ಹೊಂದಿವೆ. ಕೇಂದ್ರ ಆರೋಗ್ಯ ಸಚಿವಾಲಯವು ಈಗಲಾದರೂ ವಸ್ತುಸ್ಥಿತಿ ಮನಗಂಡು, ಪರಿಣತರಲ್ಲದ ವೈದ್ಯರನ್ನು ಸೃಷ್ಟಿಸುವ ಯತ್ನವನ್ನು ಕೈಬಿಡುವುದು ಒಳಿತು.

ಡಿ.ವಿ. ಮೋಹನ ಪ್ರಕಾಶ್, ಮೈಸೂರು

ಹತ್ತಿದ ಏಣಿ ಒದೆಯಬೇಡಿ

'ದೇಶದ ಚುನಾವಣಾ ವ್ಯವಸ್ಥೆಯು ಈಗಾಗಲೇ ಸತ್ತು ಹೋಗಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಆದರೆ, ಸತ್ತಿರುವ ಚುನಾವಣಾ ವ್ಯವಸ್ಥೆಯಲ್ಲೂ ಕರ್ನಾಟಕ, ತೆಲಂಗಾಣದಲ್ಲಿ ಕಾಂಗ್ರೆಸ್ ಗೆದ್ದಿದೆ. ರಾಹುಲ್ ಸಹೋದರಿ ಪ್ರಿಯಾಂಕಾ ಗಾಂಧಿ, ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದಾರೆ. 'ಎಷ್ಟೇ ಎತ್ತರಕ್ಕೇರಿದರೂ ಹತ್ತಿದ ಏಣಿ ಒದೆಯಬೇಡಿ' ಎಂಬ ನಾಣ್ಣುಡಿಯನ್ನು ರಾಹುಲ್ ನೆನಪಿಸಿಕೊಳ್ಳಬೇಕು.

ವೇದಾಂತ್, ಬೆಂಗಳೂರು

ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿ

ಬೆಂಗಳೂರಿನಲ್ಲಿ ಆರೋಪಿಗಳಿಬ್ಬರು ಬಾಲಕನನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟು, ನಂತರ ಪೊಲೀಸರಿಗೆ ಸಿಕ್ಕಿ ಬೀಳುವ ಭಯದಲ್ಲಿ ಅವನನ್ನು ಕೊಂದು ಸುಟ್ಟು ಹಾಕಿರುವ ಸುದ್ದಿ ಓದಿ ದಿಗ್ಭ್ರಮೆಯಾಯಿತು. ಒಮ್ಮೊಮ್ಮೆ ಕ್ರೂರಮೃಗಗಳೇ ಕ್ರೂರಿಗಳಾಗದ ನಿದರ್ಶನವಿದೆ. ಆದರೆ, ಬಾಲಕನನ್ನು ಕೊಂದ ಆರೋಪಿಗಳ ಮನಃಸ್ಥಿತಿ ಎಂತಹದ್ದಿರಬೇಕು? ಆರೋಪಿಗಳ ಬಗ್ಗೆ ಪೊಲೀಸರು ನ್ಯಾಯಾಲಯಕ್ಕೆ ಸೂಕ್ತ ಸಾಕ್ಷ್ಯಾಧಾರ ಸಲ್ಲಿಸಬೇಕು. ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗಲಿ.

ಮಂಜುನಾಥ್ ಪಾಯಣ್ಣ, ಮಂಡ್ಯ

'ಮಾಧುರಿ' ಮತ್ತೆ ಮಠ ಸೇರುವಳೇ?

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ನಾಂದಣಿ ಜೈನ ಮಠದಲ್ಲಿ 34 ವರ್ಷದಿಂದ 'ಮಹಾದೇವಿ' ಹೆಸರಿನ ಹೆಣ್ಣಾನೆಯನ್ನು ಸಾಕಲಾಗಿತ್ತು. ಆ ಆನೆಯನ್ನು ಭಕ್ತರು 'ಮಾಧುರಿ' ಎಂದೂ ಕರೆಯುತ್ತಿದ್ದರು. ಪೇಟಾ ಇಂಡಿಯಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಬಾಂಬೆ ಹೈಕೋರ್ಟ್, ಗುಜರಾತ್‌ನ ಜಾಮ್‌ನಗರದ 'ವಂತಾರ' ಕೇಂದ್ರಕ್ಕೆ ಆನೆಯನ್ನು ಸ್ಥಳಾಂತರಿಸಲು ಆದೇಶಿಸಿದೆ. ಆನೆಯನ್ನು ಮರಳಿ ಮಠಕ್ಕೆ ನೀಡುವಂತೆ ಒತ್ತಾಯಿಸಿ ನಾಂದಣಿಯಿಂದ ಕೊಲ್ಹಾಪುರದವರೆಗೆ ಭಕ್ತರು ಪಾದಯಾತ್ರೆ ನಡೆಸಿದ್ದಾರೆ. ಭಕ್ತರ ನಿವೇದನೆಯನ್ನು ನ್ಯಾಯಾಲಯ ಮತ್ತು ಸರ್ಕಾರ ಮನ್ನಿಸಬಹುದೆಂಬ ನಿರೀಕ್ಷೆ ಹುಸಿಯಾಗದಿರಲಿ.

ಎಸ್.ಎನ್. ಜೈನ್, ಪುತ್ತೂರು

ತುರುಗಾಹಿ ರಾಮಣ್ಣನ ನೆನಪು

'ದನಕಾಯೋನು ಅನ್ನಬೇಡಿ. ಆತನ ಗಳಿಕೆಯನ್ನೊಮ್ಮೆ ನೋಡಿ!' (ಪ್ರ.ವಾ., ಆಗಸ್ಟ್ 3) ವರದಿ ಓದಿದಾಗ ಶರಣರಲ್ಲಿ ಒಬ್ಬರಾದ 'ತುರುಗಾಹಿ ರಾಮಣ್ಣ'ನವರ; 'ಹಸುವ ಕಾವಲ್ಲಿ ದೆಸೆಯನರಿತು, ಎತ್ತ ಕಾವಲ್ಲಿ ಪೃಥ್ವಿಯನರಿದು, ಕರುವ ಕಟ್ಟುವಲ್ಲಿ ಗೊತ್ತ ಕಂಡು, ಧನವ ಕಾವಲ್ಲಿ ಸಜ್ಜನನಾಗಿ, ಜೀವಧನವ ಕಂಡಲ್ಲಿ ಮನ ಮುಟ್ಟದೆ!' ವಚನ ನೆನಪಾಯಿತು. ಶರಣರು ದನ ಕಾಯುವ ಕಾಯಕದ ಅನುಭವವನ್ನು ಆಧ್ಯಾತ್ಮಿಕ ಚಿಂತನೆಗಳೊಂದಿಗೆ ಬೆರೆಸಿ ಹೇಳಿರುವ ವಚನ ಇದಾಗಿದೆ.

'ಹಸುವನ್ನು ಕಾಯುವಾಗ ಅದು ಯಾವ ದಿಕ್ಕಿಗೆ ಹೋಗುತ್ತಿದೆ ಎಂದು ಅರಿಯಬೇಕು. ಎತ್ತು ಯಾವ ಜಾಗದಲ್ಲಿ ಮೇಯುತ್ತದೆ, ಯಾವ ಜಾಗದಲ್ಲಿ ವಿಶ್ರಮಿಸುತ್ತದೆ ಎಂದು ಗಮನಿಸಬೇಕು. ಕರುವನ್ನು ಕಟ್ಟುವಾಗ ಅದು ಕಟ್ಟಿದ ಜಾಗದಲ್ಲಿಯೇ ಇರಲು ಕಲಿತುಕೊಳ್ಳಬೇಕು. ಅದು ಜ್ಞಾನದ ಸಂಕೇತ. ಧನವನ್ನು ಅಂದರೆ ಪ್ರಾಣಿಗಳನ್ನು ಕಾಯುವಾಗ ಸಜ್ಜನನಾಗಿರಬೇಕು. ಅವುಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಜೀವ ಮತ್ತು ಧನವನ್ನು ಕಂಡಾಗ ಮನಸ್ಸು ಚಂಚಲವಾಗಬಾರದು' ಎಂಬುದನ್ನು ಗೋಪಾಲಕರು ಅರಿತುಕೊಳ್ಳಬೇಕು ಎನ್ನುತ್ತಾರೆ ಶರಣರು.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

'ಅಹಿಂಸೆ' ಗಾಂಧಿಯ ಅತಿದೊಡ್ಡ ಕೊಡುಗೆ

'ಅಹಿಂಸೆ ದೌರ್ಬಲ್ಯವಲ್ಲ, ಅನಿವಾರ್ಯ' ಲೇಖನದಲ್ಲಿ (ಲೇ: ಅರವಿಂದ ಚೊಕ್ಕಾಡಿ, ಪ್ರ.ವಾ., ಆಗಸ್ಟ್ 2) ಬ್ರಿಟಿಷರ ವಿರುದ್ಧ ಗಾಂಧಿಯ ಅಹಿಂಸಾತ್ಮಕ ಹೋರಾಟವನ್ನು ಅನಿವಾರ್ಯವಾಗಿತ್ತು ಎಂದು ಹೇಳಲಾಗಿದೆ. ಗಾಂಧೀಜಿ, ಅಹಿಂಸೆ ಮತ್ತು ಸತ್ಯಾಗ್ರಹವನ್ನು ಮಾನವ ಸಮಾಜದ ಬಲವಾದ ಆಯುಧಗಳೆಂಬುದನ್ನು ಕಂಡುಕೊಂಡಿದ್ದರು. ಅವು ಬ್ರಿಟಿಷರ ಬಾಹುಬಲಕ್ಕೆ ಹೇಸಿ ಸೃಷ್ಟಿಯಾದ ಯುದ್ಧ ತಂತ್ರಗಳಲ್ಲ. ಮಾನವ ಸಮಾಜ ಸತ್ಯ ಮತ್ತು ಅಹಿಂಸೆಯಿಂದ ಮಾತ್ರ ನಾಗರಿಕರಾಗಬಹುದು ಎಂಬುದನ್ನು ಮನಗಂಡಿದ್ದರು. ಅವರು ವೆಸ್ಟ್ ಮಿನಿಸ್ಟರ್ ಮೇಲಿನ ದಾಳಿ ಖಂಡಿಸಿದ್ದು ಅವರೊಳಗಿದ್ದ ಸಕಲ ಮಾನವರೂ ಕ್ಷೇಮದಿಂದ ಇರಬೇಕೆಂಬ ಹಂಬಲದಿಂದ. ಗಾಂಧಿಯವರ ಅಹಿಂಸೆ ಎಂಬ ದಿವ್ಯ ಮೌಲ್ಯ ಅನಿವಾರ್ಯವಾದದ್ದಲ್ಲ; ಅವಶ್ಯಕವಾದದ್ದು.

ಧನಂಜಯ್ ಡಿ. ಮೂರ್ತಿ, ಬೆಂಗಳೂರು

ಚಾಟಿ



ಪಾಷಾಣಗುಂಡಿಗೆಯ ಸಮಾಜ

ಓದುವ ಚಿಕ್ಕಮಕ್ಕಳು ಆತ್ಮಹತ್ಯೆಯಂತಹ ದಾರುಣ ಆಯ್ಕೆಯೆದುರು ಬಂದು ನಿಲ್ಲುವ ಕಾರಣಗಳಾದರೂ ಏನು? ಇಲ್ಲಿನ ಸರ್ಕಾರಗಳು, ಪೋಷಕ ವರ್ಗ, ಸಾಮಾಜಿಕ ಸಂಘಟನೆಗಳು, ಬುದ್ಧಿಜೀವಿ ವರ್ಗ, ಈ ಬಗ್ಗೆ ಸಂವೇದನಾಶೀಲವಾಗಿ ಯೋಚಿಸುವುದನ್ನಾಗಲೀ ಅಥವಾ ಹೊಣೆ ಹೊರುವುದಾಗಲೀ ಮಾಡುತ್ತಿಲ್ಲ. ಅಷ್ಟರಮಟ್ಟಿಗೆ ಪಾಷಾಣಗುಂಡಿಗೆಯ ಸಮಾಜವಾಗಿರುವ ನಾವು ಮಕ್ಕಳ ಬಲಿ ತೆಗೆದುಕೊಳ್ಳುತ್ತಲೇ ಇರುತ್ತೇವೆ.

ನಟರಾಜ ಕೆ.ಪಿ., ಕವಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ಸುಪ್ರೀಂ ಕೋರ್ಟ್ ಹಾಗೂ ಕೆಲವು ಹೈಕೋರ್ಟ್‌ಗಳು ಇತ್ತೀಚೆಗೆ ರಾಜಕೀಯ ಪ್ರೇರಿತ ನಿರ್ದೇಶನ ಹಾಗೂ ನೀಡುತ್ತಿರುವ ತೀರ್ಪುಗಳ ವಿರುದ್ಧ ರಾಷ್ಟ್ರಪತಿ ಅವರು ಮಧ್ಯಪ್ರವೇಶಿಸಿ, ಸಂವಿಧಾನ ಹಾಗೂ ನ್ಯಾಯಾಂಗ ವ್ಯವಸ್ಥೆಯ ನಂಬಿಕೆ ಉಳಿಸಬೇಕಿದೆ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 5-8-2000

• ತಲೈಮಲೈ ಕಾಡಿನಲ್ಲಿ ರಾಜ್‌ಕುಮಾರ್?

ತಲೈಮಲೈ (ತಮಿಳುನಾಡು), ಆಗಸ್ಟ್ 4– ವೀರಪ್ಪನ್‌ನಿಂದ ಅಪಹರಣಕ್ಕೆ ಒಳಗಾಗಿರುವ ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಅವರು, ತಲೈಮಲೈ ಅರಣ್ಯದ ನೆಲೆಯೊಂದರಲ್ಲಿ ಇದ್ದಾರೆಂದು ಮೂಲಗಳು ತಿಳಿಸಿವೆ.

ಗಾಜನೂರಿನ ಹತ್ತಿರದಲ್ಲೇ ಇರುವ ಈ ಕಾಡಿನಲ್ಲಿ 18ನೇ ಶತಮಾನದ ಅಂತ್ಯದಲ್ಲಿ ಟಿಪ್ಪುಸುಲ್ತಾನ್ ಬೇಟೆಗೆಂದು ಕಟ್ಟಿಸಿದ್ದ ಹಳೆಯ ಮಂಟಪವೊಂದರಲ್ಲಿ ವೀರಪ್ಪನ್ ತಂಡ ತಂಗಿದ್ದುದನ್ನು ಮರ ಕಡಿಯಲು ಹೋದ ಕಾಡಿನ ಜನರು ನಿನ್ನೆ ಕಂಡಿದ್ದಾರೆಂದು ಹೇಳಲಾಗಿದೆ.

• ಕಾಶ್ಮೀರ ಹತ್ಯಾಕಾಂಡ; ವಿದೇಶಿ ಕೈವಾಡ ಸ್ಪಷ್ಟ

ನವದೆಹಲಿ, ಆಗಸ್ಟ್ 4– ಜಮ್ಮು ಮತ್ತು ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಹತ್ಯಾಕಾಂಡದಿಂದ ಅಲ್ಲಿ ಶಾಂತಿ ಸ್ಥಾಪಿಸುವ ಭಾರತದ ಸಂಕಲ್ಪ ಬದಲಾಗದು ಎಂದು ಲೋಕಸಭೆಯಲ್ಲಿ ಇಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಘೋಷಿಸಿದರು.

ಅಲ್ಲಿನ ಭದ್ರತಾ ಪಡೆ ಮತ್ತು ಸಾರ್ವಜನಿಕರು ನೀಡಿದ ಮಾಹಿತಿಯಿಂದ ಕೊಲೆಗಡುಕರು ವಿದೇಶಿಯರೆನ್ನುವುದು ಸ್ಪಷ್ಟವಾಗುತ್ತದೆ ಎಂದು ತಿಳಿದುಬಂದಿದೆ.

75 ವರ್ಷಗಳ ಹಿಂದೆ

ಶನಿವಾರ, 5-8-1950

• ಈ ತಿಂಗಳ ಭದ್ರತಾ ಸಮಿತಿಯಲ್ಲಿ ಕಾಶ್ಮೀರ ಪ್ರಶ್ನೆ ಚರ್ಚೆ ಸಂಭವ

ಲೇಕ್ ಸಕ್ಸೆಸ್, ಆಗಸ್ಟ್ 4– ವಿಶ್ವಸಂಸ್ಥೆಯ ವೃತ್ತಗಳಲ್ಲಿ ಕೊರಿಯಾದ ಪ್ರತಿಬಿಂಬ ಹಾಗೂ ಭೂತವೆಂಬಂತೆ ಪರಿಗಣಿಸಲ್ಪಡುತ್ತಿರುವ ಕಾಶ್ಮೀರ ಸಮಸ್ಯೆಯು, ಈ ತಿಂಗಳಿನಲ್ಲಿ ವಿಶ್ವ ಭದ್ರತಾ ಸಮಿತಿಯ ಮುಂದೆ ಚರ್ಚೆಗೆ ಬರಬಹುದೆಂಬ ಅಂಶವು ವಿಶ್ವಸಂಸ್ಥೆಯ ಸಮೀಪವರ್ತಿ ವೃತ್ತಗಳಲ್ಲಿ ಚರ್ಚಿಸಲ್ಪಡುತ್ತಿದೆ ಎಂದು ಪಿಟಿಐ ಪ್ರತಿನಿಧಿ ಪಿ.ಡಿ.ವಾಗ್ಲೆ ತಂತಿ ಮಾಡಿದ್ದಾರೆ. ಕೊರಿಯಾ ಮತ್ತು ಕಾಶ್ಮೀರ ವಿಚಾರಗಳೆರಡೂ ಭದ್ರತಾ ಸಮಿತಿಯು ಪ್ರವೇಶಿಸಿ ವಿಶ್ವಸಂಸ್ಥೆಯ ಪ್ರಣಾಳಿಕೆಯ ಬೇರೆ ಬೇರೆ ಪರಿಮಿತಿಗನುಸಾರವಾಗಿ ಪರಿಹರಿಸುವಂತಹ ಮುಖ್ಯ ಸಮಸ್ಯೆಗಳು.

ಚುರುಮುರಿ



ಅದೃಶ್ಯಂ ಫೈಲ್ಸ್

• ಡಿ.ಎಸ್. ಲಿಂಗರಾಜು

'ಅಣ್ತಮ್ಮ, ನನ್ನ ಭಾವ ನೆಂಟನೊಬ್ಬ ಒಳ್ಳೆ ಇಲಾಖೇಲಿ ದೊಡ್ಡಾಫೀಸರಾಗಿದ್ದ. ಕಮಾಯಿ ಚೆನ್ನಾಗಿದ್ರೂ ಮನೇಲಿ ಹೆಂಡ್ರ ಸ್ಯಾಲೆ, ಮಕ್ಕಳ ಅಂಗಿ ಹರಿದು ಹಲ್ಲಂಡೆ ಆಗಿತ್ತು. ಆಫೀಸಿಗೆ ದೂರದಾಗೇ ಕಾರು ನಿಲ್ಲಿಸಿ, ಶೂ ಬಿಚ್ಚಿ ಕಾರಲ್ಲಿ ಮಡಗಿ, ಹಳೇ ಅಂಗಿ, ಹಳೆ ಚಪ್ಪಲಿ ಮೆಟ್ಕಂಡು ಆಫೀಸಿಗೆ ಹೋಗ್ತಿದ್ದ ಈ ಜಿಪುಣ. ಜನದ ಕಣ್ಣಿಗೆ ಕಾಣಿಸಿಗ್ಯಬಾರದು ಅಂತಿದ್ದ' ತಿಪ್ಪಣ್ಣ ನೆನಪಿನ ಗಂಟು ಬಿಚ್ಚತೊಡಗಿದ್ದ.

'ಈ ಥರಕೂ ಜನಿದ್ದಾರ್ಲಾ?' ಅಂತಂದೆ.

'ಕೇಳು. ರಿಟೈರಾಗ ಟೇಮಲ್ಲಿ ಲೋಕಾಯುಕ್ತರ ಆಫೀಸಿಗೋಗಿ, ಸಾ ಮೂವತ್ತು ವರ್ಷದಿಂದಾ ಅಕ್ರಮ ಸಂಪಾದ್ನೆ ಮಾಡಿ ಮನಸ್ಸಿಗೆ ಸ್ಯಾನೆ ಕಸಿವಿಸಿಯಾಗ್ಯದೆ. ಯಾರ್ನೂ ನಂಬಂಗಿಲ್ಲ ಸಾ. ಅದುಕ್ಕೇ ದುಡ್ಡು ಹೂತಾಕಿವ್ನಿ. ತೋರುಸ್ತೀನಿ ಬರ್ರಿ ಅಂತ ಕರಕೋದನಂತೆ' ತಿಪ್ಪಣ್ಣನ ಕತೆಗೆ ಬೆರಗಾದೆ.

'ಹೈಕೋರ್ಟು ಮುಂದ್ಕೆ ಕರಕೋಗಿ, ಈ ಗಿಡದ ಬಡ್ಡೇಲಿ ಒಂದು ಕೇಜಿ ಚಿನ್ನ ಅದೆ ಅಂದ್ನಂತೆ. ಆಮೇಲೆ, ಎರಡನೇ ಸ್ಲಾಟು ತುರಹಳ್ಳಿ ಕಾಡಲ್ಲಿ, ಮೂರನೇದು ಕೊಮ್ಮಘಟ್ಟದೇಲಿ, ನಾಲ್ಕನೇದು ಬೆಂಗಳೂರು ಯೂನಿವರ್ಸಿಟೀಲಿ, ಐದನೇದು ದೊಡ್ಡಾಲದ ಮರದ ತಾವದೆ. ಹಿಂಗೇ ಹದಿನೈದು ಸ್ಲಾಟು ತೋರಿಸಿ, ಅಲ್ಲೆಲ್ಲಾ ದುಡ್ಡು–ಕಾಸು ಹೂತಾಕಿವ್ನಿ ಅಂದ್ನಂತೆ.'

'ಅಲ್ಲೆಲ್ಲಾ ಮನೆ, ಕಟ್ಟಡ ಎದ್ದಿರತವಲ್ಲಾ ಅಣ್ತಮ್ಮಾ? ಯಾರಾದ್ರು ಎಪ್ಪೆಸ್ ಮಾಡಿದ್ರೆ?' ನನ್ನ ಅನುಮಾನ ಹೇಳಿದೆ.

'ಪೊಲೀಸು, ರೆವಿನ್ಯೂ, ಲೋಕಾಯುಕ್ತರು, ನ್ಯಾಯಾಧೀಸರು, ಟೀವಿಯೋರ ಮುಂದೆ ಈಯಪ್ಪನು ತೋರಿಸಿದ ಜಾಗದಲ್ಲೆಲ್ಲಾ ಸೋಸಿದರೂ ಹಳೇ ಮೆಟ್ಟು, ಹಳೇ ಕರ್ಚೀಫು, ಹರಿದೋಗಿರ ಚಡ್ಡಿಗಳು ಮಾತ್ರ ಈಚೆಗೆ ಬಂದವಂತೆ' ತಿಪ್ಪಣ್ಣ ಹೇಳಿದ.

'ಲೋಕಾಯುಕ್ತರು ಸಿಟ್ಟಿಗಂದು, ಥೋ, ಇವಿ ಬ್ಯಾಟೆಗೆ ಬಂದು ತಮಟೆ ಬಡಿದಂಗಾತು ಅಂತ ಮಕ್ಕುಗಿದು ಹೋದ್ರು' ತಿಪ್ಪಣ್ಣ ಕಾಸು ಅದೃಶ್ಯವಾದ ಕತೆ ಮುಗಿಸಿದ.

ಸಂಗತ

ಲೈಂಗಿಕ ಶಿಕ್ಷಣಕ್ಕೆ ಇದು ಸಕಾಲ

ಮಕ್ಕಳಿಗೆ ತಮ್ಮ ದೇಹದ ಬಗ್ಗೆ ಅರಿವು ಮೂಡಿಸಲು ಹಾಗೂ ಲೈಂಗಿಕ ಶೋಷಣೆಯ ಬಗ್ಗೆ ತಿಳಿವು ಮೂಡಿಸಲು 'ಲೈಂಗಿಕ ಶಿಕ್ಷಣ' ಅಗತ್ಯ.

• ಮಮತಾ ಅರಸೀಕೆರೆ


ರಾಜ್ಯದಲ್ಲಿ ಕಳೆದ ಮೂರ್ನಾಲ್ಕು ವರ್ಷಗಳಲ್ಲಿ 80 ಸಾವಿರಕ್ಕೂ ಹೆಚ್ಚು ಬಾಲಕಿಯರು ಗರ್ಭಿಣಿಯರಾಗಿದ್ದಾರೆ ಎನ್ನುವುದು 'ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ' ಪ್ರಕಟಿಸಿರುವ ಅಂಕಿಅಂಶ. ಈ ಬಾಲಗರ್ಭಿಣಿಯರ ಪಟ್ಟಿಯಲ್ಲಿ ಬೆಂಗಳೂರು, ಬೆಳಗಾವಿ, ಮೈಸೂರು ಜಿಲ್ಲೆ ಮೊದಲ ಮೂರು ಸ್ಥಾನದಲ್ಲಿವೆ. ಬಾಲ್ಯವಿವಾಹ, ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಪ್ರೀತಿಯ ನೆಪದಲ್ಲಿ ದೈಹಿಕ ಸಂಪರ್ಕ, ಲೈಂಗಿಕತೆ ಬಗೆಗಿನ ಕುತೂಹಲ, ಇವೆಲ್ಲವೂ ಬಾಲಕಿಯರು ಗರ್ಭ ಧರಿಸಲಿಕ್ಕೆ ಕಾರಣವಾಗಿವೆ.

ಎಂಟು, ಒಂಬತ್ತು, ಹತ್ತನೇ ತರಗತಿಯ ಬಾಲಕಿಯರು ಗರ್ಭಿಣಿಯರಾಗಿ ತಾಯಂದಿರಾಗುತ್ತಿದ್ದಾರೆ ಇಲ್ಲವೇ ಗರ್ಭಪಾತಕ್ಕೆ ಒಳಗಾಗುತ್ತಿದ್ದಾರೆ. ತಮ್ಮದೇ ಮನೆಯ ಸದಸ್ಯರು, ಪರಿಚಿತರು, ಸಹಪಾಠಿಗಳು, ಅಪರಿಚಿತರಿಂದ ಆಗುವ ಅತ್ಯಾಚಾರ ಎಳೆಯರನ್ನು ಅಸಹಾಯಕತೆಗೆ ದೂಡಿದೆ. ಹದಿಹರೆಯದಲ್ಲಿ ಉಂಟಾಗುವ ಆಕರ್ಷಣೆಗಳು, ಪ್ರೇಮದ ಜಾಲಗಳು ಅಪ್ರಬುದ್ಧರನ್ನು ಲೈಂಗಿಕ ಗೀಳಿಗೆ ದೂಡುತ್ತವೆ. ಸಾವಿರಾರು ಬಾಲಕಿಯರು ಅರಿವಿದ್ದೋ ಇಲ್ಲದೆಯೋ ಈ ವಿಷವರ್ತುಲದಲ್ಲಿ ಸಿಲುಕಿದ್ದಾರೆ.

ಅಪೌಷ್ಟಿಕತೆ, ರಕ್ತಹೀನತೆ, ಗರ್ಭಾವಸ್ಥೆಯ ತೊಡಕುಗಳು ಬಾಲಗರ್ಭಿಣಿಯರಲ್ಲಿ ಕಾಣಿಸಿಕೊಳ್ಳುತ್ತವೆ. ಮಗುವಿಗೆ ಜನ್ಮ ನೀಡುವ ಹಾಗೂ ಗರ್ಭಪಾತದ ವೇಳೆ ಕೆಲವರು ಸಾವಿಗೀಡಾಗಿರುವುದೂ ಇದೆ. ಈ ಬಾಲಕಿಯರು ಶಾಲೆಗಳಿಂದ, ವಿದ್ಯಾಭ್ಯಾಸದಿಂದ ವಂಚಿತರಾಗುವ ಸಂಭವವೂ ಇದೆ. ಇದು ಅವರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ; ಭವಿಷ್ಯವನ್ನು ಹಾಳು ಮಾಡುತ್ತದೆ. ಬಾಲ್ಯವಿವಾಹ ನಿಷಿದ್ಧವಾಗಿದ್ದರೂ, ಕಾನೂನು ಪ್ರಕ್ರಿಯೆ ಬಲವಾಗಿದ್ದರೂ, ಅನಾಹುತಗಳನ್ನು ತಡೆಯಲು ಆಗುತ್ತಿಲ್ಲ.

ಬೇಕಾದ್ದು, ಬೇಡವಾದ್ದು ಎಲ್ಲವೂ ಗೂಗಲ್ ಮಾಡಿದರೆ ಸಿಗುತ್ತದೆ. ಜಾಲತಾಣಗಳಲ್ಲಿ ಅದೆಷ್ಟು ಬಗೆಯ ವೆಬ್‌ಸೈಟ್‌ಗಳು, ಅಶ್ಲೀಲತೆಯನ್ನೇ ಸರಕನ್ನಾಗಿಸಿಕೊಂಡ ಪೋರ್ನ್‌ಸೈಟ್‌ಗಳು ಬೆರಳ ತುದಿಯಲ್ಲಿ ತೆರೆದುಕೊಳ್ಳುತ್ತವೆ. ಸರಿ ತಪ್ಪುಗಳ ಜ್ಞಾನವಿಲ್ಲದ ವಯಸ್ಸಿನಲ್ಲಿ ಬೇಡದ ವಿಷಯಗಳು ಅವೈಜ್ಞಾನಿಕವಾಗಿ ದಕ್ಕಿದರೆ ಅನಾಹುತವೇ ಹೆಚ್ಚು. ನಿಭಾಯಿಸಲು, ನಿರ್ವಹಿಸಲು ಆಗದೆ ಮಕ್ಕಳು ಒದ್ದಾಡುತ್ತಾರೆ. ಈ ಗೊಂದಲ ಹಾಗೂ ತಲ್ಲಣ ತಪ್ಪಿಸಲಿಕ್ಕಾಗಿ ಮಕ್ಕಳಿಗೆ ವಿಶೇಷ ಶಿಕ್ಷಣದ ಅವಶ್ಯಕತೆಯಿದೆ.

ಶಾಲೆಗಳಲ್ಲಿ ವಿಜ್ಞಾನ, ಜೀವಶಾಸ್ತ್ರ ವಿಷಯವನ್ನು ಕಲಿಸಲಾಗುತ್ತದೆ. ಅವುಗಳ ಜೊತೆಗೆ, ಲೈಂಗಿಕ ಶಿಕ್ಷಣದ ಅವಶ್ಯಕತೆ ಈಗ ಅಗತ್ಯವಾಗಿದೆ. ಜೀವಶಾಸ್ತ್ರ ಕಲಿಸುವಾಗ 'ಪ್ರಜನನ' ವಿಷಯದ ಪಾಠವಿದ್ದರೆ, ಅದನ್ನು ವಿವರಿಸಲು ವಿಜ್ಞಾನದ ಶಿಕ್ಷಕರೇ ಹಿಂಜರಿಯುತ್ತಾರೆ. ಅಂಕ ಗಳಿಕೆಗೆ ಎಷ್ಟು ಬೇಕೋ ಅಷ್ಟು ಹೇಳಿ ಮುಗಿಸಿಬಿಡುವ ಸಾಧ್ಯತೆಯೇ ಹೆಚ್ಚು. ಫೋನಿನಲ್ಲೇ ಎಲ್ಲಾ ಬಗೆಯ ವಿಷಯಗಳೂ ಲಭ್ಯವಿರುವಾಗ, ಲೈಂಗಿಕ ವಿಷಯದ ಬಗ್ಗೆ ಮಾತನಾಡುವುದು ಹಾಗೂ ಲೈಂಗಿಕ ತಿಳಿವಳಿಕೆ ಶಿಕ್ಷಣವಾಗಿ ಸಿಗುವುದು ಬೇಡವೆಂದರೆ ಅಥವಾ ಮುಜುಗರದ ವಿಷಯವಾದರೆ ಹೇಗೆ? ಇದು, ಅಸಭ್ಯ ಅಥವಾ ನಿರ್ಲಜ್ಜ ವಿಷಯವಲ್ಲ; ಸಂಸ್ಕೃತಿಯ ವಿರುದ್ಧವೂ ಅಲ್ಲ. ತಾತ್ವಿಕ ವಿಚಾರ ಹಾಗೂ ವೈಚಾರಿಕ, ವೈಜ್ಞಾನಿಕ ನಡೆ.



ಲೈಂಗಿಕ ಶಿಕ್ಷಣವೆಂದರೆ ಬರೀ ಲೈಂಗಿಕ ಅಂಗಗಳ ಬಗ್ಗೆ ತಿಳಿಯುವುದು ಎಂದರ್ಥವಲ್ಲ. ಎಷ್ಟೋ ಮಕ್ಕಳಿಗೆ ಅವರದೇ ದೇಹದ ಬಗ್ಗೆ ಅರಿವಿರುವುದಿಲ್ಲ. ಬಾಲಕಿಯರಿಗೂ ಮಾಸಿಕ ಋತುಸ್ರಾವದ ದಿನಗಳನ್ನು ನಿರ್ವಹಿಸುವುದು ತಿಳಿದಿರುವುದಿಲ್ಲ. ಲೈಂಗಿಕತೆ ಬಗ್ಗೆ ಅಜ್ಞಾನವೇ ಹೆಚ್ಚಿದೆ. ಅನುಮಾನಗಳೂ ಸಾಕಷ್ಟಿವೆ. ಖಾಸಗಿ ಅಂಗಗಳ ಕುರಿತು ಕುತೂಹಲವೂ, ಆಕರ್ಷಣೆಯೂ ಬಾಲ್ಯ ಹಾಗೂ ಹದಿಹರೆಯದಲ್ಲಿ ಹೆಚ್ಚು. ಇಂತಹ ಸಮಯದಲ್ಲೇ ಶಿಕ್ಷಣವಾಗಿ ಲೈಂಗಿಕತೆಯ ಕುರಿತು ತಿಳಿಯುವುದು ಅತ್ಯಗತ್ಯ.

ಮಾನವ ದೇಹದ ರಚನೆ, ಹದಿಹರೆಯದವರಲ್ಲಿ ಆಗುವ ದೈಹಿಕ ಬದಲಾವಣೆಗಳು, ಮಾನಸಿಕ ಪರಿವರ್ತನೆಗಳು, ಲೈಂಗಿಕ ಆಕರ್ಷಣೆ, ಲೈಂಗಿಕ ಶೋಷಣೆ, ಹಾರ್ಮೋನುಗಳ ಪ್ರಭಾವ, ಲೈಂಗಿಕ ಅಂಗಗಳ ಕೆಲಸಗಳು, ಅವುಗಳ ರಕ್ಷಣೆ, ಸುರಕ್ಷತೆ, ಗರ್ಭಧಾರಣೆ, ಫಲಿತಾಂಶಗಳು, ತಡೆಗಟ್ಟುವ ವಿಧಾನ, ಮುಂದಾಲೋಚನೆ, ಸಂಬಂಧಗಳ ಗಡಿಗಳನ್ನು ಗುರುತಿಸುವುದು, ಗುಡ್ ಮತ್ತು ಬ್ಯಾಡ್ ಟಚ್, ಇದೆಲ್ಲದರ ಅರಿವು ಶಿಕ್ಷಣದ ರೂಪದಲ್ಲಿ ದಕ್ಕಿದರೆ ಒಳ್ಳೆಯದು.

ಮಕ್ಕಳ ಸರ್ವತೋಮುಖ ವಿಕಸನಕ್ಕಾಗಿ ಬಾಲ್ಯದಲ್ಲೇ ಲೈಂಗಿಕ ಶಿಕ್ಷಣ ಅಗತ್ಯ. ಲೈಂಗಿಕ ದೌರ್ಜನ್ಯವನ್ನು ಅದರ ಬಗ್ಗೆ ಅರಿವಿಲ್ಲದೆಯೇ ಸಹಿಸಿಕೊಳ್ಳುವ ಮಕ್ಕಳಿಗೂ ಶಿಕ್ಷಣ ಸಹಕಾರಿ. ಬಾಲ್ಯವಿವಾಹ, ಅಕಾಲಿಕ ಗರ್ಭಧಾರಣೆಯಂತಹ ಸಮಸ್ಯೆಗಳನ್ನು ತಡೆಗಟ್ಟಲೂ ಉಪಯುಕ್ತ. ಭಾವನಾತ್ಮಕ ಕುಸಿತ, ಖಿನ್ನತೆ, ಅಪರಾಧಿ ಪ್ರಜ್ಞೆಯಿಂದ ನರಳುವುದನ್ನು ತಪ್ಪಿಸಬಹುದು.

ನೆದರ್ಲೆಂಡ್, ಸ್ವೀಡನ್, ಫಿನ್‌ಲೆಂಡ್, ನಾರ್ವೆ ಸೇರಿದಂತೆ ಕೆಲವು ದೇಶಗಳು ಮಕ್ಕಳಿಗೆ ಬಾಲ್ಯದಿಂದಲೇ ಲೈಂಗಿಕ ಶಿಕ್ಷಣ ನೀಡುತ್ತವೆ. ಆ ದೇಶಗಳಲ್ಲಿ ದೌರ್ಜನ್ಯಗಳು ಹಾಗೂ ಅಕಾಲಿಕ ಗರ್ಭಧಾರಣೆ ಪ್ರಮಾಣ ಕಡಿಮೆ ಇರುವುದಕ್ಕೂ ಅಲ್ಲಿನ ಲೈಂಗಿಕ ಶಿಕ್ಷಣಕ್ಕೂ ಸಂಬಂಧ ಇದೆ. ಯುನೆಸ್ಕೊ ಕೂಡ 'ಸಮಗ್ರ ಲೈಂಗಿಕ ಶಿಕ್ಷಣ'ಕ್ಕೆ ಆದ್ಯತೆ ನೀಡುತ್ತಿದೆ.

ನಮ್ಮಲ್ಲೂ 'ಲೈಂಗಿಕ ಶಿಕ್ಷಣ'ವನ್ನು ಪ್ರಾಥಮಿಕ ಶಾಲೆಗಳಿಂದಲೇ ತುರ್ತಾಗಿ ಆರಂಭಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಮೊದಲು ಶಿಕ್ಷಕರಿಗೆ ತರಬೇತಿ ನೀಡಬೇಕು. ಲೈಂಗಿಕ ಶಿಕ್ಷಣವನ್ನು ಮುಜುಗರದ, ಅನಗತ್ಯವಾದ ವಿಷಯವೆಂದು ಯಾರೂ ಭಾವಿಸಬಾರದು. ಹಾಗಾದರೆ ಮಾತ್ರ ಬಾಲ್ಯವಿವಾಹ, ಬಾಲಕಿಯರ ಗರ್ಭಧಾರಣೆ, ಎಳೆಯರ ಸಾವು, ಹುಡುಗಿಯರ ವಿದ್ಯಾಭ್ಯಾಸ ಕುಂಠಿತವಾಗುವುದು ಮೊದಲಾದ ಪಿಡುಗುಗಳನ್ನು ತಪ್ಪಿಸಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಕ್ರಿಕೆಟ್‌ನ 'ಮಾತೃ ಮಾದರಿ' ಎಂದರೆ ಟೆಸ್ಟ್. ಆದರೆ ಕೆಲವು ವರ್ಷಗಳಿಂದ ಟಿ20 ಕ್ರಿಕೆಟ್ ಭರಾಟೆಯಲ್ಲಿ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತಿದೆ. ಇದೀಗ ಭಾರತ–ಇಂಗ್ಲೆಂಡ್ ನಡುವೆ ಮುಗಿದ ರೋಚಕ ಸರಣಿಯು ಟೆಸ್ಟ್ ಕ್ರಿಕೆಟ್‌ಗೆ ಭವ್ಯ ಭವಿಷ್ಯದ ಭರವಸೆ ಮೂಡಿಸಿದೆ. ಜೆನ್ ಝೀ ಪೀಳಿಗೆ ಆಟಗಾರರು ಕೂಡ ಟೆಸ್ಟ್ ಆಡಬಲ್ಲರು ಎಂಬುದು ಈಗ ಸಾಬೀತಾಗಿದೆ. ಅಷ್ಟೇ ಅಲ್ಲ, ಈಗಲೂ ಕೋಟಿ ಕೋಟಿ ಜನರು ಐದು ದಿನಗಳ ಪಂದ್ಯಗಳನ್ನು ನೋಡುತ್ತಾರೆಂಬುದನ್ನು ಈ ಸರಣಿ ತೋರಿಸಿಕೊಟ್ಟಿದೆ

ಟೆಸ್ಟ್‌ಗೆ ಶುಕ್ರದೆಸೆ

ಕೆ.ಎಲ್.ರಾಹುಲ್

• ಗಿರೀಶ ದೊಡ್ಡಮನಿ

ಎರಡು ತಿಂಗಳುಗಳ ಹಿಂದೆ 'ಚಾಕೊಲೇಟ್ ಬಾಯ್' ಶುಭಮನ್ ಗಿಲ್ ನಾಯಕತ್ವದ ತಂಡವು ಇಂಗ್ಲೆಂಡ್‌ಗೆ ಹೊರಟು ನಿಂತಾಗ ವ್ಯಂಗ್ಯ ಮಾಡಿದ್ದವರು ಹಲವರು. 'ಎಳೆಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ತಂಡ ಸರಣಿಯಲ್ಲಿ ಒಂದು ಪಂದ್ಯ ಗೆದ್ದರೂ ಹೆಚ್ಚು' ಎಂದು ಮೂಗು ಮುರಿದಿದ್ದವರು ಸೋಮವಾರ ಸಂಜೆ ನಿಬ್ಬೆರಗಾದರು. ಎಳೆಯ ಹುಡುಗರ ಬಳಗದ ಸಾಧನೆಗೆ ಚಪ್ಪಾಳೆ ತಟ್ಟಿದರು.

ಹೌದು; ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಆರ್. ಅಶ್ವಿನ್ ಅವರಂತಹ ಖ್ಯಾತನಾಮ ಆಟಗಾರರಿಲ್ಲದೇ ತಂಡವು ಐದು ಪಂದ್ಯಗಳ ಮಹತ್ವದ ಸರಣಿಗೆ ಹೋಗುವುದೆಂದರೆ ಅದೊಂದು ಕಠಿಣ ಪಯಣವೇ ಸೈ. ಏಕೆಂದರೆ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಆಡುವುದೆಂದರೆ 11 ಆಟಗಾರರಷ್ಟೇ ಎದುರಾಳಿಗಳಾಗಿರುವುದಿಲ್ಲ. ಆಗಾಗ ಬಣ್ಣ ಬದಲಾಯಿಸುವ ಅಲ್ಲಿಯ ಹವಾಗುಣ, ನಿಂದನೆಗಳ ಬಾಣ ಬಿಡುವ ಇಂಗ್ಲೆಂಡ್ ಅಭಿಮಾನಿಗಳು, ಭಾರತದ ಆಟಗಾರರ ಆತ್ಮವಿಶ್ವಾಸ ಕಲಕುವ ಮಾಧ್ಯಮಗಳನ್ನು ಕೂಡ ಎದುರಿಸಬೇಕು. ಹಲವು ದಶಕಗಳಿಂದ ಈ ರೀತಿಯೇ ನಡೆಯುತ್ತಿದೆ. ಅದಕ್ಕಾಗಿ ಕಪಿಲ್ ದೇವ್, ಮಹೇಂದ್ರಸಿಂಗ್ ಧೋನಿ, ವಿರಾಟ್ ಕೊಹ್ಲಿ, ಸೌರವ್ ಗಂಗೂಲಿಯಂತಹ ದಿಟ್ಟದೆದೆಯ ನಾಯಕರು ಬೇಕು. ಗಿಲ್ ಅವರಿಗೆ ಇದು ಸಾಧ್ಯವೇ ಎಂಬ ಅನುಮಾನಗಳಿದ್ದವು. ಆದರೆ ಈಗ ಎಲ್ಲ ಸಂಶಯಗಳಿಗೆ ಉತ್ತರ ಸಿಕ್ಕಿದೆ. ಗಿಲ್ ಬಳಗ 2–2ರಿಂದ ಸರಣಿ ಸಮ ಮಾಡಿಕೊಂಡಿದೆ. ಇದೇನೂ ಸಣ್ಣ ಸಾಧನೆಯಲ್ಲ. ಏಕೆಂದರೆ ಭಾರತ ತಂಡವು ಇಂಗ್ಲೆಂಡ್ ನೆಲದಲ್ಲಿ ಇದುವರೆಗೆ ಸರಣಿ ಜಯಿಸಿರುವುದು ಮೂರು ಬಾರಿ ಮಾತ್ರ. ಡ್ರಾ ಮಾಡಿಕೊಂಡಿರುವುದು ಇದು ಮೂರನೇ ಸಲ.

ಈ ಸರಣಿಯನ್ನು ಸೋಲು ಮತ್ತು ಗೆಲುವಿನ ದೃಷ್ಟಿಕೋನದಲ್ಲಿ ಮಾತ್ರ ನೋಡಲಾಗದು. ಏಕೆಂದರೆ, ಇದು ಟೆಸ್ಟ್ ಕ್ರಿಕೆಟ್ ಪುನರುತ್ಥಾನಕ್ಕೆ ಹೊಸ ಚೈತನ್ಯ ತುಂಬಿದ ಸರಣಿಯೂ ಹೌದು.

ಐದು ದಿನಗಳ ಆಟ: ಜೂನ್ 20ರಂದು ಹೆಡಿಂಗ್ಲಿಯಲ್ಲಿ ಆ್ಯಂಡರ್ಸನ್–ತೆಂಡೂಲ್ಕರ್ ಟೆಸ್ಟ್ ಸರಣಿ ಆರಂಭವಾಗುವ ಮೂರು ದಿನಗಳ ಮುನ್ನ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಒಂದು ಮಹತ್ವದ ಪ್ರಕಟಣೆಯೊಂದನ್ನು ನೀಡಿತ್ತು. ಟಿ20 ಕ್ರಿಕೆಟ್ ಯುಗದಲ್ಲಿ ಟೆಸ್ಟ್ ಕ್ರಿಕೆಟ್ ನೋಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. 2027ರಿಂದ ಆರಂಭವಾಗುವ ಐದನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಪಂದ್ಯಗಳನ್ನು ನಾಲ್ಕು ದಿನಗಳಿಗೆ ನಿಗದಿ ಮಾಡುವುದು ಸೂಕ್ತ ಎಂದು ಪ್ರಕಟಿಸಿತ್ತು. ಇದಕ್ಕೆ ಹಲವು ಖ್ಯಾತನಾಮರು ದನಿಗೂಡಿಸಿದ್ದರು. ಆದರೆ, ಸೋಮವಾರ ಟೆಸ್ಟ್ ಸರಣಿ ಮುಕ್ತಾಯವಾದ ನಂತರ ಐಸಿಸಿಯು ತನ್ನ ಯೋಜನೆಯನ್ನು ಬದಲಾಯಿಸುವ ಬಗ್ಗೆ ಯೋಚಿಸಬಹುದೇನೋ?

ಈ ಸರಣಿಯ ಎಲ್ಲ ಪಂದ್ಯಗಳ ಫಲಿತಾಂಶಗಳು ಐದನೇ ದಿನವೇ ಹೊರಹೊಮ್ಮಿರುವುದು ವಿಶೇಷ. ಲಂಡನ್‌ನ ಓವಲ್ ಕ್ರೀಡಾಂಗಣದಲ್ಲಿ ನಡೆದ ಕೊನೆಯ ಪಂದ್ಯವು ನಾಲ್ಕನೇ ದಿನವೇ ಮುಗಿಯುತ್ತಿತ್ತು. ಆದರೆ ಮಳೆಯಿಂದಾಗಿ ಕೊನೆಯ ದಿನಕ್ಕೆ ಹೋಯಿತು. ಮೊದಲ ನಾಲ್ಕು ಪಂದ್ಯಗಳು ಪೂರ್ಣ ಅವಧಿಯಲ್ಲಿ ನಡೆದವು. ಅಷ್ಟೇ ಅಲ್ಲ, ಎಲ್ಲ ಪಂದ್ಯಗಳಲ್ಲಿಯೂ ಪ್ರೇಕ್ಷಕರು ಕಿಕ್ಕಿರಿದು ಸೇರಿದ್ದರು. 'ಇಂಗ್ಲೆಂಡ್ ನಾಡಿನ ಬಿರುಬೇಸಿಗೆಯಲ್ಲಿಯೂ ಟೆಸ್ಟ್ ಕ್ರಿಕೆಟ್ ಆಸ್ವಾದಿಸಿದರು. ಆಗಾಗ ಮಳೆ ಬಂದರೂ ತಮ್ಮ ಸ್ಥಾನಗಳಿಂದ ಕಾಲು ಕೀಳಲಿಲ್ಲ. 'ಇನ್ನು ಸರಣಿಯ ಅಧಿಕೃತ ಪ್ರಸಾರಕ ವಾಹಿನಿ ಮತ್ತು ಆ್ಯಪ್‌ಗಳಲ್ಲಿ ವೀಕ್ಷಕರ ಸಂಖ್ಯೆ ಬಹುಕೋಟಿಯಾಗಿತ್ತು.

ಐದಾರು ವರ್ಷಗಳ ಹಿಂದೆ ಟೆಸ್ಟ್ ಕ್ರಿಕೆಟ್ ಉಳಿಯುವುದೇ ಕಷ್ಟ ಎಂಬ ಸ್ಥಿತಿ ನಿರ್ಮಾಣವಾಗಿತ್ತು. ಆದರೆ ಈ ಪಾರಂಪರಿಕ ಮಾದರಿಯನ್ನು ಉಳಿಸಿಕೊಳ್ಳಲು ಐಸಿಸಿಯು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಆರಂಭಿಸಿತು. ಅದರ ಫಲವಾಗಿ ಪಂದ್ಯಗಳಲ್ಲಿ ಫಲಿತಾಂಶಗಳನ್ನು ಪಡೆಯಲೇಬೇಕು ಎಂಬ ಮಹತ್ವಾಕಾಂಕ್ಷೆ ತಂಡಗಳಲ್ಲಿ ಮೂಡಿದ್ದು ಸ್ವಾಗತಾರ್ಹ ಹೆಜ್ಜೆಯಾಯಿತು. ಕಳೆದ ಮೂರು ಡಬ್ಲ್ಯುಟಿಸಿಗಳಲ್ಲಿ ಕ್ರಮವಾಗಿ ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಚಾಂಪಿಯನ್ ಆದವು. ಭಾರತ ಎರಡು ಬಾರಿ ರನ್ನರ್ಸ್ ಅಪ್ ಆಯಿತು. ಇದೀಗ ನಾಲ್ಕನೇ ಡಬ್ಲ್ಯುಟಿಸಿ ಟೂರ್ನಿಯ ಮೊದಲ ಸರಣಿಯೇ ಟೆಸ್ಟ್ ಕ್ರಿಕೆಟ್‌ನ ಭವ್ಯ ಭವಿಷ್ಯಕ್ಕೆ ದಿಕ್ಸೂಚಿಯಾಗಿದೆ.

'ಟೆಸ್ಟ್ ಕ್ರಿಕೆಟ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿದೆ ಎಂಬ ಭಾವನೆ ನನಗೆ ಬಹಳ ದಿನಗಳಿಂದಲೂ ಇತ್ತು. ಆದರೆ ಈಚೆಗೆ ಬಾರ್ಡರ್–ಗಾವಸ್ಕರ್ ಟ್ರೋಫಿ ಮತ್ತು ಈಗ ಭಾರತ–ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಗಳನ್ನು ನೋಡಿದ ನಂತರ ಭಾವನೆ ಬದಲಾಗಿದೆ. ಟೆಸ್ಟ್ ಕ್ರಿಕೆಟ್ ಜೀವಂತವಾಗಿಯೂ ಇದೆ ಮತ್ತು ಚೆನ್ನಾಗಿಯೂ ಇದೆ. ಅದರಲ್ಲೂ ಈ ಮೂರು ದೇಶಗಳಲ್ಲಿ (ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್) ಉತ್ತಮವಾಗಿದೆ' ಎಂದು ಆಸ್ಟ್ರೇಲಿಯಾದ ದಿಗ್ಗಜ ಕ್ರಿಕೆಟಿಗ ಗ್ರೆಗ್ ಚಾಪೆಲ್ ಹೇಳಿದ್ದಾರೆ. ಇಂಗ್ಲೆಂಡ್ ತಂಡದ ಮಾಜಿ ನಾಯಕ ನಾಸಿರ್ ಹುಸೇನ್ ಕೂಡ 'ಪ್ರಸ್ತುತ ಕ್ರಿಕೆಟ್‌ಗೆ ಇಂತಹದೊಂದು ಸರಣಿ ಅತ್ಯಗತ್ಯವಾಗಿತ್ತು' ಎಂದಿದ್ದಾರೆ.

ಕ್ರಿಕೆಟ್ ಅಭಿಮಾನಿಗಳಿಗೆ ಈ ಭರವಸೆ ಮೂಡಲು ಈ ಸರಣಿಯಲ್ಲಿ ಉಭಯ ತಂಡಗಳು ಆಡಿದ ರೀತಿಯೂ ಕೂಡ ಕಾರಣವಾಗಿದೆ.

ಈ ಸರಣಿಯು ಉಭಯ ತಂಡಗಳ ಆಟಗಾರರಿಗೆ ಫಿಟ್‌ನೆಸ್ ಮಹತ್ವವನ್ನೂ ಕಲಿಸಿಕೊಟ್ಟಿದೆ. ದೀರ್ಘ ಮಾದರಿಯ ಕ್ರಿಕೆಟ್‌ನಲ್ಲಿ ಬಹುಕಾಲ ಯಶಸ್ವಿಯಾಗಬೇಕಾದರೆ ದೈಹಿಕ ಹಾಗೂ ಮಾನಸಿಕ ಕ್ಷಮತೆ ಮಜಬೂತಾಗಿರಬೇಕು. ಈ ಸರಣಿಯಲ್ಲಿ ಉಭಯ ತಂಡಗಳ ಆಟಗಾರರು ಅನುಭವಿಸಿದ ಗಾಯದ ಸಮಸ್ಯೆಗಳೇ ಇದಕ್ಕೆ ಉತ್ತಮ ಉದಾಹರಣೆಗಳು. ಆದರೂ ಕೊನೆಯ ಪಂದ್ಯದಲ್ಲಿ ಕ್ರಿಸ್ ವೋಕ್ಸ್ ಒಂದು ಕೈಗೆ ಬ್ಯಾಂಡೇಜ್ ಕಟ್ಟಿಕೊಂಡೇ ಬ್ಯಾಟ್ ಹಿಡಿದು ಕೊನೆಯ ಬ್ಯಾಟರ್ ಆಗಿ ಕ್ರೀಸ್‌ಗೆ ಬಂದಿದ್ದು ಇಂದಿನ ಪೀಳಿಗೆಯ ಛಲ ಮತ್ತು ಗಟ್ಟಿ ಆತ್ಮಬಲದ ಪ್ರತಿರೂಪದಂತಿತ್ತು. ಇಂತಹ ಛಲ ಮತ್ತು ಬದ್ಧತೆಯ ಆಟಗಳಿಂದಾಗಿಯೇ ಕ್ರಿಕೆಟ್ ಸೊಬಗು ಹೆಚ್ಚುತ್ತದೆ. ಅದಕ್ಕಾಗಿಯೇ ಟೆಸ್ಟ್ ಎಂದರೆ ನಿಜವಾದ ಕ್ರಿಕೆಟ್ ಅಲ್ಲವೇ?



ಕರುಣ್ ನಾಯರ್

ವಾಷಿಂಗ್ಟನ್ ಸುಂದರ್

ರವೀಂದ್ರ ಜಡೇಜ

ಅನುಭವಿ –ಯುವ ಆಟಗಾರರ ಛಲ

ಭಾರತ ತಂಡಕ್ಕೆ ಈ ಸರಣಿಯು ನಿಜಕ್ಕೂ ಅಗ್ನಿಪರೀಕ್ಷೆಯೇ ಆಗಿತ್ತು. ಗೌತಮ್ ಗಂಭೀರ್ ಅವರು ಮುಖ್ಯ ಕೋಚ್ ಆಗಿ ನೇಮಕವಾದ ನಂತರ ಒಂದೂ ಟೆಸ್ಟ್ ಸರಣಿಯನ್ನು ಭಾರತ ತಂಡವು ಗೆದ್ದಿಲ್ಲ. ತವರಿನಲ್ಲಿ ನ್ಯೂಜಿಲೆಂಡ್ ಎದುರು ಮತ್ತು ಆಸ್ಟ್ರೇಲಿಯಾದಲ್ಲಿ ಟೆಸ್ಟ್ ಸರಣಿಗಳನ್ನು ಹೀನಾಯವಾಗಿ ಸೋತಿತ್ತು. ಅದರಿಂದಾಗಿ ರೋಹಿತ್ ಶರ್ಮಾ ಅವರ ನಾಯಕತ್ವಕ್ಕೆ ಕುತ್ತು ಬಂದೊದಗಿತ್ತು. ಅಶ್ವಿನ್ ಮತ್ತು ಕೊಹ್ಲಿ ಅವರ ದಿಢೀರ್ ನಿವೃತ್ತಿ, ವೇಗಿ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ ಅವರನ್ನು ಕಾಡಿದ ಗಾಯ ತಂಡವನ್ನು ಅಧೀರಗೊಳಿಸಿದ್ದು ಸುಳ್ಳಲ್ಲ.

ಅನುಭವಿ ಆಟಗಾರ ಕೆ.ಎಲ್.ರಾಹುಲ್ ಅವರನ್ನು ನಾಯಕತ್ವಕ್ಕೆ ಪರಿಗಣಿಸದೇ ಯುವ ಅಟಗಾರ ಗಿಲ್ ಅವರಿಗೆ ಹೊಣೆ ನೀಡಿದ್ದು ಕೂಡ ಬಹಳಷ್ಟು ಚರ್ಚೆಗಳಿಗೆ ಕಾರಣವಾಗಿತ್ತು. ಆದರೆ ಸರಣಿ ಆರಂಭವಾದ ನಂತರ ಯುವ ಮತ್ತು ಅನುಭವಿ ಆಟಗಾರರ ಅನನ್ಯ ಹೊಂದಾಣಿಕೆಯ ಆಟ ಮೈದಾನದಲ್ಲಿ ಗರಿಗೆದರಿತು. ರಾಹುಲ್ ಮತ್ತು ಯುವಪ್ರತಿಭೆ ಯಶಸ್ವಿ ಜೈಸ್ವಾಲ್ ಅವರು ಪ್ರತಿಯೊಂದು ಇನಿಂಗ್ಸ್‌ನಲ್ಲಿಯೂ ಉತ್ತಮ ಆರಂಭ ನೀಡಿದರು. ಇಬ್ಬರ ಬ್ಯಾಟ್‌ಗಳಿಂದಲೂ ಚೆಂದದ ಶತಕಗಳು ದಾಖಲಾದವು. ಅದರಲ್ಲೂ ರಾಹುಲ್ ಅವರ ಪ್ರಬುದ್ಧ ಮತ್ತು ಪರಿಪಕ್ವ ಆಟವು ಗಮನ ಸೆಳೆಯಿತು. ಅಷ್ಟೇ ಅಲ್ಲ. ಕಠಿಣ ಸಂದರ್ಭದಲ್ಲಿ ತಮಗಿಂತ ಕಿರಿಯ ಮತ್ತು ಕೆಳಕ್ರಮಾಂಕದ ಆಟಗಾರರಿಗೆ ಮಾರ್ಗದರ್ಶನ ಮಾಡುತ್ತ ಜೊತೆಯಾಟಗಳನ್ನು ಕಟ್ಟಿದರು.

ಮಧ್ಯಮ ಕ್ರಮಾಂಕದಲ್ಲಿ ಸಾಯಿ ಸುದರ್ಶನ್, ಕರುಣ್ ನಾಯರ್, ನಿತೀಶ್ ಕುಮಾರ್ ರೆಡ್ಡಿ ಅವರು ಸಿಹಿ–ಕಹಿ ಫಲ ಅನುಭವಿಸಿದರು. ಆದರೆ ನಾಯಕತ್ವದ ಹೊಣೆಯ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ ಮಿಂಚಿದವರು ಗಿಲ್. ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆದರು. ತಂಡಕ್ಕೂ ಆಸರೆಯಾದರು. ನಾಯಕತ್ವದಲ್ಲಿ ಅವರಿನ್ನೂ ಪಳಗಬೇಕು ಎನ್ನುವುದೇನೋ ನಿಜ. ಉಪನಾಯಕ ರಿಷಭ್ ಪಂತ್ ಅವರು ತಮ್ಮ ಕಾಲಿನ ಮೂಳೆ ಮುರಿದುಕೊಂಡರೂ ಜಗ್ಗಲಿಲ್ಲ. ತಂಡಕ್ಕೆ ಬಲ ತುಂಬುವಲ್ಲಿ ಹಿಂದೆ ಬೀಳಲಿಲ್ಲ. ರವೀಂದ್ರ ಜಡೇಜ ಮತ್ತು ವಾಷಿಂಗ್ಟನ್ ಸುಂದರ್ ಅವರು ಆಲ್‌ರೌಂಡರ್‌ಗಳ ಮಹತ್ವವನ್ನು ಮತ್ತೊಮ್ಮೆ ಸಾರಿದರು. ಮ್ಯಾಂಚೆಸ್ಟರ್ ಪಂದ್ಯದಲ್ಲಿ ತಂಡದ ಸೋಲು ತಪ್ಪಿಸಿದರು. ಇವರಿಬ್ಬರೂ ಶತಕ ಬಾರಿಸಿದ್ದೂ ಅಲ್ಲದೇ ಬೌಲಿಂಗ್‌ನಲ್ಲಿಯೂ ಉಪಯುಕ್ತ ಕಾಣಿಕೆ ನೀಡಿದರು.

ಇನ್ನು ಮೊಹಮ್ಮದ್ ಸಿರಾಜ್ ಎಂಬ 'ಸಿಂಹದ ಮರಿ' ತೋರಿದ ಆಟ ಅವಿಸ್ಮರಣೀಯ. ಬೂಮ್ರಾ ಅವರಿಲ್ಲದ ಪಂದ್ಯಗಳಲ್ಲಿ ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ಮೂರನೇ ಟೆಸ್ಟ್‌ನಲ್ಲಿ ಜಡೇಜ ಅವರೊಂದಿಗೆ ಬ್ಯಾಟಿಂಗ್‌ನಲ್ಲಿ ತೋರಿದ ದಿಟ್ಟತನ ಮೆಚ್ಚುವಂಥದ್ದು. ಕೊನೆಯ ಟೆಸ್ಟ್‌ನಲ್ಲಿ ಹ್ಯಾರಿ ಬ್ರೂಕ್ ಅವರ ಕ್ಯಾಚ್ ಪಡೆದಿದ್ದ ಸಿರಾಜ್ ಬೌಂಡರಿಗೆರೆಯನ್ನೂ ದಾಟಿ ಪ್ರಮಾದ ಎಸಗಿದ್ದರು. ಆದರೆ, ಅದರಿಂದ ಅವರ ಆತ್ಮವಿಶ್ವಾಸ ಕುಂದಲಿಲ್ಲ. ಬೌಲಿಂಗ್‌ನಲ್ಲಿ ಪರಾಕ್ರಮ ಮೆರೆದ ಅವರು ಇನಿಂಗ್ಸ್‌ನ ಕೊನೆಯ ವಿಕೆಟ್ ಗಳಿಸಿ ಗೆಲುವಿನ ರೂವಾರಿಯಾದರು. ಆಕಾಶ್ ದೀಪ್, ಕನ್ನಡಿಗ ಪ್ರಸಿದ್ಧ ಕೃಷ್ಣ ಅವರು ಬೌಲಿಂಗ್‌ನಲ್ಲಿ ನೀಡಿದ ಕಾಣಿಕೆಯೂ ಮಹತ್ವದ್ದು. ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ಒಂದೂ ಅವಕಾಶ ಸಿಗಲಿಲ್ಲವೆಂಬ ಕೊರಗು ಕೂಡ ಉಳಿಯಿತು.

ಇಂಗ್ಲೆಂಡ್ ಯೋಗದಾನವೂ ಅಮೋಘವಾದದ್ದು. ಅನುಭವಿ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ನಾಯಕತ್ವ, ಬ್ಯಾಟಿಂಗ್ ಮತ್ತು ಬೌಲಿಂಗ್‌ಗಳು ರಂಗೇರಿದವು. ಜಿಮ್ಮಿ ಆ್ಯಂಡರ್ಸನ್, ಸ್ಟುವರ್ಟ್ ಬ್ರಾಡ್, ಜಾನಿ ಬೆಸ್ಟೊ, ಜಾಸ್ ಬಟ್ಲರ್ ಅವರಂತಹ ಖ್ಯಾತನಾಮರಿಲ್ಲದೇ ಕಣಕ್ಕಿಳಿದ ತಂಡ ಇದು. ಆದರೆ, ಸ್ಥಿತಪ್ರಜ್ಞ ಆಟಗಾರ ಜೋ ರೂಟ್, ಹೊಸ ಚಿಗುರು ಜೆಮಿ ಸ್ಮಿತ್, ಭವಿಷ್ಯದ ನಾಯಕ ಓಲಿ ಪೋಪ್, ಬೆನ್ ಡಕೆಟ್, ಜ್ಯಾಕ್ ಕ್ರಾಲಿ, ಹ್ಯಾರಿ ಬ್ರೂಕ್, ವೇಗಿ ಜೋಶ್ ಟಂಗ್, ಅಟ್ಕಿನ್ಸನ್ ಅವರು ಕೂಡ ಈ ಸರಣಿಯ ಸೊಬಗು ಹೆಚ್ಚಿಸಿದವರು. ಮುಂಬರುವ ಆ್ಯಷಸ್ ಸರಣಿಗೂ ಮುನ್ನ ಇಂಗ್ಲೆಂಡ್ ಆಟಗಾರರು ಭಾರತದ ಕಠಿಣ ಸವಾಲನ್ನು ಎದುರಿಸಿದ್ದಾರೆ. ಇದರಿಂದಾಗಿ ಉತ್ತಮ ಅನುಭವ ಅವರಿಗೆ ಲಭಿಸಿದೆ.



ಪ್ರಸಿದ್ಧ ಕೃಷ್ಣ

ರಾಷ್ಟ್ರೀಯ

'ಪಹಲ್ಗಾಮ್ ದಾಳಿಕೋರರು ಪಾಕಿಸ್ತಾನಿಗಳು ಎಂಬುದು ಸ್ಪಷ್ಟ'

ಶ್ರೀನಗರ (ಪಿಟಿಐ): ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಮೂವರು ಉಗ್ರರು ಪಾಕಿಸ್ತಾನಿ ಪ್ರಜೆಗಳು ಎಂಬುದನ್ನು ದೃಢಪಡಿಸುವ ಮತ್ತಷ್ಟು ಸಾಕ್ಷ್ಯಗಳನ್ನು ಭದ್ರತಾ ಪಡೆಗಳು ಕಲೆಹಾಕಿವೆ.

'ಆಪರೇಷನ್ ಮಹಾದೇವ' ಹೆಸರಿನ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಇತ್ತೀಚೆಗೆ ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಮೂವರು ಉಗ್ರರನ್ನು ಹತ್ಯೆ ಮಾಡಿದ್ದವು.

ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ದಾಳಿ ನಡೆಸಿದ ಬಳಿಕ ಈ ಮೂವರು ದಾಚಿಗಾಮ್– ಹರ್ವನ್ ಅರಣ್ಯ ಪ್ರದೇಶದಲ್ಲಿ ಅಡಗಿದ್ದರು. ಲಷ್ಕರ್–ಎ–ತಯಬಾ ಸಂಘಟನೆಗೆ ಸೇರಿದ ಇವರನ್ನು ಜುಲೈ 28ರಂದು ಎನ್‌ಕೌಂಟರ್‌ನಲ್ಲಿ ಭದ್ರತಾ ಪಡೆಗಳು ಹತ್ಯೆಗೈದಿದ್ದವು. ಇದೀಗ ಆ ಮೂವರು ಉಗ್ರರಿಗೆ ಸಂಬಂಧಿಸಿದಂತೆ ತನಿಖಾ ಸಂಸ್ಥೆಗಳು ಸಾಕ್ಷ್ಯಗಳನ್ನು ಸಂಗ್ರಹಿಸಿವೆ.

ಅದರಲ್ಲಿ ಪಾಕಿಸ್ತಾನ ರಾಷ್ಟ್ರೀಯ ದತ್ತಾಂಶ ಮತ್ತು ನೋಂದಣಿ ಪ್ರಾಧಿಕಾರದ (ಎನ್‌ಎಡಿಆರ್‌ಎ) ಬಯೋಮೆಟ್ರಿಕ್ ದತ್ತಾಂಶ, ಮತದಾರರ ಗುರುತಿನ ಚೀಟಿ, ಡಿಜಿಟಲ್ ಸ್ಯಾಟ್‌ಲೈಟ್ ಫೋನ್ ದತ್ತಾಂಶ, ಕರೆ ವಿವರಗಳು ಹಾಗೂ ಜಿಪಿಎಸ್ ಮಾಹಿತಿಗಳೂ ಸೇರಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ದಾಳಿಕೋರರು ಕಾಶ್ಮೀರಿಗಳಲ್ಲ: 'ಮಹಾದೇವ' ಕಾರ್ಯಾಚರಣೆಗೂ ಮುನ್ನ ಹಾಗೂ ನಂತರದಲ್ಲಿ ಹಲವು ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ವಿಧಿವಿಜ್ಞಾನ ಪರೀಕ್ಷೆಯ ವರದಿಗಳು, ದಾಖಲೆಗಳು ಸೇರಿದಂತೆ ಎಲ್ಲ ಸಾಕ್ಷ್ಯಗಳು ಉಗ್ರರು ಪಾಕಿಸ್ತಾನಿಗಳು ಎಂಬುದನ್ನು ದೃಢಪಡಿಸಿವೆ. ಜತೆಗೆ ದಾಳಿಕೋರರಲ್ಲಿ ಯಾರೂ ಕಾಶ್ಮೀರಿಗಳಲ್ಲ ಎಂಬುದನ್ನು ಸ್ಪಷ್ಟಪಡಿಸಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜತೆಗೆ, 'ಇದೇ ಮೊದಲ ಬಾರಿಗೆ ಪಾಕಿಸ್ತಾನ ಸರ್ಕಾರವೇ ನೀಡಿರುವ ದಾಖಲೆಗಳು ದೊರೆತಿದ್ದು, ಯಾವುದೇ ಸಂಶಯವಿಲ್ಲದೆ ಉಗ್ರರು ಪಾಕಿಸ್ತಾನಿಗಳು ಎಂಬುದು ಸ್ಪಷ್ಟವಾಗಿದೆ' ಎಂದೂ ತಿಳಿಸಿದ್ದಾರೆ.

72 ತಾಸು ಉಪವಾಸ ಸತ್ಯಾಗ್ರಹ ಆರಂಭಿಸಿದ ಕೆ.ಕವಿತಾ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹಿಂದುಳಿದ ವರ್ಗಗಳಿಗೆ ಶೇಕಡ 42ರಷ್ಟು ಮೀಸಲಾತಿಗೆ ಆಗ್ರಹಿಸಿ ತೆಲಂಗಾಣ ಜಾಗೃತಿ ಮುಖ್ಯಸ್ಥೆ ಮತ್ತು ವಿಧಾನ ಪರಿಷತ್ ಸದಸ್ಯೆ ಕೆ.ಕವಿತಾ ಅವರು ಸೋಮವಾರದಿಂದ 72 ಗಂಟೆ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳೊಂದಿಗೆ ಸೇರ್ಪಡೆ ಮಾಡದೆ ಅವರಿಗೆ ಪ್ರತ್ಯೇಕವಾಗಿ ಶೇ 10ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದೂ ಅವರು ಆಗ್ರಹಿಸಿದ್ದಾರೆ.



ಕೆ.ಕವಿತಾ

ಹಿಂದುಳಿದ ವರ್ಗಗಳ ಮೀಸಲಾತಿಗಾಗಿ 'ತೆಲಂಗಾಣ ಜಾಗೃತಿ'ಯು ಸಾಕಷ್ಟು ಹೋರಾಟ ನಡೆಸಿದೆ. ರಾಜ್ಯ ಸ್ಥಾನಮಾನ ಪಡೆದ ಬಳಿಕ ಸಾಕಷ್ಟು ಸಾಧಿಸಿದ್ದೇವೆ, ಪ್ರತಿಯೊಬ್ಬ ನಾಗರಿಕರಿಗೂ ಅವರ ಪಾಲಿನದ್ದು ಸಿಗಬೇಕು ಎಂದು ಹೇಳಿದರು.

'ತೆಲಂಗಾಣ ಜಾಗೃತಿ ಸಮಿತಿ ಹೋರಾಟದ ಫಲವಾಗಿ ಹಿಂದುಳಿದ ವರ್ಗಗಳ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಲಾಗಿದೆ. ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನವನ್ನು ಮಹಿಳಾ ಶಿಕ್ಷಕರ ದಿನ ಎಂದು ಘೋಷಿಸಲಾಗಿದೆ' ಎಂದರು.

₹14.73 ಕೋಟಿಯ ಮಾದಕ ವಸ್ತು ವಶ


ಮುಂಬೈ (ಪಿಟಿಐ): ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಾಣಿಜ್ಯ ತೆರಿಗೆ ವಿಭಾಗದ ಅಧಿಕಾರಿಗಳು ಭಾನುವಾರ ಪ್ರಯಾಣಿಕರೊಬ್ಬರನ್ನು ಬಂಧಿಸಿ ₹ 14.73 ಕೋಟಿ ಮೌಲ್ಯದ 15 ಕೆಜಿ ತೂಕದ ಮಾದಕ ವಸ್ತು ಗಾಂಜಾವನ್ನು (ಮರಿಜುವಾನ) ವಶಕ್ಕೆ ಪಡೆದಿದ್ದಾರೆ.

ಬ್ಯಾಂಕಾಕ್‌ನಿಂದ ಛತ್ರಪತಿ ಶಿವಾಜಿ ಮಹಾರಾಜ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕನ ಬಳಿ 'ವಿದೇಶಾಂಗ ವ್ಯವಹಾರಗಳ ಇಲಾಖೆಯ ಸರಕು' ಎಂಬ ಪಟ್ಟಿ ಹಾಕಿದ್ದ ಪೊಟ್ಟಣ ಪತ್ತೆಯಾಗಿತ್ತು. ತಪಾಸಣೆ ಮಾಡಿದಾಗ 14 ಕೆ.ಜಿ.ಗೂ ಹೆಚ್ಚು ಮರಿಜುವಾನ ದೊರಕಿತ್ತು. ರಾಷ್ಟ್ರೀಯ ಸುರಕ್ಷತೆಗೆ ಸಂಬಂಧಿಸಿದ ರಹಸ್ಯ ರಾಜತಾಂತ್ರಿಕ ಸರಕು ಎಂದು ಸುಳ್ಳು ಹೇಳಿ ಈತ ಮಾದಕ ವಸ್ತು ಸಾಗಣೆ ಮಾಡುತ್ತಿದ್ದ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಬಾಲಿವುಡ್ ನಟ ಶಾರುಕ್ ಖಾನ್ ಅವರು ಮೆಕ್ಕಾದಲ್ಲಿನ ಹರಮ್ ಶರೀಫ್‌ನಲ್ಲಿ ಫುಟ್‌ಬಾಲ್ ದಂತಕಥೆ ಕ್ರಿಶ್ಚಿಯಾನೊ ರೊನಾಲ್ಡೊ ಅವರ ಜತೆಗಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೆಲವರು, 'ಎದ್ದೇಳಿ ಜನಗಳೇ, ಇದು ಶನಿವಾರ. ಇಲ್ಲಿ ನೋಡಿ ಶಾರುಕ್ ಖಾನ್ ಮತ್ತು ಕ್ರಿಶ್ಚಿಯಾನೊ ರೊನಾಲ್ಡೊ ಅವರು ಜತೆಗಿರುವ ಚಿತ್ರ' ಎಂದು ಪ್ರತಿಪಾದಿಸುತ್ತಾ, ಚಿತ್ರವನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಅಸಲಿ ಚಿತ್ರ ಅಲ್ಲ.



ಚಿತ್ರವನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ಮಾಡಿದಾಗ, ಹಲವರು ಈ ಚಿತ್ರವನ್ನು ಹಂಚಿಕೊಂಡಿರುವುದು ಕಂಡುಬಂತು. ಇಬ್ಬರೂ ಖ್ಯಾತನಾಮರು ಮೆಕ್ಕಾಕ್ಕೆ ಭೇಟಿ ನೀಡಿರುವ ಬಗ್ಗೆ ಆಗಲಿ, ಪರಸ್ಪರ ಭೇಟಿ ಮಾಡಿರುವ ಬಗ್ಗೆ ಆಗಲಿ ಎಲ್ಲಾದರೂ ಸುದ್ದಿ, ಚಿತ್ರ ಕಾಣುವುದೇ ಎಂದು ಹುಡುಕಿದಾಗ, ಎಲ್ಲೂ ಈ ಬಗ್ಗೆ ಅಧಿಕೃತವಾದ ಸುದ್ದಿ, ಚಿತ್ರ ಲಭ್ಯವಾಗಲಿಲ್ಲ. ಚಿತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿ ಹಲವು ರೀತಿಯ ವ್ಯತ್ಯಾಸಗಳು ಕಂಡವು. ಚಿತ್ರವನ್ನು ಹೈವ್ ಮಾಡರೇಷನ್ ಮತ್ತು ಸೈಟ್ ಎಂಜಿನ್ ಎಐ ಪತ್ತೆ ಸಾಧನಗಳ ಮೂಲಕ ಪರಿಶೀಲಿಸಿದಾಗ, ಇದು ಎಐ ನಿರ್ಮಿತ ಚಿತ್ರ ಎನ್ನುವುದು ಖಚಿತವಾಯಿತು. ನಕಲಿ ಚಿತ್ರವನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6125

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ದರ್ಜಿಯನ್ನು ಹೀಗೂ ಕರೆಯುತ್ತಾರೆ (3)
6.ಹಲ್ಲುಗಳನ್ನು ತೊಳೆಯುವುದು (5)
7.ನಾಗಸ್ವರ ಅಥವಾ ರಾಜ ಸಭೆ (3)
8.ಸಮ್ಮುಖದಲ್ಲೇ ಗೆಳೆಯನಿದ್ದಾನಲ್ಲಾ! (2)
10.ಧಾನ್ಯ ಒಕ್ಕುವ ಸ್ಥಳ (2)
11.ನಾದಿನಿಯ ಧ್ವನಿ! (3)
13.ಅಜ್ಜನ ಹತ್ತಿರವಿರುವ ಆಡು (2)
14.ಮಗ ಇಲ್ಲಿದ್ದಾನೆ (2)
18.ಈತ ಯೋಜನೆ ಮಾಡುವವನು (3)
19.ವಾದವನ್ನು ಮಂಡಿಸುವ ಕ್ರಮ (5)
20.ವಿದ್ಯೆಯನ್ನು ಕಲಿಸುವಿಕೆ (3)

ಮೇಲಿಂದ ಕೆಳಕ್ಕೆ

1.ಈತ ಚಿನ್ನದ ವ್ಯಾಪಾರಿ (4)
2.ಮರವನ್ನು ಕೊಯ್ಯುವ ಸಾಧನ (4)
3.ದಂಪತಿ ಹರಡುತ್ತಿರುವ ಗಾಳಿ ಸುದ್ದಿ (3)
4.ನಡುವೆ ಮಂತ್ರ ಹಾಕಿ ನೀಡಿದ ಆಹ್ವಾನ (4)
5.ಈಕೆ ಬೇಡರ ಹೆಂಗಸು (4)
9.ಖನಿಯಲ್ಲಿ ಸಿಕ್ಕಿದುದುದು (3)
10.ಕದಕ್ಕೆ ಒರಗಿಸಿರುವ ಕೆನ್ನೆ (3)
12.ಸುತ್ತಲಿನ ಜನ (4)
13.ಸರ ತರಲು ಈ ಅರ್ಜೆಂಟು! (4)
15.ದ್ವಾದಶಿ ನಂತರದ ತಿಥಿ (4)
16.ನಡುವೆ ಕರವನ್ನಿಟ್ಟಿರುವ ಘಟನೆ (4)
17.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)

6124ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

3.ಬೆಪ್ಪುತಕ್ಕಡಿ 4.ಸದರ
5.ಲುಬ್ಧಕ 7.ಗುರಿ
10.ಕಾರಿ 11.ಪೇಲವ
12.ಪಂಕ 13.ನಗ
15.ನಡುಕ 18.ಮಡಿಕೆ
19.ಪಿತೃಭೋಜನ

ಮೇಲಿಂದ ಕೆಳಕ್ಕೆ:

1.ಹಂತಕ 2.ಮಡಿಲು
3.ಬೆರಗು 4.ಸಮಕಾಲೀನ
6.ಕರ್ಣಾಕರ್ಣಿಕೆ 8.ರಿಪೇರಿ
9.ಭವನ 14.ಗಮನ
16.ಕಪಿತ್ಥ 17.ವೈಭೋಗ

ಸುಡೊಕು 6509

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8	5		1			4		7
6				5				
	4	2	8				6	
4			5		9	2		1
	2			4			5	
3		5	2		8			6
5	7					8		9
		1	4		5			
	8			7			3	4

6508 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಆಯ್ಕೆಯ ಬಡತನ



ನುಡಿ ಬೆಳಗು

ದೀಪಾ ಹಿರೇಗುತ್ತಿ

ಶಾಂತವೇರಿ ಗೋಪಾಲಗೌಡರು ಕಡಿದಾಳ್ ಮಂಜಪ್ಪನವರ ಶಿಷ್ಯರು. ಶಾಂತವೇರಿಯವರ ಬದುಕಿನ ಒಂದು ಘಟನೆ ಹೀಗಿದೆ. ಕಡಿದಾಳರು ಮಂತ್ರಿಯಾಗಿದ್ದಾಗ ಗೋಪಾಲಗೌಡರಿಗೆ ಅವರ ಅಭಿಮಾನಿಗಳ ಕೋರಿಕೆಯಂತೆ ಐದು ಎಕರೆ ಭೂಮಿಯನ್ನು ದರಖಾಸ್ತು ನೀಡಲು ಒಪ್ಪಿದ್ದರು. ಗೋಪಾಲಗೌಡರಿಗೆ ವಿಷಯ ತಿಳಿಸಿದಾಗ ಅವರು, 'ಉಳುವವನೇ ಹೊಲದೊಡೆಯ ಸಿದ್ಧಾಂತದವನು ನಾನು, ಜಮೀನು ಪಡೆದು ಸ್ವಂತ ಸಾಗುವಳಿ ಮಾಡುತ್ತೇನೆಯೇ? ಗೇಣಿ ವಸೂಲಿ ಮಾಡುವ ಭೂಮಾಲೀಕರ ಸಾಲಿಗೆ ಎಂದೂ ಸೇರಲಾರೆ' ಎಂದು ಹೇಳಿ ಹತ್ತು ಜನ ಕೃಷಿ ಕಾರ್ಮಿಕರಿಗೆ ಆ ಐದು ಎಕರೆ ಜಮೀನನ್ನು ಅರ್ಧರ್ಧ ಎಕರೆಯಂತೆ ಮಂಜೂರು ಮಾಡುವಂತೆ ಮಂಜಪ್ಪನವರಿಗೆ ಮನವಿ ಮಾಡಿದರು. ಗೋಪಾಲಗೌಡರ ಈ ಉತ್ತರ ಕೇಳಿ ಮಂಜಪ್ಪನವರಿಗೆ ಹೆಮ್ಮೆಯಾದರೂ 'ಅವನಿಗೆ ಹೇಳು, ಶ್ರವಣಬೆಳಗೊಳದಲ್ಲಿ ನಿಂತವನ ಜತೆ ನಿಂತುಕೊಳ್ಳಲಿ' ಎಂದರು. ಎಲ್ಲವನ್ನೂ ಪರಿತ್ಯಜಿಸಿದ ಮಹಾನ್ ತ್ಯಾಗಮೂರ್ತಿ ಬಾಹುಬಲಿಗೆ ಶಾಂತವೇರಿಯವರನ್ನು ಹೋಲಿಸಿದ್ದರು ಮಂಜಪ್ಪನವರು.

ಲೋಹಿಯಾ ಅವರ ಶಿಷ್ಯರಾಗಿ ಶಾಂತವೇರಿ ಗೋಪಾಲಗೌಡರು ಸಮಾಜವಾದಿ ಸಿದ್ಧಾಂತಕ್ಕೆ ಮಲೆನಾಡಿನ ನೆಲದಲ್ಲಿ ಬಲವಾದ ಅಡಿಪಾಯ ಹಾಕಿಕೊಟ್ಟವರು. ಹೋರಾಟಗಳಿಂದಲೇ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡವರು. ಮೂರು ಚುನಾವಣೆಗಳಲ್ಲಿ ಗೆದ್ದರೂ ಹಣ ಮಾಡಲಿಲ್ಲ. ಹಾಗಂತ ಅದರ ಬಗ್ಗೆ ಅವರಿಗೆ ಯಾವುದೇ ಮುಜುಗರ ಇರಲಿಲ್ಲ. ಗೆದ್ದ ಮೇಲೂ ಯಾವ ವಿಜಯೋತ್ಸವದಲ್ಲೂ ಭಾಗವಹಿಸುತ್ತಿರಲಿಲ್ಲ. ಗೋಪಾಲಗೌಡರಿಗೆ ಬಡವರ ಮೇಲೆ ಅಪಾರ ಅನುಕಂಪ. ರಾಜಕೀಯವಿರುವುದು ಇಂತಹವರ ಕತ್ತಲ ಬದುಕಿನಲ್ಲಿ ಬೆಳಕು ತರಲೆಂದೇ ಹೊರತು ಸ್ವಹಿತಾಸಕ್ತಿಗಾಗಿ ಅಲ್ಲ ಎಂಬುದು ಅವರ ಸ್ಪಷ್ಟ ಅಭಿಪ್ರಾಯ. ಬರೀ ರಾಜಕಾರಣಿಯಾಗಿರದೇ ಮುತ್ಸದ್ದಿಯ ಅರ್ಹತೆ ಹೊಂದಿದ್ದ ವಿರಳರಲ್ಲೊಬ್ಬರು.

ಬಸ್ಸು, ರೈಲು ಟಿಕೆಟ್‌ಗೆ, ಬೆಳಗಿನ ಕಾಫಿಗೆ ಕೂಡ ಕಿಸೆಯಲ್ಲಿ ದುಡ್ಡಿಲ್ಲದ, ತೊಡಲು ಬಟ್ಟೆಗೂ ತತ್ವಾರವಿದ್ದ ಶಾಸಕರೊಬ್ಬರಿದ್ದರೆಂದರೆ ಅದು ಶಾಂತವೇರಿ ಗೋಪಾಲಗೌಡರು. ಚುನಾವಣೆಗಳಲ್ಲಿ ಠೇವಣಿ ಇಡಲೂ ದುಡ್ಡಿಲ್ಲದ ಅವರಿಗೆ ಆ ಹಣವನ್ನು ಜನರೇ ಒಟ್ಟುಗೂಡಿಸಿ ಕೊಡುತ್ತಿದ್ದರು ಎಂದರೆ ಇವತ್ತು ನಂಬಲು ಸಾಧ್ಯವೇ? ಜಾತ್ಯತೀತ ತತ್ವವನ್ನು ರಕ್ತದಲ್ಲಿಯೇ ಹೊಂದಿದ್ದ ಶಾಂತವೇರಿಯವರು ಜನರನ್ನು ತಮ್ಮಂತಹ ಮನುಷ್ಯರನ್ನಾಗಿ ಮಾತ್ರ ಕಂಡರು. ಹಾಗಾಗಿಯೇ ಬರಿಗೈ ಫಕೀರರಾದ ಅವರನ್ನು ಜನರೂ ಪ್ರೀತಿಸಿದರು ಮತ್ತು ಗೆಲ್ಲಿಸಿದರು.

ಗೋಪಾಲಗೌಡರು ಬಡತನದಲ್ಲಿಯೇ ಹುಟ್ಟಿದರೂ ತಮ್ಮದೇ ಆಯ್ಕೆಯಿಂದ ಬಡತನದಲ್ಲೇ ಬದುಕಿ, ಕೊನೆಯುಸಿರೆಳೆದವರು. ಇದರರ್ಥ ಬಡತನದಲ್ಲಿ ಬದುಕಬೇಕು ಎಂದಲ್ಲ. ಸಾಧನೆಯಿಂದ ಬದುಕಿನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಹಂಬಲ ಮನುಷ್ಯ ಸಹಜ ಮತ್ತು ಅದು ಅಗತ್ಯ ಕೂಡ. ಆದರೆ ಪರಕೀಯ ದುಡ್ಡು ವಿಷಕ್ಕೆ ಸಮಾನ ಎಂದು ನಂಬಿದ್ದ ವ್ಯಕ್ತಿಗಳೂ ಇದ್ದರು ಎಂಬ ಅರಿವು ಇದ್ದರೆ ಬಹುಶಃ ಹಣವೇ ಸರ್ವಸ್ವ ಎಂಬ ನಮ್ಮ ತಪ್ಪು ಅಭಿಪ್ರಾಯ ಕಿಂಚಿತ್ತಾದರೂ ಬದಲಾಗಬಹುದು. ಸ್ವಾತಂತ್ರ್ಯದ ಸಂಭ್ರಮದಲ್ಲಿ ಗೋಪಾಲಗೌಡರಂತಹ ವ್ಯಕ್ತಿತ್ವಗಳನ್ನು ಸ್ಮರಿಸೋಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ಆಗಸ್ಟ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಏಕಾದಶಿ ಗಂ. 13-13 ನಕ್ಷತ್ರ: ಜ್ಯೇಷ್ಠ ಗಂ. 11-23 ಯೋಗ: ಇಂದ್ರ ಗಂ. 7-24 ಕರಣ: ವಿಷ್ಟಿ ಗಂ. 13-13, ಕರ್ಕಾಟಕ ಮಾಸದ 20 ನೇ ದಿನ. ಮಳೆ ನಕ್ಷತ್ರ : ಆಶ್ಲೇಷ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 04-30 , ಸೂರ್ಯೋದಯ : 06-20 ಸೂರ್ಯಾಸ್ತ : 06-53, ಮುಸ್ಲಿಂ ದಿನಾಂಕ : 10 ಸಫರ್, **ಅದೃಷ್ಟ ಸಂಖ್ಯೆ :** 2, 10

ಮೇಷ: ಇಂದಿನ ಕಾರ್ಯ ವೈಖರಿಯನ್ನು ಸ್ವಲ್ಪ ಬದಲಿಸಿ, ಹೊಸ ಕೆಲಸವನ್ನು ಮಾಡಿದರೆ ಜಯ ಕಾಣುವಿರಿ. ಕಠಿಣ ಶ್ರಮದ ಫಲವಾಗಿ ಬಯಸಿದ ಸಂತೋಷದ ಜತೆಗೆ ಹೊಸ ಅನುಭವ ಸಿಗಲಿದೆ.

ವೃಷಭ: ಪಿತೃ ವರ್ಗದವರ ಸಹಾಯ ಹಸ್ತ ಇರಲಿದೆ. ಜೀವನದಲ್ಲಿ ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು, ದುಃಖಗಳೆಲ್ಲಾ ದೂರಾಗಲಿವೆ. ಸ್ವಲ್ಪ ಹಣ ಖರ್ಚು ಮಾಡಿದಲ್ಲಿ ಸರ್ಕಾರಿ ಕೆಲಸವು ಸಾಧ್ಯ.

ಮಿಥುನ: ಶಸ್ತ್ರಚಿಕಿತ್ಸಾ ವೈದ್ಯರಿಗೆ ಪ್ರಶಂಸೆಯ ಮಾತುಗಳು ಕೇಳಿ ಬರಲಿವೆ. ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಅವಕಾಶಗಳು ಅರಸಿ ಬರಲಿವೆ.

ಕರ್ಕಾಟಕ: ವೃತ್ತಿ ಜೀವನಕ್ಕೆ ಸಂಬಂಧಪಟ್ಟಂತೆ ನಿರ್ಣಯ ಕೈಗೊಳ್ಳಲು ಆಪ್ತರೊಬ್ಬರ ಸಲಹೆ ಕೇಳುವಿರಿ. ಹಣದ ಹರಿವು ನಿಧಾನವಾಗಿ ಅನುಭವಕ್ಕೆ ಬರಲಿದೆ. ಶ್ರೀವಿಷ್ಣುಸಹಸ್ರನಾಮದ ಪಠಣೆಯು ನೆಮ್ಮದಿಯನ್ನು ತರುವುದು.

ಸಿಂಹ: ಬದುಕಿನ ಬಗ್ಗೆ ಸಂಗಾತಿ ಹೇಳಿದ ಮುಂದಾಲೋಚನೆಯ ವಿಚಾರಗಳಿಗೆ ಮನ್ನಣೆ ನೀಡುವುದು ಉತ್ತಮ. ಜಮೀನು ಕೊಡುಕೊಳ್ಳುವಿಕೆ ವ್ಯವಹಾರಗಳು ಹೆಚ್ಚಾಗಲಿವೆ. ಕಾರ್ಮಿಕರಿಗೆ ಆಡಳಿತ ವರ್ಗದಿಂದ ಅನುಕೂಲಗಳು ಸಿಗಲಿವೆ.

ಕನ್ಯಾ: ಕೆಲವೊಂದು ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಕೊಂಡರೆ ಉತ್ತಮ. ಗೃಹಕೃತ್ಯದ ಪೂರ್ಣ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕ ವೃತ್ತಿ ಕೈಗೊಳ್ಳಿ.

ತುಲಾ: ಗಣ್ಯ ವ್ಯಕ್ತಿಗಳ ಸಹಾಯದಿಂದ ಸಮಸ್ಯೆಗಳನ್ನು ಜಯಿಸುವಿರಿ. ವೃತ್ತಿಪರ ಕೆಲಸಗಳಲ್ಲಿ ನಿರ್ದಾಕ್ಷಿಣ್ಯವಾಗಿ ವ್ಯವಹರಿಸುವುದನ್ನು ಅಭ್ಯಾಸ ಮಾಡಿಕೊಳ್ಳಿ. ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳಬಹುದು.

ವೃಶ್ಚಿಕ: ಕರ್ಮನಿಷ್ಠೆ ಮತ್ತು ಪ್ರಾಮಾಣಿಕತೆಗೆ ತಕ್ಕ ಫಲ ಪಡೆಯುತ್ತೀರಿ. ಸರಳ ಸ್ವಭಾವದಿಂದ ಮೆಚ್ಚುಗೆ ಗಳಿಸುವಿರಿ. ವರ್ಗಾವಣೆಯಿಂದ ಸಂಸಾರದಿಂದ ದೂರ ಉಳಿಯಲಿದ್ದೀರಿ. ವೈದ್ಯ ವೃತ್ತಿಯವರಿಗೆ ವಿಶೇಷ ಅನುಭವ ಸಿಗಲಿದೆ.


ಧನು: ಸಹೋದರಿಯರಲ್ಲಿ ಸ್ವ-ಪ್ರಯತ್ನದಿಂದ ಸಂಬಂಧ ಉತ್ತಮ ಪಡಿಸಿಕೊಳ್ಳಿ. ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು ರಾಜಕೀಯ ಲಾಭ ಪಡೆದುಕೊಳ್ಳುವಿರಿ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗಲಿದೆ.

ಮಕರ: ಸಂತಾನ ಪ್ರಾಪ್ತಿಯಾಗಲಿದ್ದು, ಸಂಸಾರದಲ್ಲಿ ಸಂತೃಪ್ತ ಜೀವನ ನಡೆಸುವಿರಿ. ತಾಳ್ಮೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಎಚ್ಚರಿಕೆಯ ಮಾತುಗಳು ಕೇಳಬೇಕಾಗಬಹುದು. ಸಂಯಮದ ನಡವಳಿಕೆ ಅಗತ್ಯ.

ಕುಂಭ: ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವುದು ಸರಿಯಾದ ಮಾರ್ಗ. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪಾಠ ಕಲಿಯುವಂತಾಗಲಿದೆ. ಅಧಿಕ ಸುತ್ತಾಟದಿಂದ ಆಯಾಸ.

ಮೀನ: ಮಾತಿನಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ಮಕ್ಕಳ ಆರೋಗ್ಯದಲ್ಲಿ ಕೊರತೆ ಇರುವುದಿಲ್ಲ. ಮಂಜುನಾಥನ ಸೇವೆ ಮಾಡುವುದರಿಂದ ಕೋರ್ಟ್ ವ್ಯವಹಾರಗಳಲ್ಲಿ ಮುನ್ನಡೆ ಕಾಣಲಿದೆ.

ಗುಂಡಣ್ಣ



ಧರ್ಮಸ್ಥಳ: ಬುರುಡೆ, 100 ಮೂಳೆ ಪತ್ತೆ

ನೇತ್ರಾವತಿ ಸ್ನಾನಘಟ್ಟದ ಬಳಿಯ ಕಾಡಿನಲ್ಲಿ ಜಾಗ ತೋರಿಸಿದ್ದ ದೂರುದಾರ • ಆರನೇ ದಿನ ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಆರೋಪ ಪ್ರಕರಣದ ಸಂಬಂಧ ಎಸ್‌ಐಟಿ ಶೋಧಕಾರ್ಯ ಮುಂದುವರಿಸಿದ್ದು, ಸೋಮವಾರ ನೇತ್ರಾವತಿ ಸ್ನಾನಘಟ್ಟದ ಬಳಿಯ ಕಾಡಿನಲ್ಲಿ ಮೃತದೇಹದ ಅವಶೇಷಗಳು ಪತ್ತೆಯಾಗಿವೆ.

'ಪ್ರಕರಣದ ಸಾಕ್ಷಿ ದೂರುದಾರ ತೋರಿಸಿದ್ದ 11ನೇ ಜಾಗಕ್ಕಿಂತ ಸುಮಾರು 100 ಮೀಟರ್ ದೂರದಲ್ಲಿ ನೆಲದ ಮೇಲೆ ಅವಶೇಷಗಳು ಸಿಕ್ಕಿವೆ. ಆ ಜಾಗವನ್ನೂ ಆತನೇ ತೋರಿಸಿದ್ದ. ಒಂದು ತಲೆಬುರುಡೆ, ಬೆನ್ನು ಮೂಳೆ ಸೇರಿ ಸುಮಾರು 100 ಮೂಳೆ ಸಿಕ್ಕಿವೆ' ಎಂದು ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಉದ್ದನೆಯ ಬೆನ್ನುಮೂಳೆಯೂ ಸ್ಥಳದಲ್ಲಿತ್ತು. ತಜ್ಞರ ತಂಡವು ಅದನ್ನು ವೈಜ್ಞಾನಿಕವಾಗಿ ಸಂಗ್ರಹ ಮಾಡಿದೆ. ಈ ಸ್ಥಳದಲ್ಲೇ ಗಂಟು ಹಾಕಿರುವ ಸೀರೆ ಸಹ ಸಿಕ್ಕಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಎಸ್‌ಐಟಿಯವರು ಬೆಳಿಗ್ಗೆ 11.30ರ ಸುಮಾರಿಗೆ ಕಾಡು ಪ್ರವೇಶಿಸಿದ್ದರು. ಇಷ್ಟು ದಿನ ಮಧ್ಯಾಹ್ನ 2 ಗಂಟೆ ಸುಮಾರಿಗೆ ಊಟದ ವಿರಾಮ ನೀಡಲಾಗುತ್ತಿತ್ತು. ಸೋಮವಾರ ಊಟದ ವಿರಾಮವಿಲ್ಲದೆ ಶೋಧ ಮುಂದುವರಿಯಿತು. ಎಸ್‌ಐಟಿಯವರು ಕಾಡಿನಿಂದ ಹೊರಗೆ ಬರುವಾಗ ಸಂಜೆ 6.15 ದಾಟಿತ್ತು. ಮೂರು ಬಕೆಟ್‌ಗಳು ಹಾಗೂ ಎರಡು ಪಿವಿಸಿ ಪೈಪ್‌ಗಳಲ್ಲಿ ಮೃತದೇಹದ ಅವಶೇಷಗಳನ್ನು ಸೀಲ್‌ಮಾಡಿ ಕಾಡಿನಿಂದ ಹೊರಗೆ ತರಲಾಯಿತು.

ಸಾಕ್ಷಿ ದೂರುದಾರ ಧರ್ಮಸ್ಥಳದ ಸ್ನಾನಘಟ್ಟದ ಆಸುಪಾಸಿನಲ್ಲಿ 13 ಜಾಗ ತೋರಿಸಿ, ಅಲ್ಲಿ ಶವಗಳನ್ನು ಹೂತಿದ್ದಾಗಿ ತಿಳಿಸಿದ್ದ. ಆತ ತೋರಿಸಿದ್ದ 10 ಜಾಗಗಳನ್ನು ಇಷ್ಟು ದಿನ ಸರದಿಯಂತೆ ಅಗೆಯಲಾಗಿತ್ತು. ಅದರ ಅನ್ವಯ ದೂರುದಾರ ತೋರಿಸಿರುವ 11ನೇ ಜಾಗವನ್ನು ಸೋಮವಾರ ಅಗೆಯಬೇಕಿತ್ತು.

ಅಧಿಕಾರಿಗಳ ತಂಡ ಕಾಡಿನೊಳಗೆ ಪ್ರವೇಶಿಸಿದ ಸ್ವಲ್ಪ ಹೊತ್ತಿನಲ್ಲೇ ಎರಡು ಚೀಲ ಉಪ್ಪು ಒಯ್ಯಲಾಯಿತು. ಕಮಾಂಡೊ ಪಡೆಯ ನಾಲ್ವರು ಭದ್ರತಾ ಸಿಬ್ಬಂದಿಯನ್ನು ಎಸ್‌ಐಟಿ ಅಧಿಕಾರಿಗಳು ಮೃತದೇಹದ ಅವಶೇಷ ಪತ್ತೆಯಾದ ಸ್ಥಳಕ್ಕೆ ಕರೆಸಿಕೊಂಡರು.

ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್, ಎಸ್‌ಐಟಿಯ ಎಸ್ಪಿಗಳಾದ ಜಿತೇಂದ್ರ ಕುಮಾರ್ ದಯಾಮ, ಸಿ.ಎ.ಸೈಮನ್ ಸ್ಥಳದಲ್ಲಿದ್ದರು.

ಆರನೇ ಜಾಗದಲ್ಲಿ ಗಂಡಸಿನ ಮೃತದೇಹದ ಅವಶೇಷ ಗುರುವಾರ ಪತ್ತೆಯಾಗಿತ್ತು. ಉಳಿದ ಒಂಬತ್ತು ಜಾಗಗಳಲ್ಲಿ ಮೃತದೇಹಗಳನ್ನು ಹೂತ ಯಾವುದೇ ಕುರುಹು ಸಿಕ್ಕಿರಲಿಲ್ಲ.



ಧರ್ಮಸ್ಥಳ ಬಳಿಯ ಕಾಡಿನಲ್ಲಿ ಸೋಮವಾರ ಸಿಕ್ಕ ಮೃತದೇಹಗಳ ಅವಶೇಷಗಳನ್ನು ಸಾಗಿಸಲಾಯಿತು —ಚಿತ್ರ: ಫಕ್ರುದ್ದೀನ್ ಎಚ್.

ಮುಖ್ಯಾಂಶಗಳು

- ಈವರೆಗೆ ಎರಡು ಕಡೆ ಶವಗಳ ಅವಶೇಷ ಪತ್ತೆ
- ಮೃತದೇಹ ಪತ್ತೆಯಾದ ಸ್ಥಳದಲ್ಲಿತ್ತು ಸೀರೆ

ಧರ್ಮಸ್ಥಳದ ವಿದ್ಯಮಾನ ಕುರಿತು ಸಂಸತ್ತಿನಲ್ಲಿ ಪ್ರಸ್ತಾಪ ಮಾಡದ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರ ನಡೆ ಬೇಸರ ಮೂಡಿಸಿದೆ.
ಅಬ್ದುಲ್ ಜಲೀಲ್ ಕೆ., ಅಧ್ಯಕ್ಷ, ಎಸ್‌ಡಿಪಿಐ ಮಂಗಳೂರು ನಗರ ಘಟಕ

ಠಾಣೆಗೆ ದೂರು ನೀಡಿದ ಜಯಂತ್

ಮಂಗಳೂರು: 'ಧರ್ಮಸ್ಥಳ ಗ್ರಾಮದಲ್ಲಿ ಸುಮಾರು 15 ವರ್ಷಗಳ ಹಿಂದೆ 13ರಿಂದ 15 ವರ್ಷದ ಬಾಲಕಿ ಶಂಕಾಸ್ಪದವಾಗಿ ಸಾವಿಗೀಡಾಗಿದ್ದಳು. ಮರಣೋತ್ತರ ಪರೀಕ್ಷೆ ನಡೆಸದೇ ಶವ ಹೂತು ಹಾಕಿದ್ದು, ಎಫ್‌ಐಆರ್ ದಾಖಲಿಸದೆ ಕೃತ್ಯ ಮುಚ್ಚಿ ಹಾಕಲಾಗಿದೆ' ಎಂದು ಜಯಂತ್ ಟಿ. ಧರ್ಮಸ್ಥಳ ಠಾಣೆಗೆ ದೂರು ನೀಡಿದ್ದಾರೆ.

'ಇಚ್ಲಂಪಾಡಿ ನಿವಾಸಿ ಜಯಂತ್ ಎಂಬವರು ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾಗುತ್ತಿರುವ ಘಟನೆಗೆ ಸಂಬಂಧಿಸಿ ದೂರು ನೀಡಲು ಎಸ್.ಐ.ಟಿ ಬೆಳ್ತಂಗಡಿ ಕಚೇರಿಗೆ ಹೋಗಿದ್ದರು. ದೂರು ಪರಿಶೀಲಿಸಿದ್ದ ಅಧಿಕಾರಿಗಳು, ಸೂಕ್ತಕ್ರಮಕ್ಕಾಗಿ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ನೀಡುವಂತೆ ತಿಳಿಸಿದ್ದರು.

'ಅದರಂತೆ ದೂರುದಾರರು ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ನೀಡಿದ ದೂರು ಅರ್ಜಿಯನ್ನು (200/DPS/2025) ಸ್ವೀಕರಿಸಲಾಗಿದೆ. ಈ ದೂರಿನ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.


'13ರಿಂದ 15 ವರ್ಷ ವಯಸ್ಸಿನ ಬಾಲಕಿ ಶವವನ್ನು ಕಣ್ಣಾರೆ ಕಂಡಿದ್ದೇನೆ. ಬೇರೆ ಸಾಕ್ಷಿಗಳೂ ಇದ್ದಾರೆ. 15 ವರ್ಷ ಹಿಂದೆ ಬೆಳ್ತಂಗಡಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಠಾಣಾಧಿಕಾರಿ ಕಾನೂನುಬದ್ಧವಾಗಿ ಪ್ರಕರಣ ನಿರ್ವಹಿಸಿಲ್ಲ. ಧರ್ಮಸ್ಥಳ ಠಾಣೆಗೆ ನಾನು ನೀಡಿರುವ ದೂರು ಎಸ್‌ಐಟಿಗೆ ವರ್ಗಾವಣೆಯಾಗಲಿದೆ' ಎಂದು ಜಯಂತ್ ಟಿ. ವಿಶ್ವಾಸ ವ್ಯಕ್ತಪಡಿಸಿದರು.

ಜಯಂತ್ ಯಾರು?

ಸೌಜನ್ಯಾ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಹೋರಾಟದಲ್ಲಿ ಸಕ್ರಿಯರಾಗಿರುವ ಜಯಂತ್ ಆರ್‌ಟಿಐ ಕಾರ್ಯಕರ್ತರೂ ಆಗಿದ್ದಾರೆ. ಬೆಂಗಳೂರಿನಲ್ಲಿ ಒಳಾಂಗಣ ವಿನ್ಯಾಸಕ್ಕೆ ಸಂಬಂಧಿಸಿದ ವ್ಯವಹಾರ ನಡೆಸುತ್ತಿದ್ದಾರೆ.

'2015ರಿಂದಲೇ ಭ್ರಷ್ಟಾಚಾರ ಮುಕ್ತ ಸಮಾಜಕ್ಕಾಗಿ ಹೋರಾಡುತ್ತಿದ್ದೇನೆ. ನನ್ನ ಹೋರಾಟ ಯಾರ ವಿರುದ್ಧವೂ ಅಲ್ಲ, ಯಾರ ಪರವೂ ಅಲ್ಲ. ನಾನು ದೇವಸ್ಥಾನದ ವಿರುದ್ಧ ಅಲ್ಲ, ಕಮ್ಯುನಿಸ್ಟ್ ಕೂಡ ಅಲ್ಲ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ತನಿಖೆ ಬೇಗ ಮುಗಿಸಿ: ಗುಣಧರನಂದಿ ಮಹಾರಾಜ


ಗುಣಧರನಂದಿ ಮಹಾರಾಜ

ಹುಬ್ಬಳ್ಳಿ: 'ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ನಿಷ್ಪಕ್ಷಪಾತ ತನಿಖೆ ನಡೆಸಿರುವುದು ಸ್ವಾಗತಾರ್ಹ' ಎಂದು ವರೂರಿನ ಗುಣಧರನಂದಿ ಮಹಾರಾಜರು ಸೋಮವಾರ ಹೇಳಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಕಾನೂನು, ಸರ್ಕಾರದ ಮೇಲೆ ವಿಶ್ವಾಸ ಇದೆ. ಪ್ರಕರಣದಿಂದ ಧಾರ್ಮಿಕ ಭಾವನೆಗೆ ಧಕ್ಕೆ ಆಗುತ್ತಿದೆ. ಆದಷ್ಟು ಬೇಗ ತನಿಖೆ ಮುಗಿಸಬೇಕು' ಎಂದರು.

'ತನಿಖೆ ವರದಿಯಿಂದ ಸತ್ಯಾಂಶ ತಿಳಿದ ಬಳಿಕ ಮಂಜುನಾಥಸ್ವಾಮಿಯ ಲಕ್ಷಾಂತರ ಭಕ್ತರ ಸೇರಿಸಿ ವಿಜಯೋತ್ಸವ ಆಚರಿಸಲಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟಿಸಲಾಗುವುದು' ಎಂದರು.

'ವೀರೇಂದ್ರ ಹೆಗ್ಗಡೆಯವರು ಸತ್ಯ, ನ್ಯಾಯದ ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಅವರೊಂದಿಗೆ ಎರಡು ದಶಕಗಳ ಒಡನಾಟವಿದೆ. ಹೆಗ್ಗಡೆಯವರ ಶಿಕ್ಷಣ, ಸಮಾಜಸೇವೆ ಕಾರ್ಯ ಸಹಿಸಿಕೊಳ್ಳಲು ಕೆಲವರಿಗೆ ಆಗುತ್ತಿಲ್ಲ. ಹೀಗಾಗಿ ಕಳಂಕ ತರುವ ಷಡ್ಯಂತ್ರ ನಡೆಯುತ್ತಿದೆ' ಎಂದು ತಿಳಿಸಿದರು.

'ಜೈನ ಧರ್ಮ, ರಾಜ ಮಹಾರಾಜರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಮಾಡುತ್ತಿರುವುದನ್ನು ಖಂಡಿಸಿ ಹೋರಾಟ ರೂಪಿಸಲು ಆಗಸ್ಟ್ 10ರಂದು ಇಲ್ಲಿನ ವರೂರಿನ ನವಗ್ರಹ ತೀರ್ಥ ಕ್ಷೇತ್ರದಲ್ಲಿ ಜೈನ ಸಮಾಜದ ಮುಖಂಡರ ಸಭೆ ಕರೆಯಲಾಗಿದೆ' ಎಂದರು.

ಸುದ್ದಿ 2 ನಿಮಿಷ

ಧರ್ಮಸ್ಥಳ: ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಾಧೀಶ

ಬೆಂಗಳೂರು: 'ಧರ್ಮಸ್ಥಳದಲ್ಲಿ ಕೊಲೆಯಾದ ನೂರಾರು ಶವಗಳನ್ನು ಕಾನೂನು ಬಾಹಿರವಾಗಿ ದಫನ ಮಾಡಲಾಗಿದೆ' ಎಂಬ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಬಂಧಕ ಆದೇಶ ಕೋರಲಾದ ಅಸಲು ದಾವೆ ವಿಚಾರಣೆ ನಡೆಸುತ್ತಿರುವ ಬೆಂಗಳೂರು ಸಿಟಿ ಸಿವಿಲ್ ಕೋರ್ಟ್‌ನ ಸೆಷನ್ಸ್ ನ್ಯಾಯಾಧೀಶ ವಿಜಯ ಕುಮಾರ್ ರೈ ತಮ್ಮ ಮುಂದಿರುವ ಹಾಲಿ ಪ್ರಕರಣವನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸಲು ಮನವಿ ಮಾಡಿದ್ದಾರೆ.

ನ್ಯಾಯಾಧೀಶ ರೈ ಅವರು ನೀಡಿದ್ದ ಪ್ರತಿಬಂಧಕ ಆದೇಶವನ್ನು ಪತ್ರಕರ್ತ ನವೀನ್ ಸೂರಿಂಜೆ, ಸಾಮಾಜಿಕ ಹೋರಾಟಗಾರ ಮುನೀರ್ ಕಾಟಿಪಳ್ಳ ಹಾಗೂ ಬೈರಪ್ಪ ಹರೀಶ್ ಕುಮಾರ್ ಪ್ರಶ್ನಿಸಿದ್ದರು.

'ನ್ಯಾಯಾಧೀಶ ರೈ ಅವರು, ಡಿ. ಹರ್ಷೇಂದ್ರ ಕುಮಾರ್ ಕುಟುಂಬದಿಂದ ನಿರ್ವಹಣೆ ಮಾಡಲಾಗುತ್ತಿರುವ ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥ ಕಾನೂನು ಕಾಲೇಜಿನಲ್ಲಿ 25 ವರ್ಷಗಳ ಹಿಂದೆ ವಿದ್ಯಾರ್ಥಿಯಾಗಿದ್ದರು. ಹೀಗಾಗಿ, ಹಾಲಿ ಪ್ರಕರಣವನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸಬೇಕು' ಎಂದು ಕೋರಿ ಮೆಮೊ ಸಲ್ಲಿಸಿದ್ದರು.

ಈ ಕಾರಣದಿಂದ ನ್ಯಾಯಾಧೀಶ ರೈ ಅವರು, 'ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಮುಂದುವರಿಸಲು ನ್ಯಾಯ ಒದಗಿಸಿದರಷ್ಟೇ ಸಾಲದು. ಅದು ಕಾಣುವಂತಿರಬೇಕು. ಈ ಮೊಕದ್ದಮೆಯಲ್ಲಿ ನಾನು ಯಾವುದೇ ವೈಯಕ್ತಿಕ ಆಸಕ್ತಿ ಹೊಂದಿಲ್ಲ. ಆದಾಗ್ಯೂ, ನಾನು ಧರ್ಮಸ್ಥಳ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಈ ಕಾರಣದಿಂದ, ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಕಾಯ್ದೆ-1979ರ ಕಲಂ 13(2)(ಬಿ) ಪ್ರಕಾರ ಈ ಅಸಲು ದಾವೆ ಸಂಖ್ಯೆ No.5185/2025ರ ಈ ಮೊಕದ್ದಮೆಯನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸುವುದು ಸೂಕ್ತ' ಎಂದು ಪ್ರಧಾನ ನ್ಯಾಯಾಧೀಶರಿಗೆ ವಿನಂತಿ ಮಾಡಿದ್ದಾರೆ.

ನ್ಯಾಯಾಧೀಶ ವಿಜಯಕುಮಾರ್ ರೈ ಅವರು ತಮ್ಮ ಮುಂದಿದ್ದ ಈ ಪ್ರಕರಣದಲ್ಲಿ, 'ಕ್ಷೇತ್ರದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಸಹೋದರ ಡಿ. ಹರ್ಷೇಂದ್ರ ಕುಮಾರ್ ವಿರುದ್ಧ ಯಾವುದೇ ಮಾನಹಾನಿ ವಿಷಯ ಪ್ರಸಾರ ಅಥವಾ ಪ್ರಕಟ ಮಾಡಬಾರದು' ಎಂದು ಈ ಮೊದಲು ಏಕಪಕ್ಷೀಯ ಪ್ರತಿಬಂಧಕ ಆದೇಶ ನೀಡಿದ್ದರು.

ಚಿಕ್ಕೋಡಿ: ತಗ್ಗಿದ ಮಳೆ ಸೇತುವೆ ಸಂಚಾರ ಮುಕ್ತ



ಚಿಕ್ಕೋಡಿ: ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶ ವ್ಯಾಪ್ತಿಯಲ್ಲಿ ಮಳೆ ಪ್ರಮಾಣ ಕಡಿಮೆ ಆಗಿದೆ. ಚಿಕ್ಕೋಡಿ ತಾಲ್ಲೂಕಿನ ದೂಧಗಂಗಾ ನದಿಯ ಮಲಿಕವಾಡ- ದತ್ತವಾಡ ಹಾಗೂ ಕೃಷ್ಣಾ ನದಿಯ ಕಲ್ಲೋಳ-ಯಡೂರ ಸೇತುವೆಗಳು ಸೋಮವಾರ ಸಂಚಾರಕ್ಕೆ ಮುಕ್ತವಾಗಿವೆ.

ಮಹಾರಾಷ್ಟ್ರದ ರಾಜಾಪೂರೆ ಬ್ಯಾರೇಜಿನಿಂದ 44,750 ಕ್ಯೂಸೆಕ್ ಹೊರ ಹರಿವು ಇದ್ದು, ಸದಲಗಾ ಪಟ್ಟಣದ ಬಳಿಯಲ್ಲಿ ದೂಧಗಂಗಾ ನದಿಗೆ 11,616 ಕ್ಯೂಸೆಕ್ ಹೊರ ಹರಿವು ಇದೆ. ತಾಲ್ಲೂಕಿನ ಕಲ್ಲೋಳ-ಯಡೂರ ಬ್ಯಾರೇಜ್ ಬಳಿಯಲ್ಲಿ ಕೃಷ್ಣಾ ನದಿಯ ಹೊರ ಹರಿವು 56,366 ಕ್ಯೂಸೆಕ್ ಇದೆ.

ಇಡೀ ರಾತ್ರಿ ಮಳೆ: ನಾಗಮಂಗಲ (ಮಂಡ್ಯ)- ತಾಲ್ಲೂಕಿನಾದ್ಯಂತ ಭಾನುವಾರ ರಾತ್ರಿಯಿಡೀ ಮಳೆ ಸುರಿಯಿತು. ಪಟ್ಟಣ, ಗ್ರಾಮೀಣ ಭಾಗದಲ್ಲೂ ವಿದ್ಯುತ್ ಸಂಪರ್ಕ ಕಡಿತವಾಗಿತ್ತು.

ತಾಲ್ಲೂಕಿನ ಕಸಬಾ, ಬೆಳ್ಳೂರು ಮತ್ತು ದೇವಲಾಪುರ ಮತ್ತು ಬಿಂಡಿಗನವಿಲೆ ಹೋಬಳಿಯ ಬಹುತೇಕ ಭಾಗಗಳಲ್ಲಿ ಧಾರಾಕಾರ ಮಳೆಯಾಯಿತು. ಉಳಿದೆಡೆ ಸಾಧಾರಣ ಮಳೆಯಾಗಿದೆ.

ಅವಕಾಶ ನೀಡಿದರೆ ಬಿಜೆಪಿ ಭಿನ್ನಮತ ಶಮನ: ಶ್ರೀರಾಮುಲು

ದಾವಣಗೆರೆ: 'ಪಕ್ಷ ಅವಕಾಶ ನೀಡಿದರೆ ರಮೇಶ ಜಾರಕಿಹೊಳಿ, ಬಿ.ವೈ. ವಿಜಯೇಂದ್ರ ಹೀಗೆ ಎಲ್ಲ ನಾಯಕರನ್ನೂ ಒಂದು ಮಾಡುತ್ತೇನೆ. ಪಕ್ಷದೊಳಗಿನ ಭಿನ್ನಮತ ಶಮನಗೊಳಿಸುತ್ತೇನೆ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಈ ಮೂಲಕ ಪರೋಕ್ಷವಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗುವ ಅಭಿಲಾಷೆ ವ್ಯಕ್ತಪಡಿಸಿದರು. 'ಶಾಸಕ ಜನಾರ್ದನ ರೆಡ್ಡಿ ಹಾಗೂ ನನ್ನ ಒಂದುಗೂಡಿಸುವಲ್ಲಿ ಬಿಜೆಪಿಯ ಎಲ್ಲಾ ನಾಯಕರ ಪಾತ್ರವಿದೆ' ಎಂದರು

'ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲು ಸಿದ್ದರಾಮಯ್ಯ ಅವಕಾಶ ನೀಡುವುದಿಲ್ಲ. ಅಂತಹ ಸ್ಥಿತಿ ಬಂದರೆ ಸರ್ಕಾರವನ್ನೇ ಕೆಡವುತ್ತಾರೆ' ಎಂದರು.

ಪೌತಿಖಾತೆಗೆ ಆಂದೋಲನ • ಗ್ರಾಮ ಆಡಳಿತ ಅಧಿಕಾರಿಗಳಿಗೆ ಪ್ರೋತ್ಸಾಹಧನ: ಕೃಷ್ಣ ಬೈರೇಗೌಡ

ಮೃತ ರೈತರ ಹೆಸರಿನಲ್ಲಿವೆ 52 ಲಕ್ಷ ಪಹಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೃತ ರೈತರ ಹೆಸರಿನಲ್ಲೇ 52 ಲಕ್ಷ ಪಹಣಿಗಳಿದ್ದು, ಕಾನೂನುಬದ್ಧ ವಾರಸುದಾರರಿಗೆ ಪೌತಿಖಾತೆ ಮಾಡಿಕೊಡಲು ಪ್ರತಿ ಜಿಲ್ಲೆಯಲ್ಲೂ ಅಭಿಯಾನ ಹಮ್ಮಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಮೃತರ ಹೆಸರಿನಲ್ಲಿರುವ ಜಮೀನುಗಳಿಗೆ ಪಿ.ಎಂ ಕಿಸಾನ್, ಹನಿ ನೀರಾವರಿ ಹಾಗೂ ಯಂತ್ರೋಪಕರಣ ಖರೀದಿ ಸಬ್ಸಿಡಿ ನೀಡದಂತೆ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಕೇಂದ್ರದ ಈ ಆದೇಶದಿಂದ ಮೃತ ರೈತರ ಕುಟುಂಬಗಳಿಗೆ ತೊಂದರೆಯಾಗುತ್ತದೆ. ಹಾಗಾಗಿ, ಕಂದಾಯ ಇಲಾಖೆ ಅಧಿಕಾರಿಗಳೇ ರೈತರ ಮನೆ ಬಾಗಿಲಿಗೆ ತೆರಳಿ ಪೌತಿಖಾತೆ ಮಾಡಿಕೊಡಲಿದ್ದಾರೆ. ಈಗಾಗಲೇ 2.30 ಲಕ್ಷ ಪಹಣಿಗಳನ್ನು ಖಾತೆ ಮಾಡಲಾಗಿದೆ. ಪ್ರಗತಿ ಸಾಧಿಸುವ ಗ್ರಾಮ ಆಡಳಿತ ಅಧಿಕಾರಿಗಳಿಗೆ ಪ್ರತಿ ಪ್ರಕರಣಕ್ಕೂ ₹6 ನೀಡಲು ನಿರ್ಧರಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ನನ್ನ ಭೂಮಿ' ಯೋಜನೆಯಲ್ಲಿ ದರ್ಖಾಸ್ತು ಪೋಡಿಗಾಗಿ ಎಂಟು ತಿಂಗಳಲ್ಲಿ 1,09,000 ಜಮೀನುಗಳ ಅಳತೆ ಮಾಡಲಾಗಿದೆ. ಡಿಸೆಂಬರ್ ಒಳಗಾಗಿ 2 ಲಕ್ಷ ಜಮೀನುಗಳಿಗೆ ಪೋಡಿ ಮಾಡಿಕೊಡುವ ಗುರಿ ನಿಗದಿ ಮಾಡಲಾಗಿದೆ. ಇದರಿಂದ 30 ಲಕ್ಷ ರೈತರಿಗೆ ಅನುಕೂಲವಾಗಲಿದೆ ಎಂದರು.

ಹಾಡಿ, ಹಟ್ಟಿ, ತಾಂಡಾ, ಮಜರೆ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ, 1.62 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಅರ್ಹತೆ ಇದ್ದರೂ ಬಿಟ್ಟುಹೋಗಿದ್ದ 4,250 ಅರ್ಹ ಜನವಸತಿ ಪ್ರದೇಶಗಳನ್ನು ಗುರುತಿಸಲಾಗಿದೆ. ಡಿಸೆಂಬರ್ ಒಳಗೆ ಎಲ್ಲ ಗ್ರಾಮಗಳಿಗೂ ಕಂದಾಯ ಸ್ಥಾನಮಾನ ನೀಡಲಾಗುವುದು ಎಂದು ಮಾಹಿತಿ ನೀಡಿದರು.



ಒಳ ಹರಿವು ಉತ್ತಮವಾಗಿದ್ದರೂ, ಜಲಾಶಯಗಳ ನೀರಿನ ನಿರ್ವಹಣೆ ಬಗ್ಗೆ ಎಚ್ಚರವಹಿಸಬೇಕು. ಮುಂದಿನ ದಿನಗಳಲ್ಲಿ ಮಳೆ ಕುಂಠಿತವಾದರೂ, ನೀರಿನ ಕೊರತೆಯಾಗದಂತೆ ಜಿಲ್ಲಾಧಿಕಾರಿಗಳು ನಿಗಾವಹಿಸಬೇಕು
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಹತ್ತೂವರೆ ಗಂಟೆ ನಿರಂತರ ಸಭೆ

ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯಲ್ಲಿ ಬೆಳಗ್ಗೆ 10ಕ್ಕೆ ಆರಂಭವಾದ ಎಲ್ಲಾ ಜಿಲ್ಲೆಗಳ ತಿಂಗಳ ಪ್ರಗತಿ ಪರಿಶೀಲನಾ ಸಭೆ ರಾತ್ರಿ 8.30ಕ್ಕೆ ಮುಕ್ತಾಯವಾಯಿತು.

ಸತತ ಹತ್ತೂವರೆ ಗಂಟೆ ನಡೆದ ಸಭೆಯಲ್ಲಿ ದರ್ಖಾಸ್ತು ಪೋಡಿ, ಪೌತಿಖಾತೆ, ಕಂದಾಯ ಗ್ರಾಮ ಘೋಷಣೆ, ಭೂ ಸುರಕ್ಷಾ ಸೇರಿದಂತೆ ಸರ್ಕಾರದ ಎಲ್ಲಾ ಅಭಿಯಾನಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿಗಳಿಗೆ ಮುಂದಿನ ಗುರಿ ನಿಗದಿ ಮಾಡುವ ಜತೆಗೆ, ಸವಾಲುಗಳ ಕುರಿತೂ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.08	13,380	5,711
ಹಾರಂಗಿ	2,859	2,855.84	4,050	3,125
ಕಬಿನಿ	2,284.00	2,282.91	9,956	5,000
ಹೇಮಾವತಿ	2,922	2,921.80	9,759	5,225
ಲಿಂಗನಮಕ್ಕಿ	1,819	1,811.60	11,224	7,549
ಸೂಪಾ (ಮೀ)	564	551.48	6,250.25	5,044.88
ಮಾಣಿ	595	590.65	1,293	706
ತುಂಗಭದ್ರಾ	1,633	1,626.06	24,130	23,669
ಮಲಪ್ರಭಾ	2,079.5	2,075.30	4,841	1,844
ಘಟಪ್ರಭಾ	2175	2,171.26	6,102	4380
ಭದ್ರಾ *	186	180.3	10,918	3,962
ಆಲಮಟ್ಟಿ (ಮೀ)	519.6	518.85	67,432	20,395
ನಾರಾಯಣಪುರ (ಮೀ)	492.25	492.15	15,000	7,700

* ನೆಲಮಟ್ಟದಿಂದ

ಅಕ್ರಮ ಸಾಗಣೆ: ರಸಗೊಬ್ಬರ ವಶ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲೆಹೊಳೆ ಚೆಕ್ ಪೋಸ್ಟ್ ಮೂಲಕ ನೆರೆಯ ಕೇರಳಕ್ಕೆ ಯೂರಿಯಾ ರಸಗೊಬ್ಬರ ಅಕ್ರಮ ಸಾಗಣೆಯನ್ನು ಕೃಷಿ ಇಲಾಖೆ ಅಧಿಕಾರಿಗಳು ಪತ್ತೆ ಮಾಡಿದ್ದು, ಲಾರಿ ವಶಪಡಿಸಿಕೊಂಡಿದ್ದಾರೆ.

ನಂಜನಗೂಡಿನ ಗೋದಾಮಿನಿಂದ ರಸಗೊಬ್ಬರ ಸಾಗಣೆ ಮಾಡುತ್ತಿರುವ ಕುರಿತ ಖಚಿತ ಮಾಹಿತಿ ಮೇರೆಗೆ ಅಧಿಕಾರಿಗಳು ಪೊಲೀಸರ ಸಹಕಾರದೊಂದಿಗೆ ಸೋಮವಾರ ದಾಳಿ ನಡೆಸಿದರು.

'ಕೇರಳ ನೋಂದಣಿಯ ಲಾರಿಯಲ್ಲಿ 15 ಟನ್‌ನಷ್ಟು ರಸಗೊಬ್ಬರವಿದ್ದು, ಚಾಲಕ ಪರಾರಿಯಾಗಿದ್ದಾನೆ. ಅದನ್ನು ಪೊಲೀಸರ ವಶಕ್ಕೆ ನೀಡಲಾಗಿದೆ' ಎಂದು ಕೃಷಿ ಅಧಿಕಾರಿ ಕಿರಣ್ ಕುಮಾರ್ ತಿಳಿಸಿದರು.

ರೈಸ್‌ಮಿಲ್‌ನಲ್ಲಿ ಅಕ್ರಮ ದಾಸ್ತಾನು: ನಂಜನಗೂಡು ವರದಿ (ಮೈಸೂರು) ನಗರದ ಗೌಸಿಯಾ ರೈಸ್ ಮಿಲ್‌ನಲ್ಲಿ ಅಕ್ರಮವಾಗಿ ದಾಸ್ತಾನು 200ಕ್ಕೂ ಹೆಚ್ಚು ಮೂಟೆ ಯೂರಿಯಾ ಗೊಬ್ಬರದ ದಾಸ್ತಾನು ಮಾಡಿದ್ದು, ಜಪ್ತಿ ಮಾಡಲಾಗಿದೆ.

ರೈತ ಸಂಘದ ಕಾರ್ಯಕರ್ತರು ದಾಳಿ ನಡೆಸಿ ಪತ್ತೆ ಹಚ್ಚಿದ್ದಾರೆ. ತಾಲ್ಲೂಕು ಘಟಕದ ಅಧ್ಯಕ್ಷ ಸತೀಶ್ ರಾವ್ ಕೃಷಿ ಇಲಾಖೆ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದರು. 'ಯೂರಿಯಾ ಮೂಟೆಗಳನ್ನು ಎಪಿಎಂಸಿಗೆ ಸಾಗಿಸಲಾಗಿದ್ದು, ಜಿಲ್ಲಾಧಿಕಾರಿಗೆ ವರದಿ ನೀಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹನುಮಂತಪುರ: 20 ನವಿಲು ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಮಧುಗಿರಿ: ತಾಲ್ಲೂಕಿನ ಮಿಡಿಗೇಶಿ ಹೋಬಳಿ ಹನುಮಂತಪುರದಲ್ಲಿ ಎರಡು ದಿನಗಳ ಹಿಂದೆ 20 ನವಿಲುಗಳು ಮೃತಪಟ್ಟಿವೆ. ಗೋಮಾಳ ಜಾಗದಲ್ಲಿ ಆ.2ರಂದು ಮೂರು ಗಂಡು, 17 ಹೆಣ್ಣು ನವಿಲುಗಳು ಮೃತಪಟ್ಟಿವೆ.

'ಅಕ್ಕಪಕ್ಕದ ಜಮೀನುಗಳಲ್ಲಿ ಮುಸುಕಿನಜೋಳ ಬೆಳೆಯುತ್ತಾರೆ. ಬೆಳೆ ನಾಶ ಮಾಡುತ್ತವೆ ಎಂದು ಬೆಳೆಗೆ ಕೀಟನಾಶಕ ಸಿಂಪಡಿಸಿದ್ದರು. ಅವನ್ನು ತಿಂದು ಸತ್ತಿವೆ' ಎಂದು ಗ್ರಾಮಸ್ಥರು ದೂರಿದ್ದಾರೆ.

ನವಿಲುಗಳ ಕಳೇಬರಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಮೇಲೆ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಎಸಿಎಫ್ ಮಲ್ಲಿಕಾರ್ಜುನ, ವಲಯ ಅರಣ್ಯಾಧಿಕಾರಿ ಸುರೇಶ್, ಉಪ ಅರಣ್ಯ ವಲಯಾಧಿಕಾರಿ ಮುತ್ತುರಾಜು ಭೇಟಿ ನೀಡಿದ್ದರು.


ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಹೋಬಳಿಯ ಹನುಮಂತಪುರ ಸಮೀಪ ಸತ್ತ ನವಿಲುಗಳು

ಡಿಸಿಎಫ್ ನೇತೃತ್ವದಲ್ಲಿ ತನಿಖೆ

ಬೆಂಗಳೂರು: ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಮಿಡಿಗೇಶಿಯ ರೈತರೊಬ್ಬರ ಜಮೀನಿನಲ್ಲಿ 19 ನವಿಲು ಗಳು ಮೃತಪಟ್ಟ ಪ್ರಕರಣದ ತನಿಖೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ನೇತೃತ್ವದ ತಂಡ ನಡೆಸಲಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನವಿಲುಗಳ ಸಾವಿನ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಸಾವಿಗೆ ಕೀಟನಾಶಕ ಸೇವನೆ ಕಾರಣ ಎಂಬ ಅಂಶ ಮಾಧ್ಯಮಗಳಲ್ಲಿ ವರದಿಯಾಗಿದೆ. ನವಿಲುಗಳನ್ನು ಸಾಯಿಸಲೆಂದೇ ವಿಷ ಹಾಕಲಾಗಿತ್ತೆ ಅಥವಾ ಬೆಳೆಗಳಿಗೆ ಸಿಂಪಡಿಸಿದ ಕೀಟನಾಶಕಯುಕ್ತ ಫಸಲು ತಿಂದು ನವಿಲುಗಳು ಮೃತಪಟ್ಟಿವೆಯೇ ಎಂಬ ಬಗ್ಗೆ ತನಿಖೆ ನಡೆಸಿ, ಐದು ದಿನಗಳಲ್ಲಿ ವರದಿ ಸಲ್ಲಿಸಲು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸೂಚಿಸಲಾಗಿದೆ' ಎಂದು ಹೇಳಿದರು.

'ಮಲೆಮಹದೇಶ್ವರ ಬೆಟ್ಟದಲ್ಲಿ ಈಚೆಗೆ ಹುಲಿ, ಅದರ ನಾಲ್ಕು ಮರಿಗಳು ವಿಷ ಸೇವನೆಯಿಂದ ಮೃತಪಟ್ಟಿದ್ದವು. ನಂತರ ಕೋತಿಗಳನ್ನು ಕೊಂದು ಬಂಡೀಪುರದ ಬಳಿ ಎಸೆದಿದ್ದರು. ಯಾವುದೇ ವನ್ಯಜೀವಿ ಮೃತಪಟ್ಟರೂ 'ಆಡಿಟ್' ಮಾಡಿಸಬೇಕು, ತಕ್ಷಣ ಮಾಹಿತಿ ನೀಡಬೇಕು ಎಂದು ನಿರ್ದೇಶನ ನೀಡಲಾಗಿದೆ' ಎಂದರು.

ಕೆಆರ್‌ಎಸ್ ನಿರ್ಮಾಣ: 18ನೇ ಶತಮಾನದಲ್ಲೇ ಯತ್ನ ನಡೆದಿತ್ತು • 1911ರಲ್ಲಿ ಆರಂಭ, 1931ರಲ್ಲಿ ಪೂರ್ಣ

ಪ್ರಯತ್ನಿಸಿದ್ದು ಟಿಪ್ಪು, ನಿರ್ಮಿಸಿದ್ದು ನಾಲ್ವಡಿ!

• ಗಣಂಗೂರು ನಂಜೇಗೌಡ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಕನ್ನಂಬಾಡಿ ಗ್ರಾಮದ ಬಳಿ ಕಾವೇರಿ ನದಿಗೆ ಅಣೆಕಟ್ಟೆ ಕಟ್ಟಲು ಟಿಪ್ಪು ಸುಲ್ತಾನ್ 18ನೇ ಶತಮಾನದ ಅಂತ್ಯದಲ್ಲಿ ಪ್ರಯತ್ನಿಸಿದ್ದರಾದರೂ ಅದೇ ಸ್ಥಳದಲ್ಲಿ ಅಣೆಕಟ್ಟೆ ನಿರ್ಮಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರ್.

ಕೃಷ್ಣರಾಜ ಸಾಗರ ಅಣೆಕಟ್ಟೆಯ ದಕ್ಷಿಣ ದ್ವಾರದ ಪೂರ್ವ ಭಾಗದ ಗೋಡೆಯ ಮೇಲಿರುವ ಫಲಕಗಳ ಪ್ರಕಾರ ಟಿಪ್ಪು 1794ರಲ್ಲಿ, 70 ಅಡಿ ಎತ್ತರದ ಅಣೆಕಟ್ಟೆ ನಿರ್ಮಿಸಲು ಅಸ್ತಿಭಾರ ಹಾಕಿಸಿದ್ದರು. ಇಲ್ಲಿರುವ ಪರ್ಷಿಯನ್, ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಶಿಲಾ ಫಲಕಗಳಲ್ಲಿ ಈ ಉಲ್ಲೇಖಗಳಿವೆ.

'ಚರಿತ್ರೆಯ ಪುಟಗಳಲ್ಲಿರುವ ಲಿಖಿತ ಮಾಹಿತಿಯನ್ನು ಆಧರಿಸಿ ಈ ಶಿಲಾ ಫಲಕ ಕೆತ್ತಿರುವ ಸಾಧ್ಯತೆ ಇದೆ' ಎಂಬುದು ಇತಿಹಾಸಕಾರ ಪ್ರೊ.ಪಿ.ವಿ. ನಂಜರಾಜ ಅರಸು ಅವರ ಮಾತು.

'ಟಿಪ್ಪು ಕಾಲದಲ್ಲಿ ಕನ್ನಂಬಾಡಿ ಬಳಿ ಅಣೆಕಟ್ಟೆ ನಿರ್ಮಾಣ ಕಾರ್ಯ ಆರಂಭವಾಗಿತ್ತು' ಎನ್ನಲು ಫಲಕ ಹೊರತುಪಡಿಸಿ ಇತರ ಯಾವುದೇ ಕುರುಹು ಸಿಕ್ಕಿಲ್ಲ.

ವಿಶೇಷವೆಂದರೆ, ಅಣೆಕಟ್ಟೆಗೆ ಹೊಂದಿಕೊಂಡ ಬೃಂದಾವನದ ದಕ್ಷಿಣ ತುದಿಯಲ್ಲಿ, 1940ರ ನಂತರ ಸ್ಥಾಪಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಯ ಪೀಠದಲ್ಲಿಯೂ 'ಪರ್ಷಿಯನ್' ಭಾಷೆಯ ಫಲಕ ಹಾಕಲಾಗಿದೆ. 'ಈ ಫಲಕ ಹೇಗೆ ಬಂತು' ಎಂಬ ಪ್ರಶ್ನೆಗೆ ಅಧಿಕಾರಿಗಳ ಬಳಿ ಉತ್ತರವಿಲ್ಲ.

ಸರ್ ಎಂ.ವಿ. ನೀಲನಕ್ಷೆ: 1799ರಲ್ಲಿ ಟಿಪ್ಪು ಸುಲ್ತಾನ್ ಅಂತ್ಯಗೊಂಡ 112 ವರ್ಷದ ಬಳಿಕ, 1911ರಲ್ಲಿ ಟಿಪ್ಪು ಅಡಿಗಲ್ಲು ಹಾಕಿದ್ದರು ಎನ್ನಲಾದ ಸ್ಥಳದ ಸಮೀಪವೇ ನಾಲ್ವಡಿ ಅವರ ಕಾಲದಲ್ಲಿ ಕಾವೇರಿ ನದಿಗೆ ಕಟ್ಟೆ ಕಟ್ಟುವ ಕಾರ್ಯ ಆರಂಭವಾಯಿತು. ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯ 1910ರಲ್ಲಿ ನೀಲನಕ್ಷೆ ರೂಪಿಸಿದ್ದರು.

₹2.53 ಕೋಟಿ ವೆಚ್ಚದ ಬೃಹತ್ ಯೋಜನೆಗೆ 1911ರ ಅಕ್ಟೋಬರ್ 12ರಂದು ಮೈಸೂರು ಸರ್ಕಾರ ಅಧಿಕೃತ ಆದೇಶವನ್ನೂ (ಸರ್ಕಾರದ ಆದೇಶ ಸಂಖ್ಯೆ: ಸಿ.-13198490) ಹೊರಡಿಸಿತು.

'ನಿರ್ಮಾಣಕ್ಕೆ ಹಣಕಾಸಿನ ಕೊರತೆ ಉಂಟಾದಾಗ, ನಾಲ್ವಡಿ ಅವರು ಖಾಸಗಿ ಭಂಡಾರದಲ್ಲಿದ್ದ 3 ಮೂಟೆ ಚಿನ್ನಾಭರಣ ಮತ್ತು ವಜ್ರ ವೈಡೂರ್ಯಗಳನ್ನು ಮುಂಬೈ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ಕೊಟ್ಟರು' ಎಂಬ ಅಂಶ ಇತಿಹಾಸಕಾರ ಪ್ರೊ.ಪಿ.ವಿ. ನಂಜರಾಜ ಅರಸು ಅವರ 'ನಾನು ಕನ್ನಂಬಾಡಿ ಕಟ್ಟೆ' ಪುಸ್ತಕ ಸೇರಿದಂತೆ ವಿವಿಧ ಕೃತಿಗಳಲ್ಲಿ ದಾಖಲಾಗಿದೆ.

1915ರ ವೇಳೆಗೆ 65 ಅಡಿ ಎತ್ತರದ ಅಣೆಕಟ್ಟೆ ನಿರ್ಮಾಣವಾಗಿತ್ತು. 1931ರ ಹೊತ್ತಿಗೆ 130 ಅಡಿ ಎತ್ತರದ (ನೀರು ನಿಲ್ಲುವ ಎತ್ತರ– 124.80 ಅಡಿ) ಅಣೆಕಟ್ಟೆ ನಿರ್ಮಾಣ ಕಾರ್ಯ ಪೂರ್ಣಗೊಂಡಿತು.



ಅಣೆಕಟ್ಟೆ ದಕ್ಷಿಣ ದ್ವಾರದಲ್ಲಿ ಇರುವ ಟಿಪ್ಪು ಸುಲ್ತಾನ್ ಚಿತ್ರಸಹಿತ ಫಲಕ (ಎಡಚಿತ್ರ). ಕೆಆರ್‌ಎಸ್ ಬೃಂದಾವನದ ದಕ್ಷಿಣದಲ್ಲಿ, 1940ರ ನಂತರ ಸ್ಥಾಪಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ

ಫಲಕದಲ್ಲಿ ಏನಿದೆ...?

'ಪೈಗಂಬರ್ ಮಹಮ್ಮದರ ಜನ್ಮದಿನದಿಂದ ಪ್ರಾರಂಭವಾದ ಸೌರಮಾನ ಶಕೆ ಸಾವಿರದ ಇನ್ನೂರ ಇಪ್ಪತ್ತೊಂದನೆ ಸಂವತ್ಸರವಾದ, ಷಾದಾಬ್ ಶುಭ ವರ್ಷದ ತಕಿ ಮಾಸದ ಇಪ್ಪತ್ತೊಂದನೆ ತೇದಿಯಾದ ಶುಭ ದಿವಸ...' ಎಂದು ಫಲಕದ ಸಾಲು ಆರಂಭವಾಗುತ್ತದೆ.

'ಭಗವಂತನ ಛಾಯಾ ಸ್ವರೂಪರಾದ ಹಜರತ್ ಟಿಪ್ಪು ಸುಲ್ತಾನರಾದ ನಾವು, ರಾಜಧಾನಿಗೆ ಪಶ್ಚಿಮ ದಿಕ್ಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಚಿರಸ್ಥಾಯಿಯಾದ ಅಣೆಕಟ್ಟೆಯನ್ನು ಕಟ್ಟಿಸಲು ಶಂಕುಸ್ಥಾಪನೆ ಮಾಡಿಸಿದ್ದೇವೆ' ಎಂದೂ ಬರೆಯಲಾಗಿದೆ.

ಈಗ ಅಣೆಕಟ್ಟೆಯ ದಕ್ಷಿಣ ದ್ವಾರದಲ್ಲಿರುವ ಟಿಪ್ಪು ಸುಲ್ತಾನ್ ಭಾವಚಿತ್ರ ಸಹಿತ ಫಲಕವನ್ನು ಯಾರು, ಯಾವಾಗ ಹಾಕಿಸಿದ್ದಾರೆ ಎಂಬ ಮಾಹಿತಿ ಲಭ್ಯವಿಲ್ಲ
ವಿ.ಜಯಂತ್, ಇ.ಇ., ಕಾವೇರಿ ನೀರಾವರಿ ನಿಗಮ

'ಟಿಪ್ಪು ಸಾಗರ ನಾಮಕರಣಕ್ಕೆ ಹುನ್ನಾರ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರಕ್ಕೆ 'ಟಿಪ್ಪು ಸುಲ್ತಾನ್ ಸಾಗರ' ಎಂದು ಮರುನಾಮಕರಣ ಮಾಡಲು ಕಾಂಗ್ರೆಸ್ ಹುನ್ನಾರ ನಡೆಸುತ್ತಿದೆ. ಇದಕ್ಕೆ ಸಚಿವ ಎಚ್.ಸಿ. ಮಹದೇವಪ್ಪ ಪೀಠಿಕೆ ಹಾಕಿದ್ದಾರೆ' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

'ಟಿಪ್ಪು 1799ರಲ್ಲಿ ಮೃತಪಟ್ಟಿದ್ದಾರೆ. ಕೆಆರ್‌ಎಸ್ ನಿರ್ಮಾಣ 1911ರಲ್ಲಿ ಆರಂಭವಾಗಿದೆ. ಅಂದರೆ 112 ವರ್ಷಗಳ ನಂತರ ಡ್ಯಾಂ ಕಟ್ಟಲಾಗಿದೆ. ಟಿಪ್ಪು ಶಂಕುಸ್ಥಾಪನೆ ಮಾಡಿದ್ದರೆ ಆಗಲೇ ಈ ಹೆಸರು ಇಡಬೇಕಿತ್ತಲ್ವ? ನಾಪತ್ತೆಯಾಗಿದ್ದ ಕಲ್ಲು 112 ವರ್ಷ ನಂತರ ಪ್ರತ್ಯಕ್ಷವಾಗಿದ್ದು ಹೇಗೆ? ಈ ಶಿಲಾನ್ಯಾಸ ಫಲಕದ ಮೇಲೆ ಅನುಮಾನವಿದ್ದು, ಪರಾಮರ್ಶೆ ನಡೆಯಬೇಕು' ಎಂದರು.

'ಅಣೆಕಟ್ಟೆಗೆ ಟಿಪ್ಪು ಹೆಸರು ತಳಕು ಹಾಕುತ್ತಿರುವುದು ನಾಲ್ವಡಿಗೆ ಮಾಡಿದ ಅಪಮಾನ. ಟಿಪ್ಪು ನಾಡದ್ರೋಹಿ, ಪರ್ಷಿಯಾ ಮೂಲದವನು. ಮತಾಂಧನ ಹೆಸರನ್ನು ಕೆಆರ್‌ಎಸ್‌ಗೆ ಇಡಲು ಹೊರಟಿರುವುದು ಕಾಂಗ್ರೆಸ್ ಮನಸ್ಥಿತಿಯನ್ನು ತೋರಿಸಿದೆ' ಎಂದು ಹೇಳಿದರು.

ಮಕ್ಕಳಿಗೆ ಟಿಪ್ಪು ಹೆಸರಿಡಲಿ: 'ಟಿಪ್ಪು ಹಿಂದೆ ಹೋದವರು ಸರ್ವನಾಶವಾಗಿದ್ದಾರೆ. ಸಿನಿಮಾ ತೆಗೆದವರು ಮತ್ತು ಖಡ್ಗ ಖರೀಸಿದ ವಿಜಯ ಮಲ್ಯ ಹಾಳಾಗಿ ಹೋಗಿದ್ದಾರೆ. ಟಿಪ್ಪು ಮೇಲೆ ಅಷ್ಟೊಂದು ಪ್ರೀತಿಯಿದ್ದರೆ ಕಾಂಗ್ರೆಸ್ ನಾಯಕರ ಮಕ್ಕಳಿಗೆ ಟಿಪ್ಪು ಹೆಸರಿಡಲಿ' ಎಂದರು.

ಏಕಿಷ್ಟು ಕೋಪ: ಪ್ರತಾಪ ಪ್ರಶ್ನೆ

ಮೈಸೂರು: 'ನಾಲ್ವಡಿ ಕೃಷ್ಣರಾಜ ಒಡೆಯರ್ ಬಗ್ಗೆ ಏಕಿಷ್ಟು ಕೋಪ? ಹಿಂದೆ ಮೇಲ್ಮನೆ ಸದಸ್ಯ ಡಾ.ಯತೀಂದ್ರ ಹಿಂದೆ ಅವಹೇಳನ ಮಾಡಿದ್ದರು. ಈಗ ಡಾ.ಮಹದೇವಪ್ಪ ಮುಂದುವರಿಸಿದ್ದಾರೆ. ಟಿಪ್ಪುನೇ ದಸರಾ ಆರಂಭಿಸಿದ ಎಂದೂ ಹೇಳಿಬಿಡಿ' ಎಂದು ಮಾಜಿ ಸಂಸದ ಪ್ರತಾಪ ಸಿಂಹ ಪ್ರತಿಕ್ರಿಯಿಸಿದ್ದಾರೆ.

ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಒಂದು ಸಮುದಾಯದ ಮತಕ್ಕಾಗಿ ಇತಿಹಾಸ ತಿರುಚುವುದು ಮಹದೇವಪ್ಪನವರಿಗೆ ಶೋಭೆ ತರದು' ಎಂದರು.

'ಟಿಪ್ಪು ಕೆಆರ್‌ಎಸ್‌ಗೆ ಅಡಿಗಲ್ಲು ಹಾಕಿದ್ದರೆ ಯಾರೋ ಮುಲ್ಲಾನೋ, ಮೌಲ್ವಿನೋ ಡಿಪಿಆರ್ ಮಾಡಿರಬೇಕು ತಾನೇ? ಅವರ್‍ಯಾರೆಂದು ತಿಳಿಸಲಿ. ಸುಳ್ಳು ಸುದ್ದಿ ಹರಡಿದ್ದಕ್ಕೆ ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಯತೀಂದ್ರರ ಮೇಲೆ ಮೊದಲು ಸರ್ಕಾರ ಪ್ರಕರಣ ದಾಖಲಿಸಲಿ' ಎಂದರು.

'ಒಡೆಯರ್‌ಗೆ ಅವಮಾನ'

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಎಚ್.ಸಿ. ಮಹದೇವಪ್ಪ ಅವರು ಮೈಸೂರು ಮಹಾರಾಜರಿಗೆ ನಿರಂತರವಾಗಿ ಅಪಮಾನ ಮಾಡುತ್ತಿದ್ದಾರೆ. ಟಿಪ್ಪುವನ್ನು ವೈಭವೀಕರಿಸಲು ಕೃಷ್ಣರಾಜ ಒಡೆಯರ್ ಅವರನ್ನು ಅವಮಾನಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದರು.

'ಮೈಸೂರಿನ ಇತಿಹಾಸ ತಿಳಿದಿದ್ದರೂ ಮಹದೇವಪ್ಪ ಅವರು ಕನ್ನಂಬಾಡಿ ಕಟ್ಟೆಗೆ ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದ್ದು ಎಂದು ಹೇಳಿರುವುದು ಅಕ್ಷಮ್ಯ ಅಪರಾಧ' ಎಂದು ತಿಳಿಸಿದರು.

'ಹಿಂದೂಗಳ ಕೊಲೆಗೆ ಅಡಿಗಲ್ಲು ಹಾಕಿದ್ದ ಟಿಪ್ಪು'

ಚಿಕ್ಕಮಗಳೂರು: 'ಹಿಂದೂಗಳು, ಕ್ರಿಶ್ಚಿಯನ್ನರ ಕೊಲೆಗೆ ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದ್ದಾನೆ ಹೊರತು ಕೆಆರ್‌ಎಸ್‌ಗೆ ಅಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

'ಕೆಆರ್‌ಎಸ್‌ಗೆ ಅಡಿಗಲ್ಲು ಹಾಕಿದ್ದು ಟಿಪ್ಪು ಎಂದು ಸಚಿವ ಮಹದೇವಪ್ಪ ಹೇಳಿದ್ದಾರೆ. ಇಂತಹ ಸುಳ್ಳು ಹೇಳುವ ಮಂತ್ರಿಯನ್ನು ತಮ್ಮ ಸಂಪುಟದಲ್ಲಿ ಮುಖ್ಯಮಂತ್ರಿ ಇಟ್ಟುಕೊಳ್ಳಬಾರದು ಎಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು ಆಗ್ರಹಿಸಿದರು.

ಭೂ ಉಪಯೋಗ ಬದಲಾವಣೆಗೂ ಶುಲ್ಕ

ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ವಯ ಮಾರ್ಗಸೂಚಿ ದರದಲ್ಲಿ ಪಾವತಿಗೆ ಕರಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲಾ ಸ್ಥಳೀಯ ಯೋಜನಾ ಪ್ರಾಧಿಕಾರಗಳಲ್ಲಿ ಭೂ ಉಪಯೋಗ ಬದಲಾವಣೆಗೆ ಶುಲ್ಕವನ್ನು ನಿಗದಿಪಡಿಸಲು ನಗರಾಭಿವೃದ್ಧಿ ಇಲಾಖೆ ಮುಂದಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ (ಕರ್ನಾಟಕ ಕಾಯ್ದೆ 11-1963) ಸೆಕ್ಷನ್ 68 (4)ಕ್ಕೆ ತಿದ್ದುಪಡಿ ತಂದು, 'ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು-2025'ರ ಅಡಿ ಕರಡು ಪ್ರಕಟಿಸಲಾಗಿದೆ.

ಸೆಕ್ಷನ್ 17ರಲ್ಲಿ ತಿದ್ದುಪಡಿ ತಂದು, ಏಕ ನಿವೇಶನ, ಬಹು ನಿವೇಶನ, ಬಡಾವಣೆ ಅಭಿವೃದ್ಧಿ ನಕ್ಷೆ ಪಡೆಯಲು ಅಭಿವೃದ್ಧಿ ಶುಲ್ಕ ನಿಗದಿಪಡಿಸಿ 2021ರ ಜೂನ್ 21ರಂದು ಅಂತಿಮ ಆದೇಶ ಹೊರಡಿಸಲಾಗಿತ್ತು. ಭೂ ಉಪಯೋಗ ಬದಲಾವಣೆಗೂ ಅದೇ ಅಭಿವೃದ್ಧಿ ಶುಲ್ಕವನ್ನು ಪಾವತಿಸಲಾಗುತ್ತಿತ್ತು. ಹೀಗಾಗಿ, ಕೆಟಿಸಿಪಿ ಕಾಯ್ದೆಯ ಸೆಕ್ಷನ್ 14-ಎ ಮತ್ತು ಸೆಕ್ಷನ್ 68(4)ಕ್ಕೆ ತಿದ್ದುಪಡಿ ತಂದು, ಭೂ ಉಪಯೋಗ ಬದಲಾವಣೆಗೆ ಪ್ರತ್ಯೇಕ ಶುಲ್ಕ ನಿಗದಿಪಡಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ. ಅಭಿವೃದ್ಧಿ ನಕ್ಷೆ ಪಡೆಯಲು ಪಾವತಿಸಬೇಕಿರುವ ಅಭಿವೃದ್ಧಿ ಶುಲ್ಕಕ್ಕಿಂತ ದುಪ್ಪಟ್ಟು ಶುಲ್ಕವನ್ನು ಭೂ ಉಪಯೋಗ ಬದಲಾವಣೆಗೆ ಶುಲ್ಕವಾಗಿ ನಿಗದಿಪಡಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು 30 ದಿನ ಅವಕಾಶ ನೀಡಲಾಗಿದೆ.

ಕೃಷಿಯೇತರ ಜಮೀನಿನಲ್ಲಿ ವಸತಿ, ಕೈಗಾರಿಕೆ, ವಾಣಿಜ್ಯದ ಉದ್ದೇಶಕ್ಕಾಗಿ ಭೂ ಉಪಯೋಗದ ಬದಲಾವಣೆ ಮಾಡಿಕೊಳ್ಳಲು ಶುಲ್ಕ ಪಾವತಿಸಬೇಕಾಗುತ್ತದೆ. ಎಲ್ಲ ಪ್ರಕ್ರಿಯೆ ಮುಗಿದ ಮೇಲೆ, ಏಕ ನಿವೇಶನ, ಬಹು ನಿವೇಶನ, ಬಡಾವಣೆ ಅಭಿವೃದ್ಧಿ ನಕ್ಷೆಗೆ ಅಭಿವೃದ್ಧಿ ಶುಲ್ಕವನ್ನು ಮಾರ್ಗಸೂಚಿ ದರದನ್ವಯ ಪಾವತಿಸಿ ಪ್ರಮಾಣ ಪತ್ರ ಪಡೆದುಕೊಳ್ಳಬೇಕಾಗುತ್ತದೆ ಎಂದು ನಗರ ಯೋಜನೆ ಅಧಿಕಾರಿಗಳು ಮಾಹಿತಿ ನೀಡಿದರು.

ಬೆಂಗಳೂರು ನಗರ, ದಕ್ಷಿಣ ಹಾಗೂ ಗ್ರಾಮಾಂತರ ಜಿಲ್ಲೆಗಳ ಜನಸಂಖ್ಯೆಯನ್ನು ಪರಿಗಣಿಸದೆ 'ಬೆಂಗಳೂರು ಮೆಟ್ರೊಪಾಲಿಟನ್ ವಲಯ'ದ ಸ್ಥಳೀಯ ಯೋಜನಾ ಪ್ರಾಧಿಕಾರ ಎಂದು ವರ್ಗೀಕರಿಸಲಾಗಿದೆ. ಉಳಿದ, ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ಅವುಗಳ ಜನಸಂಖ್ಯೆಕ್ಕೆ ಅನುಗುಣವಾಗಿ ವರ್ಗೀಕರಿಸಲಾಗಿದೆ.

ಭೂ ಉಪಯೋಗ ಬದಲಾವಣೆಗೆ ಶುಲ್ಕ ವಿವರ
(ಕೃಷಿಯೇತರ ಜಮೀನಿಗೆ ಮಾರ್ಗಸೂಚಿ ದರದಲ್ಲಿ ಪ್ರತಿ ಚದರ ಮೀಟರ್‌ಗೆ)

ಸ್ಥಳೀಯ ಯೋಜನಾ ಪ್ರಾಧಿಕಾರ ಮತ್ತು ಜನಸಂಖ್ಯೆ	ವಸತಿ	ಕೈಗಾರಿಕೆ	ವಾಣಿಜ್ಯ	ಇತರೆ
ಬೆಂಗಳೂರು ಮೆಟ್ರೊಪಾಲಿಟನ್ ವಲಯ	0.4% ಕನಿಷ್ಠ ₹40/ಚ.ಮೀ	0.6% ಕನಿಷ್ಠ ₹60/ಚ.ಮೀ	1% ಕನಿಷ್ಠ ₹100/ಚ.ಮೀ	0.4% ಕನಿಷ್ಠ ₹40/ ಮೀ
10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಪ್ರಾಧಿಕಾರ	0.4% ಕನಿಷ್ಠ ₹25/ಚ.ಮೀ	0.6% ಕನಿಷ್ಠ ₹37.5/ಚ.ಮೀ	1% ಕನಿಷ್ಠ ₹62.5/ಚ.ಮೀ	0.4% ಕನಿಷ್ಠ ₹25/ ಮೀ
1 ಲಕ್ಷದಿಂದ 10 ಲಕ್ಷದವರೆಗಿನ ಜನಸಂಖ್ಯೆಯ ಪ್ರಾಧಿಕಾರ	0.2% ಕನಿಷ್ಠ ₹15/ಚ.ಮೀ	0.6% ಕನಿಷ್ಠ ₹22.5/ಚ.ಮೀ	1% ಕನಿಷ್ಠ ₹37.5/ಚ.ಮೀ	0.2% ಕನಿಷ್ಠ ₹15/ ಮೀ
50 ಸಾವಿರದಿಂದ 1 ಲಕ್ಷದವರೆಗಿನ ಜನಸಂಖ್ಯೆಯ ಪ್ರಾಧಿಕಾರ	0.2% ಕನಿಷ್ಠ ₹10/ಚ.ಮೀ	0.6% ಕನಿಷ್ಠ ₹15/ಚ.ಮೀ	1% ಕನಿಷ್ಠ ₹25/ಚ.ಮೀ	0.2% ಕನಿಷ್ಠ ₹10/ ಮೀ
25 ಸಾವಿರದಿಂದ 50 ಸಾವಿರದವರೆಗಿನ ಜನಸಂಖ್ಯೆ	0.2% ಕನಿಷ್ಠ ₹7.5/ಚ.ಮೀ	0.6% ಕನಿಷ್ಠ ₹11.25/ಚ.ಮೀ	1% ಕನಿಷ್ಠ ₹18.75/ಚ.ಮೀ	0.2% ಕನಿಷ್ಠ ₹7.5/ ಮೀ
25 ಸಾವಿರದೊಳಗಿನ ಜನಸಂಖ್ಯೆಯ ಪ್ರಾಧಿಕಾರ	0.2% ಕನಿಷ್ಠ ₹5/ಚ.ಮೀ	0.6% ಕನಿಷ್ಠ ₹7.5/ಚ.ಮೀ	1% ಕನಿಷ್ಠ ₹12.5/ಚ.ಮೀ	0.2% ಕನಿಷ್ಠ ₹5/ ಮೀ

ಸಚಿವ ಶಿವಾನಂದ ಮಾನನಷ್ಟ ಅರ್ಜಿ ವಜಾ ಮಾಡಿದ ಸುಪ್ರೀಂ ಕೋರ್ಟ್

ನ್ಯಾಯಾಲಯದ ಹೊರಗೆ ರಾಜಕೀಯ ಮಾಡಿ: ಸಿಜೆಐ

ಪ್ರಜಾವಾಣಿ ವಾರ್ತೆ


ಶಿವಾನಂದ ಪಾಟೀಲ


ಯತ್ನಾಳ

ನವದೆಹಲಿ: ಉಚ್ಚಾಟಿತ ಶಾಸಕ ಬಸನಗೌಡ ಆರ್ ಪಾಟೀಲ ಯತ್ನಾಳ ವಿರುದ್ಧದ ಮಾನನಷ್ಟ ಮೊಕದ್ದಮೆ ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಕ್ಕರೆ ಸಚಿವ ಶಿವಾನಂದ ಎಸ್. ಪಾಟೀಲ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

'ನ್ಯಾಯಾಲಯದ ಹೊರಗೆ ನಿಮ್ಮ ರಾಜಕೀಯ ಹೋರಾಟಗಳನ್ನು ನಡೆಸಿ. ಇಲ್ಲಿ ಅಲ್ಲ ಎಂದು ಹಲವಾರು ಸಲ ಹೇಳಿದ್ದೇನೆ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ವಿಚಾರಣೆಯ ಸಂದರ್ಭದಲ್ಲಿ ಹೇಳಿದರು.

ಆಗ ಶಿವಾನಂದ ಪಾಟೀಲ ಪರ ವಕೀಲರು, ಕಕ್ಷಿದಾರರು ಸಂಪುಟ ದರ್ಜೆಯ ಸಚಿವರು ಎಂದು ಗಮನ ಸೆಳೆದರು. ಆಗ ಸಿಜೆಐ, 'ಹಾಗಿದ್ದರೆ ಏನು? ₹25 ಸಾವಿರ ದಂಡದೊಂದಿಗೆ ಅರ್ಜಿ ವಜಾಗೊಳಿಸಲಾಗಿದೆ' ಎಂದು ಪ್ರಕಟಿಸಿದರು. ಸಚಿವರ ಪರ ವಕೀಲರು, 'ಆದರೆ, ವಿಷಯ ಏನೆಂದರೆ' ಎಂದರು. 'ಸರಿ. ₹1 ಲಕ್ಷ. ನೀವು ಮಂತ್ರಿ ಎಂಬುದನ್ನು ಮರೆತಿದ್ದೇನೆ' ಎಂದು ಸಿಜೆಐ ಛೇಡಿಸಿದರು. ವಕೀಲರು ಮತ್ತೆ ಮನವಿ ಮಾಡಲು ಮುಂದಾದರು. ಆಗ ಸಿಜೆಐ, 'ಸರಿ ₹1 ಕೋಟಿ' ಎಂದರು. ವಕೀಲರು ಮೈಲಾರ್ಡ್ ಎಂದಷ್ಟೇ ಹೇಳಿದರು. ₹10 ಕೋಟಿ ದಂಡ ಎಂದು ಗವಾಯಿ ಹೇಳಿದರು. ಆಗ ಸಚಿವರ ಪರ ವಕೀಲರು, 'ಅರ್ಜಿ ಹಿಂಪಡೆಯುತ್ತೇನೆ' ಎಂದರು. ಪೀಠವು ನಂತರ ದಂಡ ಮನ್ನಾ ಮಾಡಿ ಮೇಲ್ಮನವಿ ಹಿಂಪಡೆಯಲು ಅನುಮತಿ ನೀಡಿತು.

ಯತ್ನಾಳ ವಿರುದ್ಧದ ಮೊಕದ್ದಮೆಯನ್ನು ಹೈಕೋರ್ಟ್ 2024ರ ಸೆ. 28ರಂದು ರದ್ದುಗೊಳಿಸಿತ್ತು. ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಅಡಿಯಲ್ಲಿ ಕಾರ್ಯವಿಧಾನ ಅನುಸರಿಸದ ಕಾರಣ ಮಾನನಷ್ಟ ಮೊಕದ್ದಮೆ ರದ್ದುಗೊಳಿಸಲಾಗಿದೆ ಎಂದು ಹೇಳಿತ್ತು.

2023ರ ವಿಧಾನಸಭಾ ಚುನಾವಣೆಗೆ ಮುನ್ನ ನಡೆದ ಸಮಾವೇಶದಲ್ಲಿ ಯತ್ನಾಳ ಮಾನಹಾನಿಕರ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಶಿವಾನಂದ ಪಾಟೀಲ ಮೊಕದ್ದಮೆ ಹೂಡಿದ್ದರು.

'ವೇತನ ಬಾಕಿಯನ್ನೂ ಉಳಿಸಿದ್ದ ಬಿಜೆಪಿ'

ಒಂದನೇ ಪುಟದಿಂದ...

ಅಲ್ಲದೇ '2023ರಲ್ಲಿ ಮೂಲವೇತನದಲ್ಲಿ ಶೇಕಡ 15ರಷ್ಟು ಪರಿಷ್ಕರಣೆ ಮಾಡಲಾಗಿತ್ತು. ಸಂಘಟನೆಗಳು ಈ ನಿರ್ಧಾರವನ್ನು ಒಪ್ಪಿಕೊಂಡಿದ್ದವು. ಈಗ 38 ತಿಂಗಳ ವೇತನ ಬಾಕಿ ನೀಡಬೇಕು ಎಂದರೆ ಹೇಗೆ' ಎಂದು ಪ್ರಶ್ನಿಸಿದರು.

ಸಮಿತಿಯು 2022ರ ಜನವರಿ 1ರಿಂದ 2023ರ ಫೆಬ್ರುವರಿ 28ರವರೆಗೆ ವೇತನ ಬಾಕಿ ಕೊಡಬಹುದು ಎಂದು ಶಿಫಾರಸು ಮಾಡಿತ್ತು. ಸಾರಿಗೆ ಸಂಘಟನೆಗಳ ಪ್ರತಿನಿಧಿಗಳೂ ಅಂದು ಸಮಿತಿ ಮುಂದೆ ಹಾಜರಾಗಿ ಅಹವಾಲು ಸಲ್ಲಿಸಿದ್ದರು. ಸಮಿತಿಯ ಶಿಫಾರಸುಗಳನ್ನು ಸರ್ಕಾರ ಒಪ್ಪಿಕೊಂಡಿದೆ. ಎಲ್ಲ ಸಂಘಟನೆಗಳೂ ಒಪ್ಪಿಕೊಳ್ಳಬೇಕು. ಸಾರಿಗೆ ನಿಗಮದ ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಕೆಲವು ಸುತ್ತಿನ ಸಭೆ ನಡೆಸಲಾಗಿದೆ. ಪರಸ್ಪರ ಮಾತುಕತೆ ಮೂಲಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ. ಹಾಗಾಗಿ, ಮುಷ್ಕರವನ್ನು ಹಿಂಪಡೆಯಬೇಕು ಎಂದು ಮನವಿ ಮಾಡಿದರು.

ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು), ಕೆಎಸ್‌ಆರ್‌ಟಿಸಿ ಎಸ್‌ಸಿ, ಎಸ್‌ಟಿ ಎಂಪ್ಲಾಯೀಸ್ ಯೂನಿಯನ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘಗಳು ಮುಖಂಡರು ಭಾಗವಹಿಸಿದ್ದರು. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್, ವಾಯವ್ಯ ಸಾರಿಗೆ ನಿಗಮದ ಅಧ್ಯಕ್ಷ ರಾಜು ಕಾಗೆ ಉಪಸ್ಥಿತರಿದ್ದರು.

'ಸಾಲದ ಹೊರೆ'

'ಎಲ್ಲ ಸಾರಿಗೆ ನಿಗಮಗಳ ಸಾಲ-2018ರಲ್ಲಿ ₹14 ಕೋಟಿ ಬಾಕಿ ಇತ್ತು. 2023ರ ವಿಧಾನಸಭಾ ಚುನಾವಣೆ ವೇಳೆಗೆ ಹಿಂದಿನ ಬಿಜೆಪಿ ಸರ್ಕಾರ ₹4 ಸಾವಿರ ಕೋಟಿ ಉಳಿಸಿತ್ತು' ಎಂದು ಸಿದ್ದರಾಮಯ್ಯ ಹೇಳಿದರು.

'ಪ್ರಸ್ತುತ ಯಾವ ಸಾರಿಗೆ ನಿಗಮವೂ ಲಾಭದಲ್ಲಿಲ್ಲ. ಹಾಗೆಂದು ಸರ್ಕಾರ ಯಾರಿಗೂ ಅನ್ಯಾಯ ಮಾಡುವುದಿಲ್ಲ' ಎಂದರು.

ಮುಷ್ಕರಕ್ಕೆ ಒಂದು ದಿನದ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂಬಾಕಿ ಪಾವತಿ ಮತ್ತು ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಇದೇ 5ರಂದು (ಮಂಗಳವಾರ) ನಡೆಸಲು ಉದ್ದೇಶಿಸಿರುವ ಉಪವಾಸ ಸತ್ಯಾಗ್ರಹಕ್ಕೆ ಹೈಕೋರ್ಟ್ ಒಂದು ದಿನದ ಮಟ್ಟಿಗೆ ತಡೆ ನೀಡಿದೆ.

'ಮುಷ್ಕರ ನಡೆಸಲು ಸಿಬ್ಬಂದಿಗೆ ಅವಕಾಶ ನೀಡಬಾರದು' ಎಂದು ಕೋರಿ ನಗರದ ಜೆ.ಸುನಿಲ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಎಸ್. ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ದೀಕ್ಷಾ ಅಮೃತೇಶ್, 'ರಾಜ್ಯ ಸರ್ಕಾರ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ-2013ರ (ಎಸ್ಮಾ) ಅಡಿಯಲ್ಲಿ ಜುಲೈ 14ರಿಂದ ಅನ್ವಯ ಆಗುವಂತೆ ಮುಷ್ಕರ ನಿಷೇಧಿಸಿದೆ. ಆದರೂ, ಸಾರಿಗೆ ನೌಕರರು ಇದನ್ನು ಲೆಕ್ಕಿಸದೆ ಇದೇ 5ರಿಂದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ. ಇದರಿಂದ ಜನ ಸಾಮಾನ್ಯರಿಗೆ ಭಾರಿ ತೊಂದರೆಯಾಗಲಿದೆ' ಎಂದರು.

ಸಾರಿಗೆ ಇಲಾಖೆ ಪರ ಹಿರಿಯ ವಕೀಲೆ ಎಚ್.ಆರ್. ರೇಣುಕಾ, 'ಕಾರ್ಮಿಕ ಸಂಧಾನ ಅಧಿಕಾರಿ ಸಮ್ಮುಖದಲ್ಲಿ ಸರ್ಕಾರ ಮತ್ತು ನೌಕರರ ಸಂಘದ ಪ್ರತಿನಿಧಿಗಳ ಜೊತೆ ಸಂಧಾನ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ಸಾರಿಗೆ ಸಿಬ್ಬಂದಿಯೊಂದಿಗೆ ಸಭೆ ನಡೆದಿದೆ. ಕಾರ್ಮಿಕ ನ್ಯಾಯ ಮಂಡಳಿಯಲ್ಲಿ ಇದೇ 7ರಂದು ವಿಚಾರಣೆ ನಿಗದಿಯಾಗಿದೆ. ಹೀಗಾಗಿ, ಕನಿಷ್ಠ ಎರಡು ದಿನದ ಮಟ್ಟಿಗೆ ವಿಚಾರಣೆ ಮುಂದೂಡಲು ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ರಾಜ್ಯ ಸರ್ಕಾರದ ಪರ ವಕೀಲರು 'ಈ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಜೊತೆ ಬೆಳಿಗ್ಗೆಯಿಂದ ನಿರಂತರ ಸಭೆ ನಡೆದಿದೆ. ಅಡ್ವೊಕೇಟ್ ಜನರಲ್ ದೆಹಲಿ ಪ್ರವಾಸದಲ್ಲಿದ್ದಾರೆ. ಹೀಗಾಗಿ, ಅರ್ಜಿ ವಿಚಾರಣೆ ಮುಂದೂಡಬೇಕು' ಎಂದು ಕೋರಿದರು.

ಎಲ್ಲರ ವಾದ ಆಲಿಸಿದ ನ್ಯಾಯಪೀಠ, 'ಮುಖ್ಯಮಂತ್ರಿ ಮತ್ತು ಸಾರಿಗೆ ಸಿಬ್ಬಂದಿ ನಡುವೆ ನಡೆದ ಸಭೆಯ ನಿರ್ಧಾರಗಳನ್ನು ಕೋರ್ಟ್‌ಗೆ ಸಲ್ಲಿಸಿ ಮತ್ತು ಮುಷ್ಕರದಿಂದ ಸಾರ್ವಜನಿಕರಿಗೆ ಸಮಸ್ಯೆಯಾಗುವ ಕಾರಣ ಪ್ರತಿಭಟನಕಾರರು ಒಂದು ದಿನದ ಮಟ್ಟಿಗೆ ಉದ್ದೇಶಿತ ಮುಷ್ಕರವನ್ನು ಮುಂದೂಡಬೇಕು' ಎಂದು ನಿರ್ದೇಶಿಸಿತು.

ರಾಜ್ಯ ಸರ್ಕಾರ, ಸಾರಿಗೆ ಇಲಾಖೆ, ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮಂಗಳವಾರಕ್ಕೆ (ಆ.5) ಮುಂದೂಡಿತು.

ಸಾರಿಗೆ ಬಸ್ ಮುಷ್ಕರ ಅನಿಶ್ಚಿತ

ಒಂದನೇ ಪುಟದಿಂದ...

'ರಾತ್ರಿ 7.45ಕ್ಕೆ ಹೈಕೋರ್ಟ್‌ನ ಆದೇಶದ ಪ್ರತಿ ಸಿಕ್ಕಿದೆ. ಆರೇಳು ಸಂಘಟನೆಗಳಿರುವ ಜಂಟಿ ಸಮಿತಿ ಮುಷ್ಕರ ನಡೆಸಲು ನಿರ್ಧರಿಸಿದೆ. ಎಲ್ಲ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಿಯೇ ಮುಷ್ಕರದ ಬಗ್ಗೆ ತೀರ್ಮಾನ ಕೈಗೊಳ್ಳಬೇಕು. ಸದ್ಯ ಬಹುತೇಕರು ಅವರ ಮನೆಗಳಿಗೆ ತೆರಳಿದ್ದು, ಸಮಾಲೋಚನೆ ನಡೆಸಲು ಸಾಧ್ಯವಾಗಿಲ್ಲ. ಈ ಆದೇಶದ ಬಗ್ಗೆ ಕಾನೂನು ಸಲಹೆಗಾರರೊಂದಿಗೂ ಚರ್ಚಿಸಲಾಗುತ್ತಿದೆ. ಅವರ ಅಭಿಪ್ರಾಯ, ಜಂಟಿ ಸಮಿತಿಯ ಅಭಿಪ್ರಾಯಗಳನ್ನೆಲ್ಲ ತೆಗೆದುಕೊಂಡು ಮಂಗಳವಾರ ತೀರ್ಮಾನ ಕೈಗೊಳ್ಳಲಾಗುವುದು. ಅಲ್ಲಿಯವರೆಗೆ ಮುಷ್ಕರದ ನಿರ್ಧಾರ ಮುಂದುವರಿಯಲಿದೆ' ಎಂದು ಫೆಡರೇಷನ್ ಕಾರ್ಯದರ್ಶಿ ವಿಜಯಭಾಸ್ಕರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.


ಭಾಗವಹಿಸದಂತೆ ಮನವಿ: 'ಕಾರ್ಮಿಕ ಸಂಘಟನೆಗಳು ಆ.5ರಂದು ನಡೆಸಲು ಉದ್ದೇಶಿಸಿರುವ ಮುಷ್ಕರಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಈ ಆದೇಶವನ್ನು ಎಲ್ಲರೂ ಗೌರವಿಸಬೇಕು. ಮುಖ್ಯಮಂತ್ರಿಯವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಾರ್ವಜನಿಕ ಸೇವಾ ಸಂಸ್ಥೆಯಾಗಿರುವ ಸಾರಿಗೆ ನಿಗಮಗಳ ನೌಕರರು ಮುಷ್ಕರದಲ್ಲಿ ಪಾಲ್ಗೊಳ್ಳಬಾರದು' ಎಂದು ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ಎಲ್ಲ ನಾಲ್ಕು ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಮನವಿ ಮಾಡಿದ್ದಾರೆ.

ಆ.6ಕ್ಕೆ ಮುಷ್ಕರ?

ಆಗಸ್ಟ್ 6ರ ಬುಧವಾರ ಮುಷ್ಕರ ನಡೆಯುವ ಬಗ್ಗೆ ಸಾರಿಗೆ ಇಲಾಖೆಗೆ ಸುಳಿವು ಸಿಕ್ಕಿದ್ದು, ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಮುಂದಾಗಿದೆ.

ಖಾಸಗಿ ಬಸ್ ಅಸೋಸಿಯೇಷನ್‌ಗಳೊಂದಿಗೆ ಚರ್ಚೆ ನಡೆಸಿರುವ ಇಲಾಖೆಯು ಬಸ್‌ಗಳನ್ನು ಒದಗಿಸಲು ಕೋರಿಕೊಂಡಿದೆ.

'11 ಸಾವಿರ ಬಸ್ ಒದಗಿಸಲು ಅಧಿಕಾರಿಗಳು ಕೇಳಿದ್ದಾರೆ. ಅದರಂತೆ ನಾವು ಬಸ್‌ಗಳನ್ನು ಒದಗಿಸುತ್ತೇವೆ' ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ನಟರಾಜ ಶರ್ಮ ತಿಳಿಸಿದ್ದಾರೆ.


ಪುತ್ತಿಗೆ ಮಠದ ಕಿರಿಯ ಯತಿ ಸುಶ್ರೀಂದ್ರತೀರ್ಥ ಸ್ವಾಮೀಜಿ ಅವರ 37ನೇ ಜನ್ಮ ನಕ್ಷತ್ರದ ಅಂಗವಾಗಿ ಸೋಮವಾರ ಶ್ರೀಕೃಷ್ಣನಿಗೆ ಮುತ್ತಿನ ಕವಚ ತೊಡಿಸಲಾಯಿತು

'₹32 ಸಾವಿರ ಕೋಟಿ ಬಿಲ್ ಬಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ₹32 ಸಾವಿರ ಕೋಟಿ ಮೊತ್ತದ ಬಿಲ್ ಪಾವತಿ ಬಾಕಿ ಉಳಿದಿದ್ದು, ಮುಖ್ಯಮಂತ್ರಿಯವರು ನೀಡಿದ ಭರವಸೆಯೂ ಈಡೇರಿಲ್ಲ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಆರೋಪಿಸಿದರು.


ಮಂಜುನಾಥ್

'2021-22ನೇ ಸಾಲಿನಿಂದ 2024-25ನೇ ಸಾಲಿನವರೆಗೂ ಬಿಲ್‌ಗಳು ಪಾವತಿಯಾಗಿಲ್ಲ' ಎಂದು ದೂರಿದರು.

'2025ರ ಏಪ್ರಿಲ್‌ನಲ್ಲಿ, ಬಾಕಿ ಇರುವ ಬಿಲ್‌ಗಳ ಪೈಕಿ ಶೇ 50ರಷ್ಟು ಹಣ ಬಿಡುಗಡೆ ಮಾಡಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಶ್ವಾಸನೆ ನೀಡಿದ್ದರು. ಆದರೆ, ಹಣ ಬಿಡುಗಡೆ ಆಗುತ್ತಿಲ್ಲ. ಅವರಿಗೆ ಮತ್ತೆ ಮನವಿ ಸಲ್ಲಿಸಲು ಹಲವು ಬಾರಿ ಸಭೆ ನಿಗದಿಯಾದರೂ, ಅದನ್ನು ರದ್ದು ಮಾಡಲಾಯಿತು' ಎಂದರು.

'ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಇಲಾಖೆಗಳ ಬಾಕಿ ಬಿಲ್ ಪಾವತಿಗೆ ಸಂಬಂಧಿಸಿದಂತೆ ಗುತ್ತಿಗೆದಾರರ ಮನವಿಗೆ ಸ್ಪಂದಿಸುತ್ತಿಲ್ಲ' ಎಂದು ಮಂಜುನಾಥ್ ಆರೋಪಿಸಿದರು.

'ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಬೋಸರಾಜು, ಜಮೀರ್ ಅಹಮದ್ ಖಾನ್ ಅವರು ಸಭೆ ಕರೆದು ಸಮಸ್ಯೆಗಳನ್ನು ಬಗೆಹರಿಸುವುದಾಗಿ ಆಶ್ವಾಸನೆ ಕೊಟ್ಟರು. ಇದರಲ್ಲಿ ಕೆಲವು ಬೇಡಿಕೆಗಳಷ್ಟೇ ಈಡೇರಿವೆ' ಎಂದರು.

'ಸಚಿವ ಸತೀಶ ಜಾರಕಿಹೊಳಿ ಅವರೊಂದಿಗೆ ನಡೆದ ಸಭೆಯಲ್ಲಿ ಜ್ಯೇಷ್ಠತೆ ಆಧಾರದಲ್ಲಿ ಬಿಲ್ ಪಾವತಿಸಬೇಕೆಂದು ಮಾಡಿಕೊಂಡಿದ್ದ ಮನವಿಗೆ ಸ್ಪಂದಿಸಿದ್ದು, ಅದರಂತೆ ಪಾವತಿಯಾಗುತ್ತಿದೆ. ಸಚಿವರು ಆಗಸ್ಟ್ 7ರಂದು ಮತ್ತೆ ಸಭೆ ಕರೆದಿದ್ದಾರೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ.ರವೀಂದ್ರ ತಿಳಿಸಿದರು.

'ಲೋಕೋಪಯೋಗಿ ಇಲಾಖೆ ಹೊರತುಪಡಿಸಿ ಇತರೆ ಇಲಾಖೆಗಳಲ್ಲಿ ಬಾಕಿ ಉಳಿದಿರುವ ಬಿಲ್‌ಗಳಿಗೆ ಜ್ಯೇಷ್ಠತೆ ಆಧಾರದಲ್ಲಿ ಹಣ ಬಿಡುಗಡೆಯಾಗುತ್ತಿಲ್ಲ. ಟೆಂಡರ್‌ನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಪಾಲಿಸುತ್ತಿಲ್ಲ' ಎಂದರು.

ಮುಖ್ಯಾಂಶಗಳು


- ಏಪ್ರಿಲ್‌ನಲ್ಲಿ ಶೇ 50ರಷ್ಟು ಪಾವತಿ ಭರವಸೆ
- ಈಡೇರದ ಜ್ಯೇಷ್ಠತೆ ಆಧಾರ ಬಿಲ್ ಪಾವತಿ ಆಶ್ವಾಸನೆ

ಹೆಚ್ಚು ಬಾಕಿ ಇರುವ ಇಲಾಖೆಗಳು (₹ಕೋಟಿಗಳಲ್ಲಿ)

₹12,000 ಜಲಸಂಪನ್ಮೂಲ
₹9,000 ಲೋಕೋಪಯೋಗಿ
₹3,800 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
₹3,000 ಸಣ್ಣ ನೀರಾವರಿ
₹900 ವಸತಿ
₹700 ನಗರಾಭಿವೃದ್ಧಿ



ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ
ಹಿಂದಿನ ಅಂತ್ಯ: 24,565
ಇಂದಿನ ಅಂತ್ಯ: 24,722
ದಿನದ ಕನಿಷ್ಠ: 24,736
157

ಮೊಟ್ಟೆ ಧಾರಣೆ (ಎನ್ಇಸಿಸಿ)
ಬೆಂಗಳೂರು 100 ಕ್ಕೆ ₹485
12 ಕ್ಕೆ ₹66
ಮೈಸೂರು: 100 ಕ್ಕೆ ₹495

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹305-607
ದ್ವಿತಳಿ (ಬಿ.ವಿ) ₹456-720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್ಎಸ್ಎಸ್-4 ₹200
ಆರ್ಎಸ್ಎಸ್-5 ₹194
ಗುಡ್ ಲಾಟ್ ₹178

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1370 (1370)
ಸೋಯಾ (ರಿಫೈನ್ಡ್) ₹1225 (1230)
ಸೂರ್ಯಕಾಂತಿ (ರಿಫೈನ್ಡ್) ₹1370 (1375)
ಪಾಮೋಲಿನ್ ₹1200 (1205)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹28000-30000
ತಿಪಟೂರು ₹25000-27500
ತುರುವೇಕೆರೆ ₹25000-26000

ನಾಲೆಜ್ ರಿಯಾಲ್ಟಿ ಟ್ರಸ್ಟ್ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲೆಜ್ ರಿಯಾಲ್ಟಿ ಟ್ರಸ್ಟ್ (ಆರ್‌ಇಐಟಿ) ತನ್ನ ಯೂನಿಟ್‌ಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮಂಗಳವಾರದಿಂದ ಮುಕ್ತವಾಗಿಸಲಿದೆ. ಯೂನಿಟ್ ಬೆಲೆಯನ್ನು ₹95–100ಕ್ಕೆ ನಿಗದಿ ಮಾಡಲಾಗಿದೆ. ಮಂಗಳವಾರದಿಂದ ಗುರುವಾರದವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ.

‘ಒಟ್ಟು ಆಸ್ತಿ ಮೌಲ್ಯದ ಲೆಕ್ಕದಲ್ಲಿ ದೇಶದ ಅತಿದೊಡ್ಡ ರಿಯಲ್ ಎಸ್ಟೇಟ್ ಹೂಡಿಕೆ ಟ್ರಸ್ಟ್ (ಆರ್‌ಇಐಟಿ) ತನ್ನದು’ ಎಂದು ಅದು ಹೇಳಿಕೊಂಡಿದೆ.

ಸಣ್ಣ ಹೂಡಿಕೆದಾರರು ಕನಿಷ್ಠ 150 ಯೂನಿಟ್‌ಗಳಿಗೆ ಹೂಡಿಕೆ ಮಾಡಬೇಕು. ನಾಲೆಜ್ ರಿಯಾಲ್ಟಿ ಟ್ರಸ್ಟ್ ₹4,800 ಕೋಟಿ ಮೌಲ್ಯದ ಯೂನಿಟ್‌ಗಳನ್ನು ಹೊಸದಾಗಿ ಖರೀದಿಗೆ ಮುಕ್ತವಾಗಿಸುತ್ತಿದೆ.

ಬ್ರಿಟನ್: ಗಡಿ ಭದ್ರತೆಗೆ ₹1,165 ಕೋಟಿ

ಲಂಡನ್ (ಪಿಟಿಐ): ಹೆಚ್ಚುತ್ತಿರುವ ಅಕ್ರಮ ವಲಸೆಯ ನಿಯಂತ್ರಣ ಹಾಗೂ ಗಡಿ ಭದ್ರತೆಗಾಗಿ ₹1,165 ಕೋಟಿಯನ್ನು ವೆಚ್ಚ ಮಾಡುವುದಾಗಿ ಬ್ರಿಟನ್ ಸೋಮವಾರ ಘೋಷಿಸಿದೆ.

ರಾಷ್ಟ್ರೀಯ ಅಪರಾಧ ಏಜೆನ್ಸಿಗೆ (ಎನ್‌ಸಿಎ) ಹೆಚ್ಚುವರಿಯಾಗಿ 300 ಅಧಿಕಾರಿಗಳನ್ನು ನೇಮಿಸಿಕೊಳ್ಳುವುದು, ಅತ್ಯಾಧುನಿಕ ಪತ್ತೆ ತಂತ್ರಜ್ಞಾನ ಅಳವಡಿಸಿಕೊಳ್ಳುವುದು ಹಾಗೂ ಮಾನವ ಕಳ್ಳಸಾಗಣೆಯ ಹಿಂದಿರುವ ಕ್ರಿಮಿನಲ್ ಸಂಪರ್ಕ ಜಾಲವನ್ನು ಗುರಿಯಾಗಿಸಿಕೊಂಡು ಕಾರ್ಯಾಚರಿಸಲು ನೂತನ ಉಪಕರಣಗಳ ಖರೀದಿಗೆ ಈ ಹಣವನ್ನು ಮೀಸಲಾಗಿಡಲಾಗಿದೆ ಎಂದು ಗೃಹ ಸಚಿವಾಲಯ ತಿಳಿಸಿದೆ.

ಗಡಿಭದ್ರತಾ ಪಡೆಯ ಕಮಾಂಡೊಗಳು ಹಾಗೂ ಇತರ ಕಾನೂನು ಜಾರಿ ಸಂಸ್ಥೆಗಳು ಮಾನವ ಕಳ್ಳಸಾಗಣೆ ಜಾಲದ ಪ್ರಮುಖ ವ್ಯಕ್ತಿಗಳನ್ನು ಗುರಿಯಾಗಿಟ್ಟುಕೊಂಡು ತನಿಖೆಗಳನ್ನು ನಡೆಸಲು ಮತ್ತು ಯೂರೋಪ್, ಮಧ್ಯಪ್ರಾಚ್ಯ, ಆಫ್ರಿಕಾ, ಏಷ್ಯಾ, ಅದರಾಚೆಗೂ ನಡೆಯುತ್ತಿರುವ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಈ ಹಣವನ್ನು ಬಳಸಿಕೊಳ್ಳಲಾಗುತ್ತದೆ ಎಂದು ಅದು ಹೇಳಿದೆ.

ರಫ್ತುದಾರರಿಗೆ ಕೇಂದ್ರ ನೆರವು ಸಾಧ್ಯತೆ

ರಾಜ್ಯ ಸರ್ಕಾರಗಳ ಜೊತೆಯೂ ಮಾತುಕತೆ ನಡೆಸಲಿರುವ ವಾಣಿಜ್ಯ ಸಚಿವಾಲಯ

ನವದೆಹಲಿ (ಪಿಟಿಐ): ಜವಳಿ, ರಾಸಾಯನಿಕಗಳ ವಲಯದ ರಫ್ತುದಾರರಿಗೆ ನೆರವಾಗುವ ದಿಸೆಯಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರವು ಮುಂದಡಿ ಇರಿಸಿದೆ ಎಂದು ಮೂಲಗಳು ಹೇಳಿವೆ.

ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಿದ್ದು, ಅದರ ದುಷ್ಪರಿಣಾಮದಿಂದ ಈ ವಲಯಗಳನ್ನು ರಕ್ಷಿಸಲು ಕೇಂದ್ರವು ಕ್ರಮಕ್ಕೆ ಮುಂದಾಗಿದೆ ಎಂದು ತಿಳಿಸಿವೆ.

ಅಮೆರಿಕ ವಿಧಿಸಿರುವ ಸುಂಕವು ಆಗಸ್ಟ್ 7ರಿಂದ ಜಾರಿಗೆ ಬರಲಿದೆ. ವಿವಿಧ ರಫ್ತು ವಲಯಗಳ ಪ್ರತಿನಿಧಿಗಳ ಜೊತೆ ಕೇಂದ್ರ ವಾಣಿಜ್ಯ ಸಚಿವಾಲಯದ ಅಧಿಕಾರಿಗಳು ಸಭೆ ನಡೆಸಿದ್ದಾರೆ. ಉಕ್ಕು, ಆಹಾರ ಸಂಸ್ಕರಣೆ, ಎಂಜಿನಿಯರಿಂಗ್, ಸಾಗರ ಉತ್ಪನ್ನಗಳು, ಕೃಷಿ ವಲಯದ ಪ್ರತಿನಿಧಿಗಳು ಸಭೆಯಲ್ಲಿ ಇದ್ದರು. ಹೆಚ್ಚುವರಿ ಸುಂಕದಿಂದಾಗಿ ಆಗುವ ಪರಿಣಾಮಗಳ ಬಗ್ಗೆ ತಿಳಿಯಲು ಸಭೆ ಕರೆಯಲಾಗಿತ್ತು ಎಂದು ಮೂಲವೊಂದು ಹೇಳಿದೆ.

ಮುಖ್ಯಾಂಶಗಳು
- ಕಡಿಮೆ ಬಡ್ಡಿಗೆ ಸಾಲ ಕೊಡಿಸಲು ರಫ್ತುದಾರರ ಮನವಿ
- ತೆರಿಗೆಯಲ್ಲಿ ಕೆಲವು ವಿನಾಯಿತಿಗೆ ಕೋರಿಕೆ
- ಬಾಕಿ ಮೊತ್ತಗಳ ತ್ವರಿತ ಪಾವತಿಗೆ ಕೇಂದ್ರಕ್ಕೆ ಆಗ್ರಹ

ವಿವಿಧ ವಲಯಗಳ ರಫ್ತುದಾರರು ಸರ್ಕಾರದಿಂದ ಹಣಕಾಸಿನ ನೆರವು ಕೇಳಿದ್ದಾರೆ. ಕಡಿಮೆ ಬಡ್ಡಿ ದರಕ್ಕೆ ಸಾಲ ಕೊಡಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ. ರಫ್ತು ಮಾಡಲಾದ ಉತ್ಪನ್ನಗಳಿಗೆ ವಿಧಿಸುವ ಸುಂಕಗಳನ್ನು ಮರುಪಾವತಿ ಮಾಡುವ ಯೋಜನೆಯನ್ನು ವಿಸ್ತರಿಸಬೇಕು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ತೆರಿಗೆಗಳಲ್ಲಿ ವಿನಾಯಿತಿ ಕೊಡುವ ಯೋಜನೆಯನ್ನು ಕೂಡ ವಿಸ್ತರಿಸಬೇಕು ಎಂದು ಅವರು ಕೋರಿದ್ದಾರೆ.



ಇವಲ್ಲದೆ, ಬಾಕಿ ಪಾವತಿಗಳು ಸಕಾಲದಲ್ಲಿ ಆಗುವಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು ಹಾಗೂ ಅಮೆರಿಕಕ್ಕೆ ಸರಕುಗಳನ್ನು ರಫ್ತು ಮಾಡಲು ನೇರ ಜಲ ಮಾರ್ಗವನ್ನು ಗುರುತು ಮಾಡಿಕೊಡಬೇಕು ಎಂದೂ ಅವರು ಆಗ್ರಹ ಮಂಡಿಸಿದ್ದಾರೆ ಎಂದು ಗೊತ್ತಾಗಿದೆ.

ಈ ಎಲ್ಲ ಮನವಿಗಳನ್ನು ಸಚಿವಾಲಯವು ಪರಿಗಣಿಸಿದೆ. ರಫ್ತುದಾರರಿಗೆ ನೆರವಿನ ಹಸ್ತ ಚಾಚಲು ಸಚಿವಾಲಯವು ರಾಜ್ಯಗಳ ಜೊತೆಯೂ ಮಾತುಕತೆ ನಡೆಸಲಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಮೆರಿಕವು ವಿಧಿಸಿರುವ ಹೆಚ್ಚುವರಿ ಸುಂಕದ ಪರಿಣಾಮವು ಜಾಸ್ತಿ ಇರುವ ವಲಯಗಳ ಪಟ್ಟಿಯಲ್ಲಿ ಜವಳಿ, ಮುತ್ತು ಮತ್ತು ಆಭರಣ, ಸೀಗಡಿ, ಚರ್ಮೋತ್ಪನ್ನಗಳು ಹಾಗೂ ಪಾದರಕ್ಷೆ, ರಾಸಾಯನಿಕಗಳು, ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಯಂತ್ರೋಪಕರಣಗಳು ಇವೆ.

ಜವಳಿ, ರಾಸಾಯನಿಕರು ಹಾಗೂ ಸೀಗಡಿ ರಫ್ತು ವಲಯವು ಇತರ ವಲಯಗಳಿಗಿಂತ ಹೆಚ್ಚು ಸಂಕಷ್ಟ ಎದುರಿಸಬೇಕಾಗುತ್ತದೆ. ಏಕೆಂದರೆ ಭಾರತಕ್ಕೆ ಅಮೆರಿಕದ ಮಾರುಕಟ್ಟೆಯಲ್ಲಿ ಸ್ಪರ್ಧೆ ನೀಡುವ ಬಾಂಗ್ಲಾದೇಶ, ವಿಯೆಟ್ನಾಂ, ಥಾಯ್ಲೆಂಡ್ ದೇಶಗಳಿಗೆ ಕಡಿಮೆ ಪ್ರಮಾಣದ ಸುಂಕ ನಿಗದಿ ಮಾಡಲಾಗಿದೆ ಎಂದು ರಫ್ತುದಾರರ ಪ್ರತಿನಿಧಿಗಳು ವಿವರಿಸಿದ್ದಾರೆ.

₹7 ಲಕ್ಷ ಕೋಟಿ ಜಿಎಸ್‌ಟಿ ವಂಚನೆ ಪತ್ತೆ

ಐದು ಆರ್ಥಿಕ ವರ್ಷದಲ್ಲಿ 91,370 ಪ್ರಕರಣ ದಾಖಲು: ಕೇಂದ್ರ

ನವದೆಹಲಿ (ಪಿಟಿಐ): 2020–21ರಿಂದ 2024–25ರವರೆಗೆ ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಧಿಕಾರಿಗಳು 91,370 ಪ್ರಕರಣಗಳಿಂದ ಒಟ್ಟು ₹7.08 ಲಕ್ಷ ಕೋಟಿ ಮೊತ್ತದ ಜಿಎಸ್‌ಟಿ ವಂಚನೆಯನ್ನು ಪತ್ತೆ ಮಾಡಿದ್ದಾರೆ.



ಈ ಮೊತ್ತದಲ್ಲಿ ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚನೆ ಮೊತ್ತವಾದ ₹1.79 ಲಕ್ಷ ಕೋಟಿಯೂ ಸೇರಿದೆ. ಇದು 44,938 ಪ್ರಕರಣಗಳಿಗೆ ಸಂಬಂಧಿಸಿದ್ದಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ಸೋಮವಾರ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಈ ಐದು ವರ್ಷಗಳ ಅವಧಿಯಲ್ಲಿ ಒಟ್ಟು ₹1.29 ಲಕ್ಷ ಕೋಟಿಗಿಂತ ಹೆಚ್ಚಿನ ತೆರಿಗೆ ಮೊತ್ತವನ್ನು ಸ್ವಯಂಪ್ರೇರಿತ ಠೇವಣಿ ರೂಪದಲ್ಲಿ ಸಂಗ್ರಹಿಸಲಾಗಿದೆ ಎಂದು ಹೇಳಿದ್ದಾರೆ.

ಆರ್ಥಿಕ ವರ್ಷ	ಜಿಎಸ್‌ಟಿ ವಂಚನೆ	ಐಟಿಸಿ ವಂಚನೆ
	(₹ಕೋಟಿಗಳಲ್ಲಿ)	
2024-25	2.23 ಲಕ್ಷ	58,772
2023-24	2.30 ಲಕ್ಷ	36,374
2022-23	1.32 ಲಕ್ಷ	24,140
2021-22	73,238	28,022
2020-21	49,384	31,233

(ಜಿಎಸ್‌ಟಿ ವಂಚನೆಯಲ್ಲಿ ಐಟಿಸಿ ವಂಚನೆಯೂ ಸೇರಿದೆ)

2024–25ರ ಆರ್ಥಿಕ ವರ್ಷದಲ್ಲಿ 30,056 ವಂಚನೆ ಪ್ರಕರಣಗಳಿಂದ ₹2.23 ಲಕ್ಷ ಕೋಟಿ ಮೊತ್ತದ ಜಿಎಸ್‌ಟಿ ವಂಚನೆ ಪತ್ತೆ ಹಚ್ಚಲಾಗಿತ್ತು. ಈ ಪೈಕಿ ಐಟಿಸಿ ವಂಚನೆಗೆ ಸಂಬಂಧಿಸಿದ 15,283 ಪ್ರಕರಣಗಳ ₹58,772 ಕೋಟಿಯೂ ಸೇರಿದೆ.

ಕೇಂದ್ರ ಸರ್ಕಾರ ಮತ್ತು ಜಿಎಸ್‌ಟಿಎನ್, ತೆರಿಗೆ ವಂಚನೆ ತಡೆಗಟ್ಟಲು ಇ-ಇನ್‌ವಾಯ್ಸಿಂಗ್ ಮೂಲಕ ಡಿಜಿಟಲೀಕರಣ, ಜಿಎಸ್‌ಟಿ ವಿಶ್ಲೇಷಣೆ ಸೇರಿದಂತೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ ಎಂದು ಚೌಧರಿ ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
04-08-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಪಾಮ್ ವಾರದ ಡೆಲಿವರಿ	1198 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1255)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,900 (99,200)
ಬೆಳ್ಳಿ ಕೆ.ಜಿಗೆ	1,11,900 (1,10,750)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

‘ಚುನಾವಣೆ ವಿಳಂಬಕ್ಕೆ ಸರ್ಕಾರ ಕಾರಣ’

ಒಂದನೇ ಪುಟದಿಂದ...

ಅಲ್ಲದೇ ‘ಇದನ್ನು ಮಾಡದೇ ಇದ್ದರೆ ಸರ್ಕಾರಕ್ಕೆ ಆಸಕ್ತಿ ಇಲ್ಲ ಎಂದು ಭಾವಿಸಬೇಕಾಗುತ್ತದೆ’ ಎಂದು ಸಂಗ್ರೇಶಿ ಹೇಳಿದರು.

‘ಕೇಂದ್ರ ಚುನಾವಣಾ ಆಯೋಗಕ್ಕೆ ಎಷ್ಟು ಅಧಿಕಾರ ಇದೆಯೋ ರಾಜ್ಯ ಚುನಾವಣಾ ಆಯೋಗಕ್ಕೂ ಅಷ್ಟೇ ಅಧಿಕಾರ ಇದೆ. ನಮ್ಮದೂ ಸ್ವತಂತ್ರ ಸಂಸ್ಥೆ. ಸರ್ಕಾರ ಅನುಮತಿ ನೀಡಿದರೆ, ನಾವೇ ಸ್ವತಂತ್ರವಾಗಿ ಮತದಾರರ ಪಟ್ಟಿ ತಯಾರಿಸಲು ಸಿದ್ಧರಿದ್ದೇವೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಆಯೋಗದ ಅಧಿಕಾರ ಮೊಟಕುಗೊಳಿಸಲಾಯಿತು’ ಎಂದು ಅವರು ಹೇಳಿದರು.

‘ಜನವರಿ ಅಥವಾ ಫೆಬ್ರುವರಿ ವೇಳೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕಿದೆ. ಚುನಾವಣೆಯನ್ನು ಮತಪತ್ರಗಳ ಮೂಲಕ ನಡೆಸಲು ಸಿದ್ಧರಿದ್ದೇವೆ. ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಮತಪತ್ರ ಬಳಸಲಾಗುತ್ತಿದೆ. ನಮ್ಮಲ್ಲಿರುವ ವಿದ್ಯುನ್ಮಾನ ಮತ ಯಂತ್ರಗಳು 15- 20 ವರ್ಷಗಳಷ್ಟು ಹಳೆಯದಾಗಿವೆ. ಅವುಗಳನ್ನು ಬದಲಿಸಬೇಕಾಗಿದೆ’ ಎಂದು ತಿಳಿಸಿದರು.

ಶ್ರಾವಣ ಸೋಮವಾರ

ಪಿಟಿಐ ಚಿತ್ರ



ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಶ್ರಾವಣ ಸೋಮವಾರದ ಅಂಗವಾಗಿ ಮಹಿಳೆಯರು ಶಿವಲಿಂಗಕ್ಕೆ ಪೂಜೆ ಸಲ್ಲಿಸಿದರು

ಎಡಗೈಗೆ ಶೇ 6, ಬಲಗೈಗೆ ಶೇ 5

ಒಂದನೇ ಪುಟದಿಂದ...

ಸಮೀಕ್ಷೆಯಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಗುರುತಿಸಿಕೊಂಡವರು ಸುಮಾರು 5 ಲಕ್ಷದಷ್ಟು ಇದ್ದಾರೆ. ಅವರು ಮೂಲ ಜಾತಿಯನ್ನು ಗುರುತಿಸದ ಕಾರಣ ‘ಪ್ರತ್ಯೇಕ ಗುಂಪು’ ಮಾಡಲಾಗಿದೆ ಎಂದೂ ಗೊತ್ತಾಗಿದೆ.

ಒಳ ಮೀಸಲಾತಿ ವರ್ಗೀಕರಣಕ್ಕೆ ಜಾತಿಗಳ ಶೈಕ್ಷಣಿಕ ಹಿಂದುಳಿದಿರುವಿಕೆ, ಸರ್ಕಾರಿ ಉದ್ಯೋಗದಲ್ಲಿ ಅಗತ್ಯ ಪ್ರಾತಿನಿಧ್ಯದ ಕೊರತೆ, ಸಾಮಾಜಿಕ ಹಿಂದುಳಿದಿರುವಿಕೆಯ ಮಾನದಂಡಗಳನ್ನು ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆ ಮಾನದಂಡಗಳ ಆಧಾರದಲ್ಲಿಯೇ ಮೀಸಲಾತಿಯನ್ನು ಹಂಚಿಕೆ ಮಾಡಲಾಗಿದೆ ಎಂದು ಮೂಲಗಳು ವಿವರಿಸಿವೆ.

ಹಿಂದಿನ ವರದಿ-ಅನುಷ್ಠಾನ: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ನೀಡಲು 2005ರಲ್ಲಿ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಎ.ಜಿ. ಸದಾಶಿವ ನೇತೃತ್ವದ ಆಯೋಗವು, ಆಗ ಪರಿಶಿಷ್ಟ ಜಾತಿಗಳಿಗೆ ಇದ್ದ ಶೇ 15ರ ಮೀಸಲಾತಿಯನ್ನು ಎಡಗೈಗೆ ಶೇ 6, ಬಲಗೈಗೆ ಶೇ 5, ಸ್ಪೃಶ್ಯ ಉಪಜಾತಿಗಳಿಗೆ ಶೇ 3 ಹಾಗೂ ಈ ಮೂರೂ ಗುಂಪುಗಳಿಗೆ ಸೇರದ ಜಾತಿಗಳವರಿಗೆ ಶೇ 1ರಷ್ಟು ಮೀಸಲಾತಿ ನೀಡಬಹುದು ಎಂದು ಶಿಫಾರಸು ಮಾಡಿತ್ತು.

ಆದರೆ, ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಒಳಮೀಸಲಾತಿ ಕುರಿತು ಪರಿಶೀಲಿಸಿ ಶಿಫಾರಸು ಮಾಡಲು ಅಂದಿನ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಿತ್ತು. ಈ ಸಮಿತಿಯು 2011ರ ಜನಗಣತಿಯಂತೆ ಒಟ್ಟು 101 ಪರಿಶಿಷ್ಟ ಜಾತಿಗಳ ಜಾತಿವಾರು ಜನಸಂಖ್ಯೆಯನ್ನು ಪರಿಗಣಿಸಿ ನಾಲ್ಕು ಗುಂಪುಗಳಾಗಿ ವರ್ಗೀಕರಿಸಿತ್ತು. ಆಗ ಪರಿಶಿಷ್ಟ ಜಾತಿಗಳಿಗೆ ಇದ್ದ ಮೀಸಲಾತಿಯನ್ನು ಶೇ 17ಕ್ಕೆ ಹೆಚ್ಚಿಸುವ ತೀರ್ಮಾನ ತೆಗೆದುಕೊಂಡಿತ್ತು. ಎಡಗೈಗೆ ಶೇ 6, ಬಲಗೈಗೆ ಶೇ 5.5, ಲಂಬಾಣಿ, ಬೋವಿ, ಕೊರಮ, ಕೊರಚ ಜಾತಿಗಳಿರುವ ಗುಂಪಿಗೆ ಶೇ 4.5 ಹಾಗೂ ಈ ಮೇಲಿನ ಗುಂಪುಗಳಿಗೆ ಸೇರದ ಜಾತಿಗಳಿಗೆ ಶೇ 1 ಮೀಸಲಾತಿ ಹಂಚಿಕೆ ಮಾಡಿತ್ತು.

ಸದಾಶಿವ ಆಯೋಗ ಪಟ್ಟಿ ಮಾಡಿದ್ದ ಎಡಗೈ ಗುಂಪಿನಲ್ಲಿ 29 ಜಾತಿಗಳಿದ್ದವು, ಆದರೆ, ಮಾಧುಸ್ವಾಮಿ ಸಮಿತಿ ಪಟ್ಟಿ ಮಾಡಿದ್ದ ಎಡಗೈ ಗುಂಪಿನಲ್ಲಿ ಕೇವಲ ಆರು ಜಾತಿಗಳಿದ್ದವು. ಇನ್ನು ಸದಾಶಿವ ಆಯೋಗ ಪಟ್ಟಿ ಮಾಡಿದ್ದ ಬಲಗೈ ಗುಂಪಿನಲ್ಲಿ 26 ಜಾತಿಗಳಿದ್ದವು, ಆದರೆ, ಮಾಧುಸ್ವಾಮಿ ಸಮಿತಿ ಪಟ್ಟಿ ಮಾಡಿದ್ದ ಬಲಗೈ ಗುಂಪಿನಲ್ಲಿ ಕೇವಲ ನಾಲ್ಕು ಜಾತಿಗಳಿದ್ದವು. ಗುಂಪಿನಲ್ಲಿದ್ದ ಜಾತಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಮಾಧುಸ್ವಾಮಿ ಸಮಿತಿಯು ಮೀಸಲಾತಿ ಪ್ರಮಾಣವನ್ನು ಮರುಹಂಚಿಕೆ ಮಾಡಿತ್ತು.

ಆದರೆ, ನಾಗಮೋಹನ್‌ದಾಸ್ ಆಯೋಗವು ಹೊಸತಾಗಿ ಸಮೀಕ್ಷೆ ನಡೆಸಿ, ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದ್ದ ಮಾನದಂಡಗಳ ಆಧಾರದಲ್ಲಿಯೇ ವೈಜ್ಞಾನಿಕವಾಗಿ ಜಾತಿಗಳನ್ನು ವರ್ಗೀಕರಿಸಿದೆ ಎಂದು ವರದಿಯಲ್ಲಿ ಸಮರ್ಥನೆ ನೀಡಲಾಗಿದೆ.

ಉಕ್ರೇನ್ ಜತೆಗಿನ ಯುದ್ಧ ಕೊನೆಗೊಳಿಸಲು ರಷ್ಯಾಕ್ಕೆ ನೀಡಿರುವ ಗಡುವು ಶುಕ್ರವಾರಕ್ಕೆ ಅಂತ್ಯ

ಟ್ರಂಪ್ ಗಡುವು ಮುಗಿಯಲು ಕೆಲವೇ ದಿನ ಬಾಕಿ

ಮಾಸ್ಕೊ (ಎಪಿ): ಉಕ್ರೇನ್ ಜತೆಗಿನ ಯುದ್ಧ ಕೊನೆಗೊಳಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರಷ್ಯಾಕ್ಕೆ ನೀಡಿರುವ ಗಡುವು ಸಮೀಪಿಸುತ್ತಿದ್ದು, ರಷ್ಯಾ–ಉಕ್ರೇನ್ ಯುದ್ಧವು ಈ ವಾರ ನಿರ್ಣಾಯಕ ಘಟ್ಟ ತಲುಪುವ ಸಾಧ್ಯತೆಯಿದೆ.

ಉಕ್ರೇನ್ ಜತೆ ಕದನ ವಿರಾಮ ಒಪ್ಪಂದ ಮಾಡಿಕೊಳ್ಳುವಂತೆ ಟ್ರಂಪ್ ನೀಡಿರುವ ಗಡುವು ಶುಕ್ರವಾರ ಕೊನೆಗೊಳ್ಳಲಿದೆ. ಯುದ್ಧ ನಿಲ್ಲಿಸದಿದ್ದರೆ ಇನ್ನಷ್ಟು ಆರ್ಥಿಕ ನಿರ್ಬಂಧಗಳನ್ನು ಹೇರ ಲಾಗುವುದು ಎಂದು ಅಮೆರಿಕದ ಅಧ್ಯಕ್ಷರು ಎಚ್ಚರಿಸಿದ್ದಾರೆ.

ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರು ಬುಧವಾರ ಅಥವಾ ಗುರುವಾರ ಮಾಸ್ಕೊಗೆ ಭೇಟಿ ನೀಡುವ ಸಾಧ್ಯತೆಯಿದೆ. ಯುದ್ಧವನ್ನು ನಿಲ್ಲಿಸುವಂತೆ ಟ್ರಂಪ್ ಅವರು ಈ ಹಿಂದೆ ನೀಡಿದ್ದ ಎಚ್ಚರಿಕೆಗೆ ನಿರೀಕ್ಷಿತ ಫಲ ಲಭಿಸಿಲ್ಲ. ಆದ್ದರಿಂದ ಈ ಬಾರಿಯ ಗಡುವು ರಷ್ಯಾದ ಮೇಲೆ ಪರಿಣಾಮ ಬೀರಲಿದೆಯೇ ಎಂಬ ಕುತೂಹಲ ಮೂಡಿದೆ.

‘ಇಸ್ರೇಲ್ ಮತ್ತು ಗಾಜಾ ಭೇಟಿಯ ಬಳಿಕ ವಿಟ್ಕಾಫ್ ಅವರು ರಷ್ಯಾಕ್ಕೆ ಭೇಟಿ ನೀಡಲಿದ್ದಾರೆ. ಅವರನ್ನು ಮಾತುಕತೆಗೆ ಕಳುಹಿಸಿಕೊಡುವಂತೆ ರಷ್ಯಾ ಕೋರಿದೆ. ಏನಾಗಲಿದೆ ಎಂಬುದನ್ನು ಕಾದು ನೋಡೋಣ’ ಎಂದು ಟ್ರಂಪ್ ಭಾನುವಾರ ಹೇಳಿದ್ದಾರೆ.

‘ನಮ್ಮ ಅಧಿಕಾರಿಗಳು ಟ್ರಂಪ್ ಅವರ ರಾಯಭಾರಿಯನ್ನು ಭೇಟಿಯಾಗುವುದನ್ನು ಎದುರು ನೋಡುತ್ತಿದ್ದಾರೆ’ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್ ಸೋಮವಾರ ತಿಳಿಸಿದ್ದಾರೆ.

‘ವಿಟ್ಕಾಫ್ ಅವರನ್ನು ಮಾಸ್ಕೊದಲ್ಲಿ ನೋಡಲು ನಾವು ಯಾವಾಗಲೂ ಸಂತೋಷ ಪಡುತ್ತೇವೆ. ಅವರೊಂದಿಗೆ ಮಾತು ಕತೆ ಅರ್ಥಪೂರ್ಣ ಮತ್ತು ತುಂಬಾ ಉಪಯುಕ್ತವೆಂದು ಭಾವಿ ಸುತ್ತೇವೆ’ ಎಂದಿದ್ದಾರೆ. ಇನ್ನಷ್ಟು ನಿರ್ಬಂಧಗಳು ರಷ್ಯಾ ಮೇಲೆ ಪರಿಣಾಮ ಬೀರಲಿದೆಯೇ ಎಂಬ ಬಗ್ಗೆ ಟ್ರಂಪ್ ಅವರಿಗೆ ಖಚಿತತೆಯಿಲ್ಲ. ‘ನಿರ್ಬಂಧಗಳನ್ನು ಮೀರಿ ನಿಲ್ಲಲು ಸಮರ್ಥ’ ಎಂಬುದನ್ನು ರಷ್ಯಾ ಈ ಹಿಂದೆ ಸಾಬೀತುಪಡಿಸಿದೆ’ ಎಂದು ಟ್ರಂಪ್ ಭಾನುವಾರ ಹೇಳಿದ್ದಾರೆ.

ಭಾರತದ ಸರಕುಗಳಿಗೆ ಸುಂಕ ಗಣನೀಯ ಏರಿಕೆ; ಟ್ರಂಪ್ ಎಚ್ಚರಿಕೆ

ನ್ಯೂಯಾರ್ಕ್/ವಾಷಿಂಗ್ಟನ್/ ನವದೆಹಲಿ (ಪಿಟಿಐ): ‘ಭಾರತದ ಸರಕುಗಳಿಗೆ ಸುಂಕವನ್ನು ಗಣನೀಯವಾಗಿ ಏರಿಕೆ ಮಾಡಲಾಗುವುದು’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಆ ಮೂಲಕ ಭಾರತದ ಜೊತೆಗೆ ಹೊಸ ವ್ಯಾಪಾರ ಸಮರ ಆರಂಭಿಸಿದ್ದಾರೆ.

‘ರಷ್ಯಾದಿಂದ ದೊಡ್ಡ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುತ್ತಿರುವ ಭಾರತ, ದೊಡ್ಡ ಪ್ರಮಾಣದಲ್ಲಿ ಲಾಭ ಮಾಡಿಕೊಳ್ಳುತ್ತಿದೆ’ ಎಂದು ಟ್ರಂಪ್ ಈ ವೇಳೆ ಆರೋಪಿಸಿದ್ದಾರೆ.

‘ಭಾರತದಿಂದ ಆಮದು ಮಾಡಿಕೊಳ್ಳುವ ಎಲ್ಲ ಸರಕುಗಳಿಗೂ ಶೇಕಡ 25ರಷ್ಟು ಸುಂಕ ವಿಧಿಸಲಾಗುವುದು’ ಎಂದು ಟ್ರಂಪ್ ಅವರು ಕಳೆದ ವಾರ ಘೋಷಿಸಿದ್ದರು. ಬೃಹತ್ ಪ್ರಮಾಣದಲ್ಲಿ ರಷ್ಯಾದ ಸೇನಾ ಉಪಕರಣಗಳು, ಕಚ್ಚಾ ತೈಲ ಖರೀದಿಸುತ್ತಿರುವ ಭಾರತದ ಮೇಲೆ ದಂಡ ವಿಧಿಸಲಾಗುವುದು ಎಂದು ಹೇಳಿದ್ದರು. ಆದರೆ, ಯಾವ ದಿನಾಂಕದಿಂದ ಈ ನಿರ್ಧಾರ ಜಾರಿಗೆ ಬರಲಿದೆ ಎಂದು ತಿಳಿಸಿರಲಿಲ್ಲ.

‘ಭಾರತವು ದೊಡ್ಡ ಪ್ರಮಾಣದಲ್ಲಿ ರಷ್ಯಾದ ತೈಲವನ್ನು ಮಾತ್ರ ಖರೀದಿಸುತ್ತಿಲ್ಲ, ಖರೀದಿಸಿದ ತೈಲವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ, ದೊಡ್ಡ ಪ್ರಮಾಣದ ಲಾಭ ಮಾಡಿಕೊಳ್ಳುತ್ತಿದೆ’ ಎಂದು ಟ್ರಂಪ್ ಸಾಮಾಜಿಕ ಜಾಲತಾಣ ‘ಟ್ರುಥ್’ನಲ್ಲಿ ಬರೆದುಕೊಂಡಿದ್ದಾರೆ.

‘ರಷ್ಯಾದ ಯುದ್ಧ ಟ್ಯಾಂಕರ್‌ಗಳಿಂದ ಉಕ್ರೇನ್‌ನಲ್ಲಿ ಹಲವು ಜನರು ಸಾಯುತ್ತಿದ್ದರೂ ಕೂಡ ಅವರು ಹೆದರುತ್ತಿಲ್ಲ. ಈ ಕಾರಣದಿಂದಲೇ, ಭಾರತದಿಂದ ಖರೀದಿಸುವ ಎಲ್ಲ ಸರಕುಗಳಿಗೂ ಸುಂಕವನ್ನು ಗಣನೀಯವಾಗಿ ಏರಿಕೆ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ಹಿತಾಸಕ್ತಿ ಕಾಯಲು ಬದ್ಧ: ‘ಸುಂಕ ಹೇರುವ ಪರಿಣಾಮಗಳ ಕುರಿತು ಪರಿಶೀಲನೆ ನಡೆಸುತ್ತಿದ್ದು, ದೇಶದ ಹಿತಾಸಕ್ತಿ ಕಾಯಲು ಎಲ್ಲ ರೀತಿಯ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಭಾರತ ಪ್ರತಿಕ್ರಿಯೆ ನೀಡಿದೆ.

ದೊಡ್ಡ ಖರೀದಿದಾರ: ರಷ್ಯಾದಿಂದ ಭಾರತವು ದೇಶಕ್ಕೆ ಅಗತ್ಯವಿರುವ ಕಚ್ಚಾತೈಲದ ಪೈಕಿ ಶೇಕಡ 35ರಿಂದ 40ರಷ್ಟು ಖರೀದಿಸುತ್ತಿದೆ. ಉಕ್ರೇನ್ ಜೊತೆಗಿನ ಯುದ್ಧ ಆರಂಭಕ್ಕೂ ಮುನ್ನ ಹೋಲಿಸಿದರೆ, ಆಮದು ಪ್ರಮಾಣವು ಭಾರಿ ಏರಿಕೆಯಾಗಿದೆ. ರಷ್ಯಾದಿಂದ ಕಚ್ಚಾತೈಲ ಖರೀದಿಯಲ್ಲಿ ಚೀನಾವು ಮೊದಲ ಸ್ಥಾನದಲ್ಲಿದ್ದರೆ, ಭಾರತವು ನಂತರದ ಸ್ಥಾನದಲ್ಲಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 418 ಅಂಶ ಏರಿಕೆ


ಮುಂಬೈ (ಪಿಟಿಐ): ಲೋಹ, ಸರಕುಗಳು ಮತ್ತು ವಾಹನ ತಯಾರಿಕಾ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಪ್ರಮುಖ ವಾಹನ ತಯಾರಿಕಾ ಕಂಪನಿಗಳ ತ್ರೈಮಾಸಿಕದ ಫಲಿತಾಂಶ ಮತ್ತು ವಾಹನಗಳ ಮಾರಾಟದ ಹೆಚ್ಚಳವು ಹೂಡಿಕೆದಾರರಿಗೆ ಉತ್ತೇಜನ ನೀಡಿದೆ. ಇದು ಸೂಚ್ಯಂಕಗಳ ಜಿಗಿತಕ್ಕೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 418 ಅಂಶ ಹೆಚ್ಚಳವಾಗಿ, 81,018ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 157 ಅಂಶ ಏರಿಕೆಯಾಗಿ, 24,722ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.15ರಷ್ಟು ಇಳಿಕೆಯಾಗಿದೆ. ಪ್ರತಿ ಬ್ಯಾರೆಲ್ ದರವು 68.87 ಡಾಲರ್ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಶುಕ್ರವಾರದ ವಹಿವಾಟಿನಲ್ಲಿ ₹3,366 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 48 ಪೈಸೆ ಕುಸಿದಿದೆ. ಪ್ರತೀ ಡಾಲರ್ ಎದುರು ರೂಪಾಯಿ ಬೆಲೆ ₹87.66 ಆಗಿದೆ.



ವಿದೇಶಿ ಬಂಡವಾಳದ ನಿರಂತರ ಹೊರಹರಿವು ಮತ್ತು ಅಮೆರಿಕದ ವ್ಯಾಪಾರ ಸುಂಕದ ಅನಿಶ್ಚಿತತೆಯು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಇದು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಏಥರ್: ನಷ್ಟ ಇಳಿಕೆ

ಬೆಂಗಳೂರು: ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ತಯಾರಿಕಾ ಕಂಪನಿ ಏಥರ್ ಎನರ್ಜಿ ಜೂನ್ ತ್ರೈಮಾಸಿಕದಲ್ಲಿ ₹178 ಕೋಟಿ ನಷ್ಟ ದಾಖಲಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹183 ಕೋಟಿ ನಷ್ಟ ಕಂಡಿತ್ತು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ನಷ್ಟದ ಮೊತ್ತವು ತಗ್ಗಿದೆ. ಕಂಪನಿಯ ವರಮಾನದಲ್ಲಿ ಶೇ 83ರಷ್ಟು ಏರಿಕೆ ಆಗಿದ್ದು, ₹673 ಕೋಟಿಗೆ ತಲುಪಿದೆ. ಜೂನ್ ತ್ರೈಮಾಸಿಕದಲ್ಲಿ ಕಂಪನಿಯು 46,078 ವಾಹನಗಳನ್ನು ಮಾರಾಟ ಮಾಡಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ವಾಹನಗಳ ಮಾರಾಟದಲ್ಲಿ ಶೇ 97ರಷ್ಟು ಹೆಚ್ಚಳವಾಗಿದೆ. ಏಥರ್ ರಿಜ್ಟಾ ವಾಹನಗಳಿಗೆ ಹೆಚ್ಚಿದ ಬೇಡಿಕೆ ಮತ್ತು ಮಾರಾಟ ಜಾಲದ ವಿಸ್ತರಣೆಯಿಂದ ವಾಹನಗಳ ಮಾರಾಟದಲ್ಲಿ ಏರಿಕೆಯಾಗಿದೆ ಎಂದು ಕಂಪನಿ ಸೋಮವಾರ ಷೇರುಪೇಟೆಗೆ ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಚಾಲಿ	34000-42599	ಚಾಲಿ	26099-38799
ಚಾಲಿ	38869-42598	ಕೋಕ	17319-24119	ಕೋಕ	6709-27199
ಚಿಪ್ಪು	25099-31099	ಕೆಂಪುಗೋಟು	20619-21900	ಕೆಂಪುಗೋಟು	13189-30199
ಕೋಕ	6869-22619	ರಾಶಿ	43899-49409	ರಾಶಿ	29899-57909
ಫ್ಯಾಕ್ಟರಿ	5069-28629	ತಟ್ಟಿಬೆಟ್ಟೆ	30619-36319	ಸಿಪ್ಪೆಗೋಟು	7369-20399
ಹೊಸಚಾಲಿ	36010-42837	**ಶಿರಸಿ**		**ಯಲ್ಲಾಪುರ**	
ಶಿವಮೊಗ್ಗ		ಬೆಟ್ಟೆ	26069-40909	ಅಪಿ	58599-70779
ಬೆಟ್ಟೆ	54569-61099	ಬಿಳಿಗೋಟು	23309-33923	ಬಿಳಿಗೋಟು	17112-31850
ಗೊರಬಲು	17000-33659	ಚಾಲಿ	38039-43518	ಚಾಲಿ	34099-42711
ರಾಶಿ	47589-58201	ಕೆಂಪುಗೋಟು	18399-25009	ಕೋಕ	11899-19299
ಸರಕು	62289-78369	ರಾಶಿ	42018-48399	ಕೆಂಪುಗೋಟು	15510-25989
ಸಿದ್ದಾಪುರ		**ಸಾಗರ**		ರಾಶಿ	40601-56000
ಬಿಳಿಗೋಟು	24700-31219	ಬಿಳಿಗೋಟು	6509-27409	ತಟ್ಟಿಬೆಟ್ಟೆ	27710-36000

ಯೆಮನ್ ಕರಾವಳಿಯಲ್ಲಿ ಮಗುಚಿದ ಹಡಗು: 68 ಮಂದಿ ಸಾವು

ಕೈರೊ (ಎಪಿ): ಯೆಮನ್ ಕರಾವಳಿಯಲ್ಲಿ ಭಾನುವಾರ ಹಡಗೊಂದು ಮಗುಚಿಕೊಂಡ ಪರಿಣಾಮ ಹಡಗಿನಲ್ಲಿದ್ದ ಆಫ್ರಿಕಾದ 68 ಮಂದಿ ವಲಸಿಗರು ಮೃತಪಟ್ಟಿದ್ದಾರೆ. ಅಲ್ಲದೇ, 74 ಮಂದಿ ನಾಪತ್ತೆಯಾಗಿದ್ದಾರೆ ಎಂದು ವಿಶ್ವಸಂಸ್ಥೆಯ ವಲಸೆ ಏಜೆನ್ಸಿಯ ಅಧಿಕಾರಿಗಳು ತಿಳಿಸಿದ್ದಾರೆ.

ಯೆಮನ್‌ನಲ್ಲಿರುವ ಅಂತರರಾಷ್ಟ್ರೀಯ ವಲಸೆ ಸಂಸ್ಥೆಯ ಮುಖ್ಯಸ್ಥ ಅಬ್ದುಸತ್ತರ್ ಎಸೋವ್ ಈ ಬಗ್ಗೆ ಮಾಹಿತಿ ನೀಡಿದ್ದು, ‘ಇಥಿಯೋಪಿಯಾದ 154 ಮಂದಿ ವಲಸಿಗರನ್ನು ಹೊತ್ತಿದ್ದ ಹಡಗು, ದಕ್ಷಿಣ ಯೆಮನ್‌ನ ಅಬ್ಯಾನ್ ಪ್ರಾಂತ್ಯದ ಆ್ಯಡೆನ್ ಕೊಲ್ಲಿಯಲ್ಲಿ ಮಗುಚಿಕೊಂಡಿದೆ’ ಎಂದಿದ್ದಾರೆ.

ಅಲ್ಲದೇ, 54 ಮಂದಿ ವಲಸಿಗರ ಮೃತದೇಹಗಳು ಖಾನ್ಫರ್ ಜಿಲ್ಲೆಯ ಕರಾವಳಿ ತೀರದಲ್ಲಿ ಕೊಚ್ಚಿಕೊಂಡು ಹೋಗಿ ಬಿದ್ದಿದ್ದರೆ, 14 ಮಂದಿಯ ಮೃತದೇಹಗಳು ದಡದಲ್ಲಿ ಪತ್ತೆಯಾಗಿವೆ. ಹಡಗಿನಲ್ಲಿದ್ದವರ ಪೈಕಿ 12 ಮಂದಿ ವಲಸಿಗರು ಪ್ರಾಣಾಪಾಯದಿಂದ ಪಾರಾಗಿದ್ದು, ಉಳಿದವರು ನಾಪತ್ತೆಯಾಗಿದ್ದಾರೆ ಎಂದು ತಿಳಿಸಿದ್ದಾರೆ.

ನಾಪತ್ತೆಯಾಗಿರುವವರನ್ನು ಹುಡುಕಲು ಶೋಧ ಕಾರ್ಯಾಚರಣೆ ಬಿರುಸುಗೊಳಿಸಿರುವುದಾಗಿಯೂ ತಿಳಿಸಿದ್ದಾರೆ. ಸಂಘರ್ಷ–ಬಡತನದಿಂದ ಬೇಸತ್ತ ಆಫ್ರಿಕಾದ ವಲಸಿಗರು ಶ್ರೀಮಂತ ಅರಬ್ ರಾಷ್ಟ್ರಗಳನ್ನು ಸೇರುವ ಆಸೆಯೊಂದಿಗೆ ಪಯಣಿಸುತ್ತಿದ್ದರು ಎನ್ನಲಾಗಿದೆ.

ಬಿರುಗಾಳಿ: ರೈಲು ಸಂಚಾರ ರದ್ದು

ಲಂಡನ್ (ಎಪಿ): ಬ್ರಿಟನ್‌ನ ಉತ್ತರ ಭಾಗಕ್ಕೆ ತೀವ್ರ ಅಪಾಯಕಾರಿ ವೇಗದಲ್ಲಿ ಬೀಸುತ್ತಿರುವ ಬಿರುಗಾಳಿ ಅಪ್ಪಳಿಸಿದೆ. ಭಾರಿ ಮಳೆ ಹಾಗೂ ಗಾಳಿಯಿಂದ ಜನರನ್ನು ರಕ್ಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸ್ಕಾಟ್ಲೆಂಡ್‌ನಲ್ಲಿ ರೈಲು ಸಂಚಾರವನ್ನು ರದ್ದು ಮಾಡಲಾಗಿದೆ. ಉದ್ಯಾನಗಳನ್ನೂ ಬಂದ್ ಮಾಡಲಾಗಿದ್ದು, ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ಹವಾಮಾನ ಇಲಾಖೆಯು ಸ್ಕಾಟ್ಲೆಂಡ್‌ನಲ್ಲಿ ಬಿರುಗಾಳಿಯ ಎಚ್ಚರಿಕೆ ನೀಡಿದೆ. ಭಾರಿ ಗಾಳಿಯಿಂದಾಗಿ ಜನರ ಜೀವ ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗುವ ಸಾಧ್ಯತೆ ಇದೆ. ಕರಾವಳಿ ಪ್ರದೇಶದಲ್ಲಿ ಮಳೆಯೊಂದಿಗೆ ಗಂಟೆಗೆ 137 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಮುನ್ಸೂಚನೆ ನೀಡಿದೆ.

ಉತ್ತರ ಮೊಜಾಂಬಿಕ್ 46 ಸಾವಿರ ಮಂದಿ ಸ್ಥಳಾಂತರ: ವಿಶ್ವಸಂಸ್ಥೆ

ಕೇಪ್‌ಟೌನ್ (ಎಪಿ): ‘ಮೊಜಾಂಬಿಕ್‌ನ ಉತ್ತರ ಕಾಬೊ–ಡೆಲ್ಗಾಡೊ ಪ್ರಾಂತ್ಯದಲ್ಲಿ ಇಸ್ಲಾಮಿಕ್ ಸ್ಟೇಟ್ ಬಂಡುಕೋರರು ನಡೆಸಿದ ದಾಳಿಯಿಂದ ಕಳೆದ 8 ದಿನಗಳಲ್ಲಿ 46 ಸಾವಿರ ಮಂದಿ ನೆಲೆ ಕಳೆದುಕೊಂಡಿದ್ದಾರೆ’ ಎಂದು ವಿಶ್ವಸಂಸ್ಥೆಯ ವಲಸೆ ಸಂಸ್ಥೆಯು ತಿಳಿಸಿದೆ.

‘ಪ್ರಾಂತ್ಯದಲ್ಲಿದ್ದ ಶೇಕಡ 60ರಷ್ಟು ಮಂದಿಯನ್ನು ಬಲವಂತವಾಗಿ ಹೊರಹಾಕಲಾಗಿದ್ದು, ಯಾವುದೇ ಸಾವಿನ ಕುರಿತು ವರದಿಯಾಗಿಲ್ಲ’ ಎಂದು ತಿಳಿಸಿದೆ.

‘ಜುಲೈ 20ರಿಂದ 28ರವರೆಗೆ ಪ್ರಾಂತ್ಯದ ಮೂರು ಜಿಲ್ಲೆಗಳಲ್ಲಿ ನಿರಂತರ ದಾಳಿಗಳನ್ನು ನಡೆಸಲಾಗಿತ್ತು. ಇದರಿಂದಲೇ, ಇಲ್ಲಿನ ನಿವಾಸಿಗಳು ದೊಡ್ಡ ಸಂಖ್ಯೆಯಲ್ಲಿ ವಲಸೆ ಹೋಗಿದ್ದಾರೆ’ ಎಂದು ವಿಶ್ವಸಂಸ್ಥೆಯ ಮಾನವೀಯ ನೆರವು ಕಚೇರಿ ತಿಳಿಸಿದೆ.

ಎಂಟು ವರ್ಷಗಳಿಂದ ಮೊಜಾಂಬಿಕ್‌ನ ಉತ್ತರ ಭಾಗದಲ್ಲಿ ಇಸ್ಲಾಮಿಕ್ ಸ್ಟೇಟ್ ಬಂಡುಕೋರರು ದಾಳಿ ನಡೆಸುತ್ತಿದ್ದಾರೆ. ಇವರ ವಿರುದ್ಧ ಹೋರಾಡಲು ಮೊಜಾಂಬಿಕ್‌ಗೆ ನೆರವಾಗುವ ನಿಟ್ಟಿನಲ್ಲಿ ರವಾಂಡ ದೇಶದ ಸೈನಿಕರನ್ನು ನಿಯೋಜಿಸಲಾಗಿದೆ.

ಆಟೊ ಮೇಲಿನ ಆ ಸಾಲು ಕಮಲ್ ಶ್ರೀದೇವಿ ಸಿನಿಮಾ!

ಸಚಿನ್ ಚಲುವರಾಯಸ್ವಾಮಿ, ಸಂಗೀತಾ ಭಟ್ ಜೋಡಿಯಾಗಿ ನಟಿಸುತ್ತಿರುವ 'ಕಮಲ್ ಶ್ರೀದೇವಿ' ಚಿತ್ರದ ಟೀಸರ್ ಸೋಮವಾರ(ಆ.4) ಬಿಡುಗಡೆಗೊಂಡಿತು. ಈ ಸಿನಿಮಾ ಸೆ.19ರಂದು ತೆರೆಕಾಣುತ್ತಿದೆ.

ಟೀಸರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ನಟ, ಚಿತ್ರದ ಕ್ರಿಯೇಟಿವ್ ಹೆಡ್ ರಾಜವರ್ಧನ್, 'ಕಾರಿನಲ್ಲಿ ಹೋಗುತ್ತಿರುವಾಗ 'ನೀನೆಂದರೆ ನನಗೆ ಆಸೆಯೂ ಅಲ್ಲ, ಆಕರ್ಷಣೆಯೂ ಅಲ್ಲ, ಮನದಲ್ಲಿ ಮೂಡಿದ ಮಧುರ ಭಾವನೆಯಷ್ಟೇ' ಎಂದು ಆಟೊದ ಹಿಂದೆ ಬರೆದಿದ್ದನ್ನು ನೋಡಿದ್ದೆ. ಈ ಒನ್‌ಲೈನ್ ಅನ್ನೇ ಇಟ್ಟುಕೊಂಡು ಸಿನಿಮಾ ಮಾಡಿದ್ದೇವೆ. ಕಮಲ್‌ಗೆ ಶ್ರೀದೇವಿ ಆಸೆಯೂ ಅಲ್ಲ, ಆಕರ್ಷಣೆಯೂ ಅಲ್ಲ, ಆಕೆ ಅವನ ಮನದಲ್ಲಿ ಮೂಡಿದ ಮಧುರ ಭಾವನೆಯಷ್ಟೇ. ಅವಳ ಮೇಲೆ ಈ ಸಿನಿಮಾದ ಕಥೆ ಇದೆ' ಎಂದರು.

'ಕಳೆದ ಆರು ತಿಂಗಳಿಂದ ಕನ್ನಡ ಚಿತ್ರರಂಗ ಕುಗ್ಗಿತ್ತು, ಈಗ ಚೇತರಿಸಿಕೊಂಡಿದೆ. ಯಾಕೆ ಚೆನ್ನಾಗಿರಲಿಲ್ಲ, ಯಾಕೆ ಚೆನ್ನಾಗಿ ಆಗುತ್ತಿದೆ ಎನ್ನುವುದಕ್ಕೂ ನಮ್ಮ ಸಿನಿಮಾಗಳೇ ಕಾರಣ. ಸುಗ್ಗಿ ಕಾಲ ಆರಂಭವಾಗಿದೆ. ಈ ಅವಧಿಯಲ್ಲೇ ನಮ್ಮ ಕಾಂಟೆಂಟ್‌ಗಳನ್ನು ಜನರ ಮುಂದೆ ಇಡಬೇಕಿದೆ. ಕಥೆ ಕಾರಣಕ್ಕಾಗಿಯೇ ಜನರು ಮತ್ತೆ ಚಿತ್ರಮಂದಿರಗಳತ್ತ ಬರುತ್ತಿದ್ದಾರೆ. ಚಿತ್ರರಂಗದ ಎಲ್ಲಾ ಪ್ರಶ್ನೆಗಳಿಗೆ ನಮ್ಮಲ್ಲೇ ಉತ್ತರವಿದೆ. ಇನ್ನು ಮೇಲೆ ಸಿನಿಮಾ ಮಾಡುವವರು ಸ್ವಲ್ಪ ಬಗ್ಗೆ ಗಂಭೀರವಾಗಬೇಕು. ನಟನೆಯ ಜೊತೆಗೆ ಹಲವರು ಸಿನಿಮಾ ನಿರ್ದೇಶನ, ನಿರ್ಮಾಣ ಹೀಗೆ ಎಲ್ಲದರ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಸಾಲಿಗೆ ಸೇರುವ ಅನಿವಾರ್ಯ ನನಗೂ ಇತ್ತು. ವಾಣಿಜ್ಯ ಮಂಡಳಿಯೂ ಒಂದೇ ದಿನ ಆರೇಳು ಸಿನಿಮಾ ಬಿಡುಗಡೆಗೆ ಕೊಂಚ ಕಡಿವಾಣ ಹಾಕಬೇಕಿದೆ. ಸಿನಿಮಾ ತಂಡದ ಶ್ರಮ ಒಂದೇ ಶುಕ್ರವಾರದಲ್ಲಿ ಹಾಳಾಗಬಾರದು' ಎಂದರು ರಾಜವರ್ಧನ್.


ಸಂಗೀತಾ ಭಟ್



ಕನ್ನಡ ಸಿನಿಮಾಗಳಿಗೆ ಮಾರುಕಟ್ಟೆ ಇಲ್ಲ ಎನ್ನುವುದನ್ನು 'ಸು ಫ್ರಮ್ ಸೋ' ಸಿನಿಮಾ ಸುಳ್ಳು ಎಂದು ಸಾಬೀತುಪಡಿಸಿದೆ. ನಾವು ಒಳ್ಳೆಯ, ಹೊಸದಾದ ಕಾಂಟೆಂಟ್ ಸಿದ್ಧಪಡಿಸಿ, ಜೊತೆಗೆ ಪ್ರೇಕ್ಷಕರಿಗೆ ಏನು ಅವಶ್ಯಕತೆ ಇದೆ ಎನ್ನುವುದನ್ನು ಅರಿತು ಮುಂದುವರಿಯಬೇಕು.
ಕಿಶೋರ್, ನಟ

'ಇದು ಪ್ರಸ್ತುತ ವಿಷಯ'

ನಟ ಕಿಶೋರ್ ಮಾತನಾಡಿ, 'ಇಂದಿಗೆ ಪ್ರಸ್ತುತವಾದ ವಿಷಯ ಈ ಸಿನಿಮಾದಲ್ಲಿದೆ. ಅತ್ಯಾಚಾರ, ಕೊಲೆ ಎನ್ನುವುದು ನಿತ್ಯದ ಸುದ್ದಿಯಾಗಿದೆ. ಇದು ಬಹಳ ಸಹಜ ಎನ್ನುವ ಸ್ಥಿತಿ ನಿರ್ಮಾಣವಾಗಿರುವುದು ಅಪಾಯಕಾರಿ. ಇಂತಹ ಘಟನೆಗಳು ನಮ್ಮಲ್ಲೇ ಒಬ್ಬರಿಗೆ ಆದಾಗ ಅದರ ಪರಿಣಾಮ ತಿಳಿಯುತ್ತದೆ. ಅಲ್ಲಿಯವರೆಗೂ ಕಾಯಬೇಕೇ ಅಥವಾ ಅದರ ಮೊದಲೇ ದನಿ ಎತ್ತಬೇಕೇ ಎಂದು ಯೋಚಿಸಬೇಕು. ಧರ್ಮಸ್ಥಳದಲ್ಲಿ ಸೌಜನ್ಯ ಪ್ರಕರಣವಾಗಿ 12 ವರ್ಷವಾಯಿತು. ಇದೂ ದೊಡ್ಡ ಮಟ್ಟದ ಸುದ್ದಿಯಾಯಿತು. ಆದರೆ 'ಇನ್ನೂ ನ್ಯಾಯ ಸಿಕ್ಕಿಲ್ಲ ಎನ್ನುವಾಗ ನಮ್ಮ ನ್ಯಾಯದ ವ್ಯವಸ್ಥೆ, ಪೊಲೀಸ್ ವ್ಯವಸ್ಥೆ ಮೇಲೆ ಪ್ರಶ್ನಾರ್ಥಕ ಚಿಹ್ನೆ ಬರುತ್ತದೆ. ನಮ್ಮನ್ನು ದನಿ ಎತ್ತುವುದಕ್ಕೆ ಈ ಸಿನಿಮಾ ಪ್ರೇರೇಪಿಸುತ್ತದೆ. ಸಮಾಜದ ಬೇರೆ ಬೇರೆ ವರ್ಗಗಳಿಂದ ಬಂದ ಪಾತ್ರಗಳು ಒಂದು ಹೆಣ್ಣನ್ನು ನೋಡುವ ದೃಷ್ಟಿಕೋನ ಆ ಹೆಣ್ಣಿನ ಜೀವನದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎನ್ನುವುದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ' ಎಂದರು.


ರಿತಿಕಾ, ತೇಜ್

'ವೈಬ್ ಐತೆ ಬೇಬಿ' ಎಂದ ತೇಜ್ ಸಜ್ಜಾ

ತೆಲುಗಿನಲ್ಲಿ 'ಹನುಮಾನ್' ಚಿತ್ರದ ಮೂಲಕ ಮೋಡಿ ಮಾಡಿದ್ದ ನಟ ತೇಜ್ ಸಜ್ಜಾ ಅಭಿನಯದ ಹೊಸ ಪ್ಯಾನ್ ಇಂಡಿಯಾ ಸಿನಿಮಾ 'ಮಿರಾಯ್' ಸೆ.5ರಂದು ತೆರೆಕಾಣುತ್ತಿದೆ. ಸಿನಿಮಾದ ಮೊದಲ ಹಾಡು 'ವೈಬ್ ಐತೆ ಬೇಬಿ' ಬಿಡುಗಡೆಯಾಗಿದೆ.

ಹಾಡಿನಲ್ಲಿ ನಾಯಕ ತೇಜ್ ಸಜ್ಜಾ ಮತ್ತು ನಾಯಕಿ ರಿತಿಕಾ ನಾಯಕ್ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ತೆಲುಗಿನ ಜೊತೆಗೆ ಕನ್ನಡದಲ್ಲೂ ಈ ಹಾಡು ಬಿಡುಗಡೆಯಾಗಿದ್ದು, ಗಾಯಕ ಅರ್ಮಾನ್ ಮಲಿಕ್ ದನಿಯಾಗಿದ್ದಾರೆ. ಗೌರ ಹರಿ ಸಂಗೀತ, ವರದರಾಜ್ ಚಿಕ್ಕಬಳ್ಳಾಪುರ ಸಾಹಿತ್ಯ ಕನ್ನಡದ ಹಾಡಿಗಿದೆ.

'ಕಾರ್ತಿಕೇಯ', 'ಕಾರ್ತಿಕೇಯ-2', 'ಧಮಾಕ' ಸೇರಿದಂತೆ ಹಲವು ಹಿಟ್ ಚಿತ್ರಗಳ ಸಾರಥಿ ಕಾರ್ತಿಕ್ ಗಟ್ಟಮನೇನಿ ಸಜ್ಜಾ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. 'ಹನುಮಾನ್'ನಲ್ಲಿ ಸೂಪರ್ ಹೀರೊ ಆಗಿದ್ದ ತೇಜ್ ಈಗ 'ಮಿರಾಯ್'ನಲ್ಲಿ ಸೂಪರ್ ಯೋಧನಾಗಿದ್ದಾರೆ.

'ಮಿರಾಯ್' ಚಿತ್ರದಲ್ಲಿ ಭರ್ಜರಿ ಆಕ್ಷನ್ ದೃಶ್ಯಗಳಿದ್ದು, ಇವುಗಳನ್ನು ಕಾರ್ತಿಕ್ ಗಟ್ಟಮನೇನಿ ನಿರ್ದೇಶಿಸಿದ್ದಾರೆ. ವಿಶೇಷವಾಗಿ ಈ ಚಿತ್ರ 2ಡಿ ಮತ್ತು 3ಡಿ ರೂಪದಲ್ಲಿ ರಿಲೀಸ್ ಆಗುತ್ತಿದೆ. ಪೀಪಲ್ ಮೀಡಿಯಾ ಫ್ಯಾಕ್ಟರಿಯಡಿ ಟಿ.ಜಿ.ವಿಶ್ವಪ್ರಸಾದ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

ಆ.8ಕ್ಕೆ ಸನ್ ನೆಕ್ಸ್ಟ್‌ನಲ್ಲಿ 'ಹೆಬ್ಬುಲಿ ಕಟ್'


ಮೌನೇಶ್ ನಟರಂಗ

ಭೀಮರಾವ್ ಪಿ. ನಿರ್ದೇಶನದ 'ಹೆಬ್ಬುಲಿ ಕಟ್' ಸಿನಿಮಾ ಶೀಘ್ರದಲ್ಲೇ ಒಟಿಟಿಗೆ ಬರಲಿದೆ. ಸಿನಿಮಾವನ್ನು ಆ.8ರಂದು ಸನ್ ನೆಕ್ಸ್ಟ್ ಒಟಿಟಿ ವೇದಿಕೆಯಲ್ಲಿ ವೀಕ್ಷಿಸಬಹುದಾಗಿದೆ.

ನಟ ನೀನಾಸಂ ಸತೀಶ್ ಪ್ರಸ್ತುತಪಡಿಸಿದ್ದ ಈ ಸಿನಿಮಾದಲ್ಲಿ ಮೌನೇಶ್ ನಟರಂಗ, ಅನನ್ಯ, ಮಹಾದೇವ ಹಡಪದ, ಉಮಾ ವೈ.ಜಿ., ವಿನಯ್ ಮಹಾದೇವನ್, ಮಹಂತೇಶ್ ಹಿರೇಮಠ, ಪುನೀತ್ ಶೆಟ್ಟಿ ಮತ್ತಿತರರು ನಟಿಸಿದ್ದಾರೆ. ಅಸ್ಪೃಶ್ಯತೆ, ಜಾತಿ ತಾರತಮ್ಯ, ದಬ್ಬಾಳಿಕೆಯ ಘಟನೆಗಳ ಚಿತ್ರಣಗಳಿಗೆ ಕಮರ್ಷಿಯಲ್ ಸ್ಪರ್ಶ ನೀಡಿ 'ಹೆಬ್ಬುಲಿ ಕಟ್' ಸಿನಿಮಾ ಹೆಣೆದಿದ್ದಾರೆ ನಿರ್ದೇಶಕರು. 'ಹೆಬ್ಬುಲಿ' ಸಿನಿಮಾದಲ್ಲಿ ನಟ ಸುದೀಪ್ ಅವರು ಮಾಡಿಕೊಂಡಿದ್ದ ಕೇಶವಿನ್ಯಾಸ ಚಿತ್ರದ ನಾಯಕಿಗೆ ಇಷ್ಟ. ಇದನ್ನರಿತ ನಾಯಕ ಆ ರೀತಿ ಕೇಶ ವಿನ್ಯಾಸ ಮಾಡಿಸಿಕೊಳ್ಳಲು ಮುಂದಾಗುತ್ತಾನೆ. ಮುಂದಿನ ಘಟನೆಗಳೇ ಚಿತ್ರದ ಕಥಾಹಂದರ. 'ಡೇರ್‌ಡೆವಿಲ್ ಮುಸ್ತಾಫಾ' ಚಿತ್ರದ ಚಿತ್ರಕಥೆ, ಸಂಭಾಷಣೆ ಬರೆದಿದ್ದ ಅನಂತ ಶಾಂದ್ರೇಯ ಈ ಸಿನಿಮಾಗೆ ಚಿತ್ರಕಥೆ ಬರೆದಿದ್ದಾರೆ.

ನೂರು ಕೋಟಿ ಬಾಚಿದ 'ನರಸಿಂಹ'



ಜುಲೈ 25ರಂದು ಬಿಡುಗಡೆಗೊಂಡ ಕ್ಲೀಮ್ ಪ್ರೊಡಕ್ಷನ್ಸ್ ನಿರ್ಮಾಣದ ಹೊಂಬಾಳೆ ಫಿಲ್ಮ್ಸ್ ಪ್ರಸ್ತುತಪಡಿಸಿದ 'ಮಹಾವತಾರ್ ನರಸಿಂಹ' ಸಿನಿಮಾ ನೂರು ಕೋಟಿ ಕ್ಲಬ್ ಸೇರಿದೆ.

ಹಿಂದಿ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ರಿಲೀಸ್ ಆದ ಈ ಆ್ಯನಿಮೇಷನ್ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ₹105 ಕೋಟಿಗೂ ಅಧಿಕ ಹಣ ಗಳಿಸಿದೆ ಎಂದು ಹೊಂಬಾಳೆ ಫಿಲ್ಮ್ಸ್ ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಹಾಕಿದೆ. ಇದು ಭಾರತದಲ್ಲೇ ಅತಿ ಹೆಚ್ಚು ಹಣ ಗಳಿಸಿದ ಆ್ಯನಿಮೇಷನ್ ಚಿತ್ರ ಎಂದೂ ಹೊಂಬಾಳೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಬುಕ್ ಮೈ ಶೋ ಮೂಲಕವೇ ಈ ಸಿನಿಮಾದ 20 ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಿವೆ.

'ಮಹಾವತಾರ್ ನರಸಿಂಹ' ಸಿನಿಮಾವು ವಿಷ್ಣುವಿನ ದಶಾವತಾರಗಳ ಆಧಾರದ ಮೇಲೆ ಮುಂದಿನ ದಶಕದವರೆಗೆ ಸಾಗಲಿರುವ ಬೃಹತ್ ಆ್ಯನಿಮೇಟೆಡ್ ಸರಣಿಯ ಮೊದಲ ಅಧ್ಯಾಯವಾಗಿದೆ. ಅಶ್ವಿಕ್ ಕುಮಾರ್ ಈ ಅಧ್ಯಾಯದ ನಿರ್ದೇಶಕರಾಗಿದ್ದಾರೆ. 'ಮಹಾವತಾರ್' ಯೂನಿವರ್ಸ್‌ನ ಈ ಮೊದಲ ಅಧ್ಯಾಯವನ್ನು ಶಿಲ್ಪಾ ಧವನ್, ಕುಶಾಲ್ ದೇಸಾಯಿ, ಚೈತನ್ಯ ದೇಸಾಯಿ ನಿರ್ಮಾಣ ಮಾಡಿದ್ದಾರೆ. ಈ ಸರಣಿಯಲ್ಲಿ ಮುಂದೆ 'ಮಹಾವತಾರ್ ಪರಶುರಾಮ'(2027), 'ಮಹಾವತಾರ್ ರಘುನಂದನ'(2029), 'ಮಹಾವತಾರ್ ದ್ವಾರಕಾಧೀಶ್'(2031), 'ಮಹಾವತಾರ್ ಗೋಕುಲನಂದ'(2033), 'ಮಹಾವತಾರ್ ಕಲ್ಕಿ ಭಾಗ–1'(2035), 'ಮಹಾವತಾರ್ ಕಲ್ಕಿ ಭಾಗ–2'(2037) ಮೂಡಿಬರಲಿವೆ.

ಚಿಟಿಕೆ ಸುದ್ದಿ

ಎನ್‌ಡಿಎ ಸಂಸದೀಯ ಪಕ್ಷದ ಸಭೆ ಇಂದು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಇಲ್ಲಿ ಎನ್‌ಡಿಎ ಮೈತ್ರಿಕೂಟದ ಸಂಸದೀಯ ಪಕ್ಷದ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ.


ನರೇಂದ್ರ ಮೋದಿ

ಸೆಪ್ಟೆಂಬರ್ 9ಕ್ಕೆ ನಿಗದಿಯಾಗಿರುವ ಉಪರಾಷ್ಟ್ರಪತಿ ಚುನಾವಣೆ ಘೋಷಣೆಯಾದ ಬಳಿಕ ಈ ಸಭೆ ನಡೆಯುತ್ತಿದೆ.

ಇನ್ನುಳಿದಂತೆ ಸಭೆಯಲ್ಲಿ ಪ್ರಸಕ್ತ ವಿದ್ಯಮಾನಗಳು, ಎಸ್‌ಐಆರ್ (ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ) ಮತ್ತು ಪಹಲ್ಗಾಮ್ ವಿಚಾರಗಳ ಬಗ್ಗೆ ಪ್ರಧಾನಿ ಮೋದಿ ಮಾತನಾಡುವ ಸಾಧ್ಯತೆ ಇದೆ.

ಇ.ಡಿ. ವಶಕ್ಕೆ ಚಂಗೂರ್ ಬಾಬಾ ಸಹಾಯಕ

ಲಖನೌ (ಪಿಟಿಐ): ಅಕ್ರಮ ಮತಾಂತರ ದಂಧೆಯ ಸೂತ್ರಧಾರ ಚಂಗೂರ್ ಬಾಬಾನ ಸಹಾಯಕ ನವೀನ್ ರೋಹ್ರಾ ಎಂಬಾತನನ್ನು ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಿ 'ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ'ಯಡಿ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯವು ಸೋಮವಾರ ಆದೇಶಿಸಿದೆ.

ಅಕ್ರಮ ಮತಾಂತರ ಜಾಲಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನವೀನ್‌ನನ್ನು ಉತ್ತರ ಪ್ರದೇಶದ ಭಯೋತ್ಪಾದನಾ ನಿಗ್ರಹ ಪಡೆಯ ಪೊಲೀಸರು ಇತ್ತೀಚೆಗೆ ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ನವೀನ್‌ನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಇ.ಡಿ ಸ್ಥಳೀಯ ನ್ಯಾಯಾಲಯಕ್ಕೆ ಮನವಿ ಮಾಡಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುಂಕ ಹೇರಿಕೆ: ದೇಶದಾದ್ಯಂತ ಪ್ರತಿಭಟನೆ 13ಕ್ಕೆ

ನವದೆಹಲಿ: ಭಾರತದ ಉತ್ಪನ್ನಗಳ ಮೇಲೆ ಶೇ 25ರಷ್ಟು ಸುಂಕ ಹಾಗೂ ರಷ್ಯಾದಿಂದ ಶಸ್ತ್ರಾಸ್ತ್ರ ಮತ್ತು ತೈಲ ಖರೀದಿ ಮಾಡುತ್ತಿರುವುದಕ್ಕೆ ದಂಡ ವಿಧಿಸುವ ಅಮೆರಿಕದ ಕ್ರಮವನ್ನು ಖಂಡಿಸಿ ಆ.13ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು (ಸಿಟಿಯು) ಮತ್ತು ಸಂಯುಕ್ತ ಕಿಸಾನ್ ಮೋರ್ಚ್ (ಎಸ್‌ಕೆಎಂ) ಕರೆ ನೀಡಿವೆ.

'ಅಮೆರಿಕದ ಈ ಕ್ರಮವು ಭಾರತದ ಮೇಲಿನ ಆರ್ಥಿಕ ದಬ್ಬಾಳಿಕೆಯ ಕೃತ್ಯ' ಎಂದು ಸಿಟಿಯು–ಎಸ್‌ಕೆಎಂ ದೂರಿವೆ.

ಆಕ್ರಮಣಕಾರಿ ಕ್ರಮವು ಅಮೆರಿಕದ ವ್ಯಾಪಾರ ನೀತಿಯ ಬೂಟಾಟಿಕೆಯನ್ನು ತೋರಿಸುತ್ತದೆ. ಅಲ್ಲದೆ, ಆ ದೇಶದ ಕಂಪನಿಗಳಿಗೆ ಮುಕ್ತ ಮಾರುಕಟ್ಟೆ ತೆರೆಯಲು ಒತ್ತಾಯಿಸುತ್ತದೆ. ಸಾರ್ವಭೌಮ ರಾಷ್ಟ್ರಗಳನ್ನು ಬೆದರಿಸಲು ಸುಂಕವನ್ನು ಅಸ್ತ್ರವನ್ನಾಗಿ ಬಳಸುತ್ತಿದೆ ಎಂದು ಆರೋಪಿಸಿವೆ.

ಟ್ರಂಪ್ ಅವರ ಸುಂಕ ಹೇರಿಕೆಯ ಬೆದರಿಕೆಯನ್ನು ತಿರಸ್ಕರಿಸಬೇಕು. ಜಗತ್ತಿನ ಎಲ್ಲ ರಾಷ್ಟ್ರಗಳೊಂದಿಗೆ ವ್ಯಾಪಾರ ನಡೆಸುವ ತನ್ನ ಸಾರ್ವಭೌಮ ಅಧಿಕಾರವನ್ನು ಭಾರತ ಪ್ರತಿಪಾದಿಸಬೇಕು ಎಂದು ಆಗ್ರಹಿಸಿವೆ.

ಸ್ಪೀಕರ್ – ವಿಪಕ್ಷ ಮಾತುಕತೆ ವಿಫಲ

ಮತದಾರರ ಪಟ್ಟಿ ಪರಿಷ್ಕರಣೆ ಚರ್ಚೆಗೆ ಪಟ್ಟು: ಸಭಾಧ್ಯಕ್ಷರ ಪೀಠದ ಎದುರು ಧರಣಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯಲ್ಲಿನ ಬಿಕ್ಕಟ್ಟು ನಿವಾರಣೆ ಸಂಬಂಧ ಲೋಕಸಭಾಧ್ಯಕ್ಷ ಓಂ ಬಿರ್ಲಾ ಹಾಗೂ ವಿಪಕ್ಷಗಳ ನಡುವೆ ಸೋಮವಾರ ನಡೆದ ಮಾತುಕತೆ ವಿಫಲವಾಯಿತು.

ಬಿಹಾರ ಹಾಗೂ ಇತರ ರಾಜ್ಯಗಳಲ್ಲಿನ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಚರ್ಚೆಗೆ ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿ 'ಇಂಡಿಯಾ' ಮೈತ್ರಿಕೂಟದ ಸಂಸದರು ಪ್ರಶ್ನೋತ್ತರ ಅವಧಿಯಲ್ಲಿ ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿದರು. ಹೀಗಾಗಿ, ಕಲಾಪ ಮುಂದೂಡಲಾಯಿತು.

ಪ್ರತಿಭಟನೆಯಿಂದಾಗಿ ಕ್ರೀಡಾ ಆಡಳಿತದ ಕುರಿತು ಪಟ್ಟಿ ಮಾಡಲಾದ ಎರಡು ಮಸೂದೆಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಆ ಬಳಿಕ ಲೋಕಸಭೆ ಅಧ್ಯಕ್ಷರ ಕಚೇರಿಯಲ್ಲಿ ಸಭೆ ನಡೆಯಿತು.

ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಚರ್ಚೆಗೆ ಒತ್ತಾಯಿಸಿ ವಿಪಕ್ಷಗಳ ಸದಸ್ಯರು ಜುಲೈ 21ರಿಂದ ಸದನದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಬಗ್ಗೆ ಚರ್ಚೆಗೆ ಒತ್ತಾಯಿಸಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿ ವಿರೋಧ ಪಕ್ಷಗಳ ನಾಯಕರು ಓಂ ಬಿರ್ಲಾ ಅವರಿಗೆ ಶುಕ್ರವಾರ ಪತ್ರ ಬರೆದಿದ್ದರು.

ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಚರ್ಚೆ ನಡೆಸಬೇಕು ಎಂದು ಸಿಪಿಐ(ಎಂ) ಸಂಸದ ಬಸುದೇವ್ ಆಚಾರ್ಯ ಅವರು 1980 ರ ದಶಕದಲ್ಲಿ ಸದನದಲ್ಲಿ ಒತ್ತಾಯಿಸಿದ್ದರು. ಅದಕ್ಕೆ ಆಗಿನ ಸ್ಪೀಕರ್ ಬಲರಾಮ್ ಜಾಖರ್ ಒಪ್ಪಿಗೆ ಕೊಟ್ಟಿರಲಿಲ್ಲ.

ಈ ಪ್ರಕರಣವನ್ನು ಉದಾಹರಣೆಯಾಗಿ ನೀಡಿದ ಓಂ ಬಿರ್ಲಾ ಅವರು ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಚರ್ಚೆಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು ಎಂದು ಮೂಲಗಳು ಹೇಳಿವೆ.

ಈ ಚರ್ಚೆಯು ಎಸ್‌ಐಆರ್‌ಗೆ ನಿರ್ದಿಷ್ಟವಾಗಿರಬೇಕೆಂದು ಒತ್ತಾಯಿಸುತ್ತಿಲ್ಲ. ಆದರೆ, ಅದು ಒಟ್ಟಾರೆ ಚುನಾವಣಾ ಸುಧಾರಣೆಗಳು ಮತ್ತು ಪ್ರಕ್ರಿಯೆ ಅಥವಾ ಮತದಾರರ ಪಟ್ಟಿಯ ಮೇಲೆ ಆಗಿರಬಹುದು. ಅಲ್ಲಿ ನಾವು ಚುನಾವಣಾ ಆಯೋಗದ ಕಾರ್ಯವೈಖರಿಯ ಬಗ್ಗೆ ನಿರ್ದಿಷ್ಟವಾಗಿ ಚರ್ಚಿಸುವುದಿಲ್ಲ ಎಂದು ವಿಪಕ್ಷಗಳ ನಾಯಕರು ಸ್ಪೀಕರ್‌ಗೆ ತಿಳಿಸಿದರು ಎಂದು ಮೂಲಗಳು ತಿಳಿಸಿವೆ.

ಮುಂಗಾರು ಅಧಿವೇಶನದ ಮೊದಲ ಹತ್ತು ದಿನಗಳಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ತಲಾ 22 ಗಂಟೆಗಳ ಕಾಲ ಕಲಾಪ ನಡೆದಿದೆ. ಇದರಲ್ಲಿ ಹೆಚ್ಚಿನ ಕೆಲಸದ ಸಮಯವನ್ನು ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ ಕುರಿತ ಚರ್ಚೆಗೆ ಮೀಸಲಿಡಲಾಗಿತ್ತು. ಆದಾಗ್ಯೂ, ಎಸ್‌ಐಆರ್ ಕುರಿತು ಚರ್ಚೆಯ ಬೇಡಿಕೆಗೆ ಸರ್ಕಾರ ಒಪ್ಪಿಲ್ಲ. ವಿಪಕ್ಷಗಳು ತಮ್ಮ ಪಟ್ಟು ಸಡಿಲಿಸಿಲ್ಲ.

'ವಿಷಯಗಳ ಬಗ್ಗೆ ಪ್ರಸ್ತಾಪಿಸಲು ಸಂಸದರನ್ನು ಜನರು ಆಯ್ಕೆ ಮಾಡುತ್ತಾರೆ. ಕಲಾಪಕ್ಕೆ ಈ ರೀತಿಯ ಅಡ್ಡಿಪಡಿಸುವಿಕೆಯು ಪ್ರಜಾಸತ್ತಾತ್ಮಕ ಮಾರ್ಗವಲ್ಲ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸುದ್ದಿಗಾರರಿಗೆ ತಿಳಿಸಿದರು.


ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಸ್ಪೀಕರ್ ಪೀಠದ ಮುಂದೆ ಧರಣಿ ನಡೆಸಿದರು —ಪಿಟಿಐ ಚಿತ್ರ

ವಿಪಕ್ಷಗಳ ಪ್ರತಿಭಟನೆ: ಮಸೂದೆ ಮಂಡನೆ ಅನಿವಾರ್ಯ

ನವದೆಹಲಿ (ಪಿಟಿಐ): ಸಂಸತ್ತಿನಲ್ಲಿ ವಿರೋಧ ಪಕ್ಷಗಳು ತಮ್ಮ ಪ್ರತಿಭಟನೆಯನ್ನು ನಿರಂತರವಾಗಿ ನಡೆಸುತ್ತಿದ್ದು, ಗದ್ದಲದಲ್ಲೇ ಮಸೂದೆಗಳನ್ನು ಮಂಡಿಸಿ ಅಂಗೀಕಾರ ಪಡೆಯುವುದು ಸರ್ಕಾರಕ್ಕೆ ಅನಿವಾರ್ಯವಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸೋಮವಾರ ಹೇಳಿದ್ದಾರೆ.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತಂತೆ ವಿರೋಧ ಪಕ್ಷಗಳು ಉಭಯ ಸದನದಲ್ಲೂ ತಮ್ಮ ಪಟ್ಟು ಸಡಿಲಿಸದಿರುವುದರಿಂದ ಮುಂಗಾರು ಅಧಿವೇಶನಕ್ಕೆ ಅಡ್ಡಿಯಾಗಿದೆ.


ಕಿರಣ್ ರಿಜಿಜು

'ಕೇಂದ್ರ ಸರ್ಕಾರವು ಮಸೂದೆಗಳ ಬಗ್ಗೆ ಸಂಸತ್ತಿನಲ್ಲಿ ಚರ್ಚಿಸಲು ಸಿದ್ಧವಿದೆ. ಆದರೆ ವಿರೋಧ ಪಕ್ಷಗಳು ಕಲಾಪದಲ್ಲಿ ಪ್ರತಿಭಟಿಸುತ್ತಿರುವುದರಿಂದ, ಪ್ರಸ್ತಾವಿತ ಮಸೂದೆಗಳು ಆಡಳಿತಕ್ಕೆ ಮುಖ್ಯವಾಗಿದ್ದು, ರಾಷ್ಟ್ರೀಯ ಹಿತಾಸಕ್ತಿಯಡಿ ಅವುಗಳ ಅಂಗೀಕಾರಕ್ಕೆ ಮಂಗಳವಾರದಿಂದ ಮುಂದಾಗಲಿದೆ' ಎಂದು ರಿಜಿಜು ಹೇಳಿದರು.

ಅಭಿಷೇಕ್ ಬ್ಯಾನರ್ಜಿ ಟಿಎಂಸಿ ಸಂಸದೀಯ ಪಕ್ಷದ ನಾಯಕ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ) ತನ್ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಸಂಸದ ಅಭಿಷೇಕ್ ಬ್ಯಾನರ್ಜಿ ಅವರನ್ನು ಸಂಸದೀಯ ಪಕ್ಷದ ನಾಯಕನನ್ನಾಗಿ ನೇಮಕ ಮಾಡಿದೆ. ಕಳೆದ ಕೆಲವು ತಿಂಗಳುಗಳಿಂದ ಅನಾರೋಗ್ಯದಿಂದ ಬಳಲುತ್ತಿರುವ ಹಿರಿಯ ನಾಯಕ ಸುದೀಪ್ ಬಂದೋಪಾಧ್ಯಾಯ ಅವರ ಸ್ಥಾನಕ್ಕೆ ಈ ನೇಮಕ ನಡೆದಿದೆ.


ಅಭಿಷೇಕ್

ಪಕ್ಷದ ಮುಖ್ಯಸ್ಥೆ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಸೋಮವಾರ ನಡೆದ ಸಂಸತ್ತಿನ ಉಭಯ ಸದನಗಳ ಟಿಎಂಸಿ ಸಂಸದರ ಸಭೆಯಲ್ಲಿ ಈ ಮಹತ್ವದ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಮತಾ ಅವರು ಕೋಲ್ಕತ್ತದಿಂದ ವರ್ಚುವಲ್ ಆಗಿ ಸಭೆಯಲ್ಲಿ ಪಾಲ್ಗೊಂಡರು.

'ಸುದೀಪ್ ಬಂದೋಪಾಧ್ಯಾಯ ಅವರು ಸಂಪೂರ್ಣವಾಗಿ ಚೇತರಿಸಿಕೊಳ್ಳುವವರೆಗೆ ಅಭಿಷೇಕ್ ಬ್ಯಾನರ್ಜಿ ಲೋಕಸಭೆಯಲ್ಲಿ ಪಕ್ಷವನ್ನು ಮುನ್ನಡೆಸಲಿದ್ದಾರೆ' ಎಂದು ಮಮತಾ ಅವರು ಸಭೆಯಲ್ಲಿ ಪಕ್ಷದ ಸಂಸದರಿಗೆ ತಿಳಿಸಿದರು ಎಂದು ಮೂಲಗಳು ಹೇಳಿವೆ.

ಕೋಲ್ಕತ್ತ ಉತ್ತರ ಕ್ಷೇತ್ರದಿಂದ ನಾಲ್ಕು ಬಾರಿ ಸಂಸದರಾಗಿರುವ ಬಂದೋಪಾಧ್ಯಾಯ ಅವರು 2011ರಿಂದಲೂ ಈ ಹುದ್ದೆಯಲ್ಲಿದ್ದರು. ಮುಖ್ಯ ಸಚೇತಕ

ಹುದ್ದೆ ತೊರೆದ ಕಲ್ಯಾಣ್ ಬ್ಯಾನರ್ಜಿ: ಟಿಎಂಸಿ ಹಿರಿಯ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ಲೋಕಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕ ಹುದ್ದೆಗೆ ಸೋಮವಾರ ರಾಜೀನಾಮೆ ನೀಡಿದ್ದಾರೆ. ಹಾಲಿ ನಡೆಯುತ್ತಿರುವ ಮುಂಗಾರು ಅಧಿವೇಶನದಲ್ಲಿ ಪಕ್ಷದ ಸಂಸದರ ಜತೆ ಸಮನ್ವಯ ಸಾಧಿಸಲು ವಿಫಲರಾಗಿದ್ದಕ್ಕೆ ಅವರು ಟೀಕೆಗೆ ಗುರಿಯಾಗಿದ್ದರು.

'ಪಕ್ಷದ ಸಂಸದರ ನಡುವೆ ಸಮನ್ವಯದ ಕೊರತೆಯಿದೆ ಎಂದು ದೀದಿ (ಮಮತಾ ಬ್ಯಾನರ್ಜಿ) ಅವರು ವರ್ಚುವಲ್ ಸಭೆಯಲ್ಲಿ ಹೇಳಿದ್ದಾರೆ. ನನ್ನ ಮೇಲೆ ಆಪಾದನೆ ಬಂದಿರುವುದರಿಂದ ಮುಖ್ಯ ಸಚೇತಕ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ' ಎಂದು ಕಲ್ಯಾಣ್ ಬ್ಯಾನರ್ಜಿ ಅವರು ಸುದ್ದಿವಾಹಿನಿಗೆ ತಿಳಿಸಿದ್ದಾರೆ.

ಶಿಕ್ಷಕರ ನೇಮಕಾತಿ: 'ವಾಸಸ್ಥಳ ನೀತಿ' ಜಾರಿ

ಪಟ್ನಾ (ಪಿಟಿಐ): ಸರ್ಕಾರಿ ಶಿಕ್ಷಕರ ನೇಮಕಾತಿಯಲ್ಲಿ 'ವಾಸಸ್ಥಳ ನೀತಿ' ಜಾರಿಗೊಳಿಸುವುದಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸೋಮವಾರ ಪ್ರಕಟಿಸಿದ್ದಾರೆ.

'ರಾಜ್ಯದಲ್ಲಿಯೇ ಜನಿಸಿದವರಿಗೆ ನೇಮಕಾತಿಯಲ್ಲಿ ಎಷ್ಟು ಶೇಕಡವಾರು ಮೀಸಲಿಡಬೇಕು' ಎಂಬುದನ್ನು ಸ್ಪಷ್ಟಪಡಿಸಿಲ್ಲ. ಪ್ರಸಕ್ತ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಮುನ್ನ ಈ ಘೋಷಣೆ ಮಾಡಲಾಗಿದೆ. 'ಶಿಕ್ಷಕರ ನೇಮಕಾತಿಯಲ್ಲಿ ಬಿಹಾರದ ನಿವಾಸಿಗಳಿಗೆ ಆದ್ಯತೆ ನೀಡಲು ನಿಯಮಗಳಿಗೆ ಅಗತ್ಯವಾದ ತಿದ್ದುಪಡಿ ಮಾಡಲು ಶಿಕ್ಷಣ ಇಲಾಖೆಗೆ ನಿರ್ದೇಶಿಸಲಾಗಿದೆ' ಎಂದು ನಿತೀಶ್ ತಿಳಿಸಿದ್ದಾರೆ.

ರಾಹುಲ್ ಗಾಂಧಿಗೆ 'ಸುಪ್ರೀಂ' ತರಾಟೆ

ಒಂದನೇ ಪುಟದಿಂದ...

ಅದಕ್ಕೆ ಪೀಠ, 'ಗಡಿಯಲ್ಲಿ ಸಂಘರ್ಷ ನಡೆದಾಗ ಎರಡೂ ಕಡೆಗಳಲ್ಲಿ ಸಾವು – ನೋವು ಸಂಭವಿಸುವುದು ಅಸಾಮಾನ್ಯ ಸಂಗತಿಯೇ?' ಎಂದಿತು.

ವಿರೋಧ ಪಕ್ಷದ ಜವಾಬ್ದಾರಿಯುತ ನಾಯಕನಾಗಿ ಅಂತಹ ವಿಷಯಗಳನ್ನು ಎತ್ತಲು ಸೂಕ್ತ ವೇದಿಕೆ ಇರುವುದರಿಂದ ರಾಹುಲ್ ಅವರು ಆ ರೀತಿ ಮಾಡಬಾರದಿತ್ತು ಎಂದು ನ್ಯಾಯಮೂರ್ತಿ ದತ್ತ ಹೇಳಿದರು. ರಾಹುಲ್ ಅವರು ಸೂಕ್ತ ವೇದಿಕೆಯಲ್ಲಿ ಈ ವಿಷಯ ಪ್ರಸ್ತಾಪಿಸಬಹುದಿತ್ತು ಎಂಬುದನ್ನು ಒಪ್ಪಿಕೊಂಡ ಸಿಂಘ್ವಿ, 'ಈ ದೂರು ಅರ್ಜಿದಾರರಿಗೆ ಕಿರುಕುಳ ನೀಡುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ' ಎಂದು ವಾದಿಸಿದರು.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 223 ಅನ್ನು ಉಲ್ಲೇಖಿಸಿದ ಸಿಂಘ್ವಿ, ಕ್ರಿಮಿನಲ್ ದೂರನ್ನು ಪರಿಗಣಿಸುವ ಮೊದಲು ನ್ಯಾಯಾಲಯವು ಆರೋಪಿಗಳ ವಾದ ಆಲಿಸುವುದು ಕಡ್ಡಾಯ. ಆದರೆ ಈ ಪ್ರಕರಣದಲ್ಲಿ ಅದನ್ನು ಮಾಡಿಲ್ಲ ಎಂದರು.

ಅರ್ಜಿಗೆ ಸಂಬಂಧಿಸಿದಂತೆ ನೋಟಿಸ್ ಜಾರಿಗೊಳಿಸಿ ಮೂರು ವಾರಗಳ ಒಳಗಾಗಿ ಪ್ರತಿಕ್ರಿಯಿಸುವಂತೆ ಸೂಚಿಸಿದ ಪೀಠ, ಲಖನೌ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕಾನೂನು ಪ್ರಕ್ರಿಯೆಗೆ ತಡೆ ನೀಡಿತು.

'ಭಾರತ್ ಜೋಡೊ ಯಾತ್ರೆ'ಯ ಸಂದರ್ಭದಲ್ಲಿ 2022ರ ಡಿಸೆಂಬರ್‌ನಲ್ಲಿ ರಾಹುಲ್ ಅವರು ಭಾರತೀಯ ಸೇನೆಯ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಉದಯ್ ಶಂಕರ್ ಶ್ರೀವಾಸ್ತವ ಎಂಬವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಲಖನೌ ನ್ಯಾಯಾಲಯ ಹೊರಡಿಸಿದ್ದ ಸಮನ್ಸ್ ಪ್ರಶ್ನಿಸಿ ರಾಹುಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಮೇ 29ರಂದು ತಿರಸ್ಕರಿಸಿತ್ತು.

> **ಈ ಹಿಂದೆ ಹಲವು ನ್ಯಾಯಾಲಯಗಳು ಛೀಮಾರಿ ಹಾಕಿದ್ದರೂ ರಾಹುಲ್ ಅವರು ಅಪಕ್ವ, ಬೇಜವಾಬ್ದಾರಿ ಮತ್ತು ದೇಶ ವಿರೋಧಿ ಹೇಳಿಕೆ ನೀಡುತ್ತಲೇ ಇದ್ದಾರೆ**
> **ಗೌರವ್ ಭಾಟಿಯಾ,** ಬಿಜೆಪಿ ವಕ್ತಾರ

ಆಲಪ್ಪುಳ: ಮೃತದೇಹದ ಇನ್ನಷ್ಟು ಅವಶೇಷ ಪತ್ತೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಆಲಪ್ಪುಳ ಜಿಲ್ಲೆಯ ಮನೆಯೊಂದರಲ್ಲಿ ಮಾನವನ ಮೃತದೇಹದ ಇನ್ನಷ್ಟು ಅವಶೇಷಗಳು ಪತ್ತೆಯಾಗಿದ್ದು, ಸರಣಿ ಹತ್ಯೆ ನಡೆದಿರುವ ಅನುಮಾನಗಳಿಗೆ ಪುಷ್ಟಿ ನೀಡಿದೆ.

ಕೊಲೆ ಪ್ರಕರಣದ ಆರೋಪಿ, ಆಲಪ್ಪುಳದ ಪಳ್ಳಿಪುರಂನ ಸೆಬಾಸ್ಟಿಯನ್‌ನ ಮನೆಯ ಆವರಣದಲ್ಲಿ ಸೋಮವಾರ ಮೃತದೇಹದ 20 ಭಾಗಗಳು ದೊರೆತಿವೆ. ಪೊಲೀಸರು ಶ್ವಾನಗಳನ್ನು ಬಳಸಿ ಮನೆಯ ವಿಶಾಲ ಆವರಣದಲ್ಲಿ ಶೋಧ ನಡೆಸಿದರು. ಪೊಲೀಸರು ಈ ವೇಳೆ ಸೆಬಾಸ್ಟಿಯನ್‌ನನ್ನೂ ಸ್ಥಳಕ್ಕೆ ಕರೆತಂದಿದ್ದರು. ಕೊಲೆಯಾದ ಮಹಿಳೆಯ ಪರಿಚಯ ತನಗೆ ಇತ್ತು ಎಂದು ಸೆಬಾಸ್ಟಿಯನ್ ಒಪ್ಪಿಕೊಂಡಿದ್ದಾನೆ. ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.

2024ರ ಡಿಸೆಂಬರ್‌ನಲ್ಲಿ ಕೊಟ್ಟಾಯಂ ಜಿಲ್ಲೆಯ ಎಟ್ಟುಮಾನೂರಿನ ಜೆಯ್‌ನಮ್ಮ ಎಂಬವರ ನಾಪತ್ತೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು ಸೆಬಾಸ್ಟಿಯನ್‌ನನ್ನು ಬಂಧಿಸಿದ್ದರು. ಹಲವಾರು ವರ್ಷಗಳ ಹಿಂದೆ ಇಬ್ಬರು ಮಹಿಳೆಯರ ನಾಪತ್ತೆ ಪ್ರಕರಣ ಮತ್ತು ಆಲಪ್ಪುಳದ ಮತ್ತೊಬ್ಬ ಮಹಿಳೆಯ ನಾಪತ್ತೆಯಲ್ಲೂ ಆತನ ಪಾತ್ರ ಇದೆ ಎಂದು ಶಂಕಿಸಲಾಗಿದೆ.

ಸರಣಿ ಹತ್ಯೆಯಲ್ಲಿ ಆತ ಭಾಗಿಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮನೆಯಿಂದ ವಶಪಡಿಸಿಕೊಂಡ ಅವಶೇಷಗಳ ಡಿಎನ್‌ಎ ಪರೀಕ್ಷೆಯ ಫಲಿತಾಂಶಗಳು ನಿರ್ಣಾಯಕವಾಗುತ್ತವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಸದೆಯ ಸರ ದೋಚಿ ಪರಾರಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದೆ ಆರ್. ಸುಧಾ ಅವರು ಇಲ್ಲಿನ ಚಾಣಕ್ಯಪುರಿಯಲ್ಲಿ ಮುಂಜಾನೆ ವಾಯುವಿಹಾರ ಮಾಡುತ್ತಿದ್ದ ವೇಳೆ ಅವರ ಸರವನ್ನು ದೋಚಿ ಕಳ್ಳರು ಪರಾರಿಯಾಗಿದ್ದಾರೆ.

ಮುಂಜಾನೆ 6.15 ಗಂಟೆ ಸುಮಾರಿಗೆ ಘಟನೆ ನಡೆದಿದ್ದು, ಪ್ರಕರಣ ದಾಖಲಿಸಲಾಗಿದೆ. ಸುಧಾ ಅವರು ತಮಿಳುನಾಡಿನ ಮಯಿಲಾದುಥುರೈ ಸಂಸದೆ. ಪ್ರಿಯಾಂಕಾ ಗಾಂಧಿ ಹಾಗೂ ಸುಧಾ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮಾಹಿತಿ ನೀಡಿದರು.

ಉತ್ತರ ಪ್ರದೇಶದಲ್ಲಿ ಪ್ರವಾಹ: 11 ಸಾವು

ಪ್ರಜಾವಾಣಿ ವಾರ್ತೆ

ಲಖನೌ: ನಿರಂತರ ಮಳೆಯಿಂದಾಗಿ ಉತ್ತರ ಪ್ರದೇಶದ 13 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಭಾನುವಾರ ಮತ್ತು ಸೋಮವಾರ 11 ಮಂದಿ ಮೃತಪಟ್ಟಿದ್ದಾರೆ.

ಸೀತಾಪುರ ಜಿಲ್ಲೆಯಲ್ಲಿ ಮಳೆಯಿಂದಾಗಿ ಸೋಮವಾರ ಮನೆಯೊಂದರ ಗೋಡೆ ಕುಸಿದ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ. ಉಳಿದ 9 ಮಂದಿ ವಿವಿಧ ಜಿಲ್ಲೆಗಳಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ ಸಾವಿಗೀಡಾಗಿದ್ದಾರೆ. ಗಂಗಾ, ಯಮುನಾ, ಬೆಟ್ವಾ ಸೇರಿದಂತೆ ಪ್ರಮುಖ ನದಿಗಳು ಹಲವೆಡೆ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಪ್ರವಾಹದ ಭೀತಿ ಹೆಚ್ಚಿಸಿದೆ.

ಭಾನುವಾರ ರಾಜ್ಯದಲ್ಲಿ 1.42 ಸೆ.ಮೀ ಮಳೆಯಾಗಿದ್ದು, 24 ಜಿಲ್ಲೆಗಳಲ್ಲಿ ಹೆಚ್ಚಿನ ಮಳೆಯಾಗಿದೆ. ಹೀಗಾಗಿ ಲಖನೌ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ವಾರಾಣಸಿ, ಪ್ರಯಾಗರಾಜ್ ಹಾಗೂ ಇತರೆ ಪ್ರದೇಶಗಳಲ್ಲಿ ಗಂಗಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ರಸ್ತೆಗಳು ಜಲಾವೃತಗೊಂಡಿವೆ. ವಾರಾಣಸಿಯಲ್ಲಿರುವ ನಮೋ ಘಾಟ್ ಜಲಾವೃತಗೊಂಡಿರುವುದರಿಂದ, ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಮಣಿಕರ್ಣಿಕಾ ಘಾಟ್ ಕೂಡ ಜಲಾವೃತವಾಗಿದ್ದರಿಂದ ಶವಸಂಸ್ಕಾರಕ್ಕೆ ಅಡಚಣೆಯಾಗಿದೆ.


ಪ್ರವಾಹದ ಸಂತ್ರಸ್ತರಿಗೆ ಅಗತ್ಯ ನೆರವು ನೀಡುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.


ಪ್ರಯಾಗರಾಜ್‌ನಲ್ಲಿ ಪ್ರವಾಹ ಪೀಡಿತ ಪ್ರದೇಶದಿಂದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಯಿತು — ಪಿಟಿಐ ಚಿತ್ರ

ಬುಡಕಟ್ಟು ಸಮುದಾಯದ ಹಿರಿಯ ನಾಯಕ, ಜೆಎಂಎಂ ಸಂಸ್ಥಾಪಕ

ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ನಿಧನ

ರಾಂಚಿ/ನವದೆಹಲಿ (ಪಿಟಿಐ): ಜಾರ್ಖಂಡ್ ರಾಜ್ಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬುಡಕಟ್ಟು ಸಮುದಾಯದ ಹಿರಿಯ ಮುಖಂಡ, ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಸಂಸ್ಥಾಪಕ ಶಿಬು ಸೊರೇನ್(81) ಅವರು ಸೋಮವಾರ ನಿಧನರಾದರು.


ಶಿಬು ಸೊರೇನ್

ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಕಳೆದೊಂದು ತಿಂಗಳಿನಿಂದ ನವದೆಹಲಿಯ ಗಂಗಾರಾಮ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಸೋಮವಾರ ಬೆಳಿಗ್ಗೆ 8.56ಕ್ಕೆ ಕೊನೆಯುಸಿರೆಳೆದರು.

ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಮೃತದೇಹವನ್ನು ರಾಂಚಿಯ ಬಿರ್ಸಾ ಮುಂಡಾ ವಿಮಾನ ನಿಲ್ದಾಣಕ್ಕೆ ಸೋಮವಾರ ರಾತ್ರಿ ವೇಳೆಗೆ ಕರೆತರಲಾಯಿತು. ಈ ವೇಳೆ ವಿಮಾನ ನಿಲ್ದಾಣ, ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಸಾವಿರಾರು ಜನರು ಜನನಾಯಕನಿಗೆ ಅಂತಿಮ ನಮನ ಸಲ್ಲಿಸಿದರು.

'ಮಂಗಳವಾರ ಬೆಳಿಗ್ಗೆ ರಾಮಗಢ ಜಿಲ್ಲೆಯಲ್ಲಿರುವ ಅವರ ಹುಟ್ಟೂರು ನೆಮ್ರಾ ಗ್ರಾಮಕ್ಕೆ ಕೊಂಡೊಯ್ದು, ಅಲ್ಲಿಯೇ ಅಂತಿಮ ವಿಧಿ ವಿಧಾನಗಳನ್ನು ನಡೆಸಲಾಗುವುದು' ಎಂದು ಜೆಎಂಎಂ ಪಕ್ಷವು ತಿಳಿಸಿದೆ.

ಸೊರೇನ್ ಅವರ ನಿಧನ ಘೋಷಣೆಯಾಗುತ್ತಿದ್ದಂತೆಯೇ, ಜಾರ್ಖಂಡ್ ವಿಧಾನಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ರಾಜ್ಯದಾದ್ಯಂತ ಮೂರು ದಿನ ಶೋಕಾಚರಣೆ ಘೋಷಿಸಲಾಯಿತು. ಶಿಬು ಅವರ ನಿಧನದ ಹಿನ್ನೆಲೆಯಲ್ಲಿ ರಾಜ್ಯಸಭೆಯಲ್ಲಿ ಸದಸ್ಯರು ಸಂತಾಪ ಸಲ್ಲಿಸಿ, ದಿನದ ಮಟ್ಟಿಗೆ ಸದನವನ್ನು ಮುಂದೂಡಲಾಯಿತು. ಕಳೆದ 38 ವರ್ಷಗಳಿಂದ ಜೆಎಂಎಂ ಪಕ್ಷ ಮುನ್ನಡೆಸಿದ್ದ ಸೊರೇನ್, ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು.

ಮುಖ್ಯಾಂಶಗಳು

- ಆರು ಬಾರಿ ಸಂಸದ, ಕೇಂದ್ರ ಕಲ್ಲಿದ್ದಲು ಸಚಿವರಾಗಿಯೂ ಸೇವೆ
- 2020ರ ಜೂನ್‌ನಲ್ಲಿ ರಾಜ್ಯಸಭೆಗೆ ಆಯ್ಕೆ

ಸಿಂಗ್ ಸರ್ಕಾರದ ಪಾಲಿಗೆ ಅಪತ್ಬಾಂಧವ!

ಭಾರತ– ಅಮೆರಿಕ ಪರಮಾಣು ಒಪ್ಪಂದ ವಿರೋಧಿಸಿ 2008 ರಲ್ಲಿ ಎಡಪಕ್ಷಗಳು ಬೆಂಬಲವನ್ನು ಹಿಂಪಡೆದ ವೇಳೆ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು ಅಲ್ಪಮತಕ್ಕೆ ಕುಸಿದು ಸಂಸತ್ತಿನಲ್ಲಿ ವಿಶ್ವಾಸಮತ ಎದುರಿಸುವಂತಾಯಿತು. ಸಮ್ಮಿಶ್ರ ಸರ್ಕಾರ ಉಳಿಸಲು ಪ್ರತಿ ಮತವೂ ಮುಖ್ಯವಾಗಿತ್ತು.

ಅವಿಶ್ವಾಸ ನಿರ್ಣಯಕ್ಕೂ ಕೆಲದಿನಗಳ ಮುನ್ನ ಜೆಎಂಎಂ ಸಂಸ್ಥಾಪಕ ಶಿಬು ಸೊರೇನ್ ಹಾಗೂ ಪಕ್ಷದ ನಾಲ್ವರು ಸಂಸದರ ಜೊತೆ ದಿಢೀರ್ ನಾಪತ್ತೆಯಾಗಿದ್ದರು. ಐದು ಮಂದಿ ಎಲ್ಲಿದ್ದಾರೆ ಎಂಬುದು ಕೇಂದ್ರ ತನಿಖಾ ಸಂಸ್ಥೆಗಳಿಗೂ ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ. ಎಲ್ಲರೂ ಅಜ್ಞಾತವಾಗಿಯೇ ಉಳಿದಿದ್ದರು. ಅವಿಶ್ವಾಸ ಮತದಾನದ ಹಿಂದಿನ ದಿನ ದೆಹಲಿಯ ಗೋಲ್ ಮಾರುಕಟ್ಟೆಯ ಹಿಂಭಾಗದ ಮನೆಯಲ್ಲಿ ಕಾಣಿಸಿಕೊಂಡಿದ್ದ ಅವರು, ಯುಪಿಎ ಸರ್ಕಾರಕ್ಕೆ ಬೆಂಬಲ ಮುಂದುವರಿಸುವುದಾಗಿ ಪುನರುಚ್ಚರಿಸಿದ್ದರು. ಮರುದಿನ ನಡೆದ ವಿಶ್ವಾಸಮತ ಯಾಚನೆಯಲ್ಲಿ ಯುಪಿಎ ಸರ್ಕಾರ ಬೆಂಬಲಿಸಿ, ಸಿಂಗ್ ಸರ್ಕಾರ ಉಳಿಸಿದ್ದರು.

ಓವಲ್‌ನಲ್ಲಿ ಗಿಲ್ ಪಡೆಯ ಜಯಭೇರಿ

ಮೊಹಮ್ಮದ್ ಸಿರಾಜ್ ಸ್ವಿಂಗ್ ದಾಳಿ • ಪ್ರಸಿದ್ಧ ಕೃಷ್ಣ ಮಿಂಚು • ಇಂಗ್ಲೆಂಡ್ ಕೈತಪ್ಪಿದ ಸರಣಿ ಜಯ

ಪ್ರಮುಖ ಅಂಶಗಳು

- ಸರಣಿಯ ಕೊನೆಯ ಪಂದ್ಯದಲ್ಲಿ ಪ್ರವಾಸಿ ಭಾರತ ತಂಡಕ್ಕೆ 6 ರನ್‌ಗಳ ರೋಚಕ ಗೆಲುವು
- 2–2ರಿಂದ ಸರಣಿ ಸಮಬಲ

• ಸಿಡ್ನಿ ಕಿರಣ್

ಲಂಡನ್: ಜೋಕಾಲಿಯಂತೆ ಅತ್ತಿಂದಿತ್ತ ಜೀಕಾಡಿದ ಜಯವು ಕಡೆಗೂ ಭಾರತಕ್ಕೆ ಒಲಿಯಿತು. 'ಸಿಂಹದ ಗುಂಡಿಗೆ'ಯ ಬೌಲರ್ ಮೊಹಮ್ಮದ್ ಸಿರಾಜ್ ಅವರ ಬಿರುಗಾಳಿ ವೇಗದ ದಾಳಿಯಿಂದಾಗಿ ಭಾರತ ತಂಡವು ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಸಮಬಲ ಸಾಧಿಸಿತು.

ಓವಲ್ ಕ್ರೀಡಾಂಗಣದಲ್ಲಿ ನಡೆದ ಆ್ಯಂಡರ್ಸನ್–ತೆಂಡೂಲ್ಕರ್ ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ ತಂಡವು 6 ರನ್‌ಗಳಿಂದ ಜಯಿಸಿತು. ಆತಿಥೇಯ ತಂಡದ ಸರಣಿ ಗೆಲುವಿನ ಕನಸು ಕಮರಿತು.

31 ವರ್ಷ ವಯಸ್ಸಿನ ಸಿರಾಜ್ ಅವರು ಸೋಮವಾರ ಬೆಳಿಗ್ಗೆ ತಮ್ಮ ಸ್ವಿಂಗ್ ದಾಳಿಯ ಚಾಕಚಕ್ಯತೆಯನ್ನು ಮೆರೆದರು. ಇಂಗ್ಲೆಂಡ್ ತಂಡವು 3–1ರಿಂದ ಸರಣಿ ಜಯಿಸಲು 35 ರನ್‌ಗಳ ಅಗತ್ಯವಿತ್ತು. ನಾಲ್ಕು ವಿಕೆಟ್‌ಗಳು ಮಾತ್ರ ಬಾಕಿಯಿದ್ದವು. ಆದರೆ ಸಿರಾಜ್ ಅವರ ಮಿಂಚಿನಂತ ಸ್ಪೆಲ್‌ನಿಂದಾಗಿ ಭಾರತ ತಂಡವು ಪಂದ್ಯ ಗೆದ್ದು ಸರಣಿಯನ್ನು 2–2ರಿಂದ ಸಮಬಲ ಮಾಡಿಕೊಂಡಿತು. 'ಹೌಸ್‌ಫುಲ್' ಆಗಿದ್ದ ಕ್ರೀಡಾಂಗಣದಲ್ಲಿ ಉಭಯ ತಂಡಗಳ ನಾಯಕರು ಟ್ರೋಫಿ ಹಂಚಿಕೊಂಡರು.

ಈ ಸರಣಿಯ ಕಳೆದ ನಾಲ್ಕು ಪಂದ್ಯಗಳಲ್ಲಿಯೂ ಐದನೇ ದಿನ ಫಲಿತಾಂಶ ಹೊರಹೊಮ್ಮಿತ್ತು. ಈ ಪಂದ್ಯವೂ ಕೊನೆಯ ದಿನ ಬೆಳಿಗ್ಗೆಯವರೆಗೂ ಲಂಬಿಸಿತ್ತು. ಹಲವು ಐತಿಹಾಸಿಕ ಪಂದ್ಯಗಳಿಗೆ ವೇದಿಕೆಯಾಗಿದ್ದ ಓವಲ್ ಕ್ರೀಡಾಂಗಣದಲ್ಲಿ ದಿನದಾಟ ಆರಂಭವಾಗುವ ಮುನ್ನವೇ ಜನರು ಬಂದಿದ್ದರು. ಕೆಲಸ, ಕಾರ್ಯಗಳ ಒತ್ತಡ ಎದ್ದು ಕಾಣಬೇಕಿದ್ದ ಸೋಮವಾರದ ಬೆಳಿಗ್ಗೆಯು 'ಸ್ಪೋರ್ಟಿಂಗ್ ಸಂಡೇ'ಯಂತೆ ಭಾಸವಾಗಿತ್ತು.

ಸಿರಾಜ್ (104ಕ್ಕೆ5) ಮತ್ತು ಪ್ರಸಿದ್ಧಕೃಷ್ಣ (126ಕ್ಕೆ4) ಅವರ ಅಮೋಘ ದಾಳಿಯನ್ನು ಆಸ್ವಾದಿಸಿದರು. ಉಭಯ ದೇಶಗಳ ಅಭಿಮಾನಿಗಳೂ ಈ ಗೆಲುವಿಗೆ ಮತ್ತು ಬೌಲರ್‌ಗಳ ಸಾಹಸಕ್ಕೆ ಮೆಚ್ಚುಗೆ ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ದಿನದಾಟದ ಆರಂಭದಲ್ಲಿ ಕ್ರೀಸ್‌ನಲ್ಲಿದ್ದ ಜೆಮಿ ಓವರ್ಟನ್ ಅವರು ಪ್ರಸಿದ್ಧ ಅವರ ಮೊದಲ ಮೊದಲ ಎಸೆತವನ್ನು ಪುಲ್ ಮಾಡಿದರು. ಬೌಂಡರಿ ಲಭಿಸಿತು. ಇನ್ನೊಂದು ಎಸೆತವನ್ನು ಕಟ್ ಮಾಡಿ ಒಂದು ರನ್ ಪಡೆದರು. ಇದರಿಂದಾಗಿ ಇಂಗ್ಲೆಂಡ್ ಸುಲಭ ಜಯ ಸಾಧಿಸುವಂತೆ ಕಂಡಿತ್ತು. ಓವರ್ಟನ್ ಅವರು ದೊಡ್ಡ ಹೊಡೆತಗಳನ್ನು ಪ್ರಯೋಗಿಸುವತ್ತ ಗಮನ ಇಟ್ಟರು. ಇನ್ನೊಂದು ಬದಿಯಲ್ಲಿ ಜೆಮಿ ಸ್ಮಿತ್ ಕೂಡ ಎಚ್ಚರಿಕೆಯಿಂದ ಆಡಿದರು. ಮೊದಲ ಮೂರು ಎಸೆತಗಳಲ್ಲಿ ಅವರಿಬ್ಬರ ಯೋಜನೆ ಫಲ ನೀಡಿತು.

ನಂತರದ ಓವರ್‌ನಲ್ಲಿ ಸಿರಾಜ್ ಅವರ ಎರಡು ಎಸೆತಗಳಲ್ಲಿ ಸ್ಮಿತ್ ಬೀಟ್ ಆದರು. ಮೂರನೇ ಎಸೆತದಲ್ಲಿ ಸ್ಮಿತ್ ಬ್ಯಾಟ್ ಸವರಿದ ಚೆಂಡು ವಿಕೆಟ್‌ಕೀಪರ್ ಧ್ರುವ ಜುರೇಲ್ ಕೈಸೇರಿತು. ಅದೇ ಓವರ್‌ನ ಇನ್ನೊಂದು ಎಸೆತದಲ್ಲಿ ಕೆ.ಎಲ್. ರಾಹುಲ್ ಕ್ಯಾಚ್ ಕೈಚೆಲ್ಲಿದ್ದರಿಂದ ಗಸ್ ಅಟ್ಕಿನ್ಸನ್ ಜೀವದಾನ ಪಡೆದರು. ಸಿರಾಜ್ ಅವರ ಔಟ್‌ಸ್ವಿಂಗರ್‌ಗಳು, ನೇರ ಎಸೆತಗಳನ್ನು ಆಡಲು ಬ್ಯಾಟರ್‌ಗಳು ಪರದಾಡಿದರು.

ಸಿರಾಜ್ ಅವರು ಜೆಮಿ ಓವರ್ಟನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಇನ್ನೊಂದೆಡೆ ಪ್ರಸಿದ್ಧ ಕೂಡ ಬೆಂಕಿ ಚೆಂಡು ಎಸೆದರು. ಜೋಶ್ ಟಂಗ್ ಅವರ ವಿಕೆಟ್ ಉರುಳಿಸಿದರು. ಇಂಗ್ಲೆಂಡ್‌ಗೆ 17 ರನ್‌ಗಳ ಅಗತ್ಯವಿದ್ದಾಗ 9 ವಿಕೆಟ್‌ಗಳು ಪತನವಾಗಿದ್ದವು. ಈ ಹಂತದಲ್ಲಿ ಗಾಯಾಳು ಕ್ರಿಸ್ ವೋಕ್ಸ್ ಕ್ರೀಸ್‌ಗೆ ಬಂದರು.

ಪಂದ್ಯದ ಮೊದಲ ದಿನದಾಟದಲ್ಲಿ ಅವರು ಫೀಲ್ಡಿಂಗ್ ಮಾಡುವಾಗ ಡೈವ್ ಮಾಡಿದ್ದಾಗ ಭುಜದ ಮೂಳೆಮುರಿತವಾಗಿತ್ತು. ತಮ್ಮ ಎಡಗೈಗೆ ಬ್ಯಾಂಡೇಜ್ ಕಟ್ಟಿಕೊಂಡಿದ್ದ ವೋಕ್ಸ್ ಇನ್ನೊಂದು ಕೈಯಲ್ಲಿ ಬ್ಯಾಟ್ ಹಿಡಿದು ಕ್ರೀಸ್‌ಗೆ ಬಂದರು. ಅವರಿಗೆ ಬ್ಯಾಟಿಂಗ್ ಸಿಗದಂತೆ ಎಚ್ಚರಿಕೆ ವಹಿಸಿದ ಅಟ್ಕಿನ್ಸನ್ ಅವರು ಸಿರಾಜ್ ಎಸೆತದಲ್ಲಿ ಒಂದು ಸಿಕ್ಸರ್ ಎತ್ತಿದರು. ಓವರ್ ಕೊನೆಯಲ್ಲಿ ಒಂದು ರನ್ ಗಳಿಸಿ ಬ್ಯಾಟಿಂಗ್ ತಮಗೇ ಬರುವಂತೆ ನೋಡಿಕೊಂಡ ಅಟ್ಕಿನ್ಸನ್ ಮತ್ತೆ 3 ರನ್‌ಗಳನ್ನು ಕಲೆಹಾಕದಿರು. ಇನ್ನೇನು ಗೆಲುವಿಗೆ 7 ರನ್ ಮಾತ್ರ ಅಗತ್ಯವಿತ್ತು. ಸಿರಾಜ್ ಅವರ ಇನ್‌ಸ್ವಿಂಗ್ ಎಸೆತಕ್ಕೆ ಅಟ್ಕಿನ್ಸನ್ ವಿಕೆಟ್ ಉರುಳಿತು. ಭಾರತದ ಸಂಭ್ರಮ ಗರಿಗೆದರಿತು. ಶುಭಮನ್ ಗಿಲ್ ನಾಯಕತ್ವದ ಯುಗಕ್ಕೆ ಚೆಂದದ ಆರಂಭ ದೊರೆಯಿತು.



ಓವಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಐದನೇ ಟೆಸ್ಟ್ ಪಂದ್ಯ ಗೆದ್ದ ಭಾರತ ತಂಡದ ಆಟಗಾರರ ಸಂಭ್ರಮ ಚಿತ್ರಗಳು: ಎಎಫ್‌ಪಿ/ಪಿಟಿಐ



ಗಾಯದ ನಡುವೆ ಕ್ರೀಸ್‌ಗಿಳಿದ ಇಂಗ್ಲೆಂಡ್‌ನ ಕ್ರಿಸ್ ವೋಕ್ಸ್



ಆ್ಯಂಡರ್ಸನ್– ತೆಂಡೂಲ್ಕರ್ ಟ್ರೋಫಿಯೊಂದಿಗೆ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಮತ್ತು ಭಾರತ ತಂಡದ ನಾಯಕ ಶುಭಮನ್ ಗಿಲ್

21
ಉಭಯ ತಂಡಗಳಿಂದ ದಾಖಲಾದ ಒಟ್ಟು ಶತಕಗಳು. ಟೆಸ್ಟ್ ಸರಣಿಯೊಂದರಲ್ಲಿ 1955ರ (ಆಸ್ಟ್ರೇಲಿಯಾ– ವೆಸ್ಟ್ ಇಂಡೀಸ್ ಸರಣಿಯಲ್ಲಿ 23 ಶತಕ) ಬಳಿಕ ದಾಖಲಾದ ಗರಿಷ್ಠ ಶತಕಗಳು

3,809
ಭಾರತ ತಂಡ ಕಲೆಹಾಕಿದ ಒಟ್ಟು ರನ್. ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ ಗಳಿಸಿದ ಅತಿ ಹೆಚ್ಚು ರನ್ ದಾಖಲೆ ಇದಾಗಿದೆ

ಇಂಗ್ಲೆಂಡ್ ಪ್ರವಾಸದಲ್ಲಿ ಭಾರತದ ಸಾಧನೆ (ಟೆಸ್ಟ್)

ವರ್ಷ	ಪಂದ್ಯ	ಸರಣಿ ಸಾಧನೆ
1932	1	0–1ರಿಂದ ಸೋಲು
1936	3	0–2ರಿಂದ ಸೋಲು
1946	3	0–1ರಿಂದ ಸೋಲು
1952	4	0–3ರಿಂದ ಸೋಲು
1959	5	0–5ರಿಂದ ಸೋಲು
1967	3	0–3ರಿಂದ ಸೋಲು
1971	3	1–0ಯಿಂದ ಜಯ
1974	3	0–3ರಿಂದ ಸೋಲು
1979	4	0–1ರಿಂದ ಸೋಲು
1982	3	0–1ರಿಂದ ಸೋಲು
1986	3	2–0ಯಿಂದ ಗೆಲುವು
1990	3	0–1ರಿಂದ ಸೋಲು
1996	3	0–1ರಿಂದ ಸೋಲು
2002	4	1–1ರಿಂದ ಸಮ
2007	3	1–0ಯಿಂದ ಗೆಲುವು
2011	4	0–4ರಿಂದ ಸೋಲು
2014	5	1–3ರಿಂದ ಸೋಲು
2018	5	1–4ರಿಂದ ಸೋಲು
2021–22	5	2–2ರಿಂದ ಸಮ
2025	5	2–2ರಿಂದ ಸಮ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 224 (69.4 ಓವರುಗಳಲ್ಲಿ)
ಇಂಗ್ಲೆಂಡ್: 247 (51.2 ಓವರುಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ: 396 (88 ಓವರುಗಳಲ್ಲಿ)
ಇಂಗ್ಲೆಂಡ್: 367 (85.1 ಓವರ್‌ಗಳಲ್ಲಿ)
(ಭಾನುವಾರ 6 ವಿಕೆಟ್‌ಗೆ 339 ರನ್)
ಸ್ಮಿತ್ ಸಿ ಜುರೇಲ್ ಬಿ ಸಿರಾಜ್ 2 (20ಎ)
ಓವರ್ಟನ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 9 (17)
ಅಟ್ಕಿನ್ಸನ್ ಬಿ ಸಿರಾಜ್ 17 (29ಎ, 6x1)
ಟಂಗ್ ಬಿ ಪ್ರಸಿದ್ಧ 0 (12ಎ)
ಕ್ರಿಸ್ ವೋಕ್ಸ್ ಔಟಾಗದೇ 0 (0)
ಇತರೆ: 23 (ಬೈ 2, ಲೆಗ್‌ಬೈ 9, ನೋಬಾಲ್ 1, ವೈಡ್ 11)
ವಿಕೆಟ್ ಪತನ: 7-347 (ಜೆಮಿ ಸ್ಮಿತ್, 77.3), 8-354 (ಜೆಮಿ ಓವರ್ಟನ್, 79.5), 9-357 (ಜೋಶ್ ಟಂಗ್, 82.6), 10-367 (ಗಸ್ ಅಟ್ಕಿನ್ಸನ್, 85.1)
ಬೌಲಿಂಗ್: ಆಕಾಶ್ ದೀಪ್ 20–4–85–1, ಪ್ರಸಿದ್ಧ ಕೃಷ್ಣ 27–3–126–4, ಮೊಹಮ್ಮದ್ ಸಿರಾಜ್ 30.1–6–104–5, ವಾಷಿಂಗ್ಟನ್ ಸುಂದರ್ 4–0–19–0, ರವೀಂದ್ರ ಜಡೇಜ 4–0–22–0
ಪಂದ್ಯದ ಆಟಗಾರ: ಮೊಹಮ್ಮದ್ ಸಿರಾಜ್
ಸರಣಿಯ ಆಟಗಾರರು: ಶುಭಮನ್ ಗಿಲ್ (ಭಾರತ), ಹ್ಯಾರಿ ಬ್ರೂಕ್ (ಇಂಗ್ಲೆಂಡ್)

ಫಲಿತಾಂಶ: ಭಾರತಕ್ಕೆ 6 ರನ್ ಗೆಲುವು, ಸರಣಿ 2–2 ಸಮ

ಸರಣಿಯಲ್ಲಿ ಹೆಚ್ಚು ವಿಕೆಟ್ ಪಡೆದವರು

ಬೌಲರ್	ದೇಶ	ಪಂದ್ಯ	ವಿಕೆಟ್	ಓವರ್	ಸರಾಸರಿ	ಶ್ರೇಷ್ಠ
ಮೊಹಮ್ಮದ್ ಸಿರಾಜ್	ಭಾರತ	5	23	185.3	32.43	70ಕ್ಕೆ 6
ಜೋಶ್ ಟಂಗ್	ಇಂಗ್ಲೆಂಡ್	3	19	127.0	29.05	125ಕ್ಕೆ 5
ಬೆನ್ ಸ್ಟೋಕ್ಸ್	ಇಂಗ್ಲೆಂಡ್	4	17	140.0	25.23	72ಕ್ಕೆ 5
ಜಸ್‌ಪ್ರೀತ್ ಬೂಮ್ರಾ	ಭಾರತ	3	14	119.4	26.00	74ಕ್ಕೆ 5
ಪ್ರಸಿದ್ಧ ಕೃಷ್ಣ	ಭಾರತ	3	14	105.0	37.07	62ಕ್ಕೆ 4
ಆಕಾಶ್‌ದೀಪ್	ಭಾರತ	3	13	109.1	36.46	99ಕ್ಕೆ 6

ಸರಣಿಯಲ್ಲಿ ಹೆಚ್ಚು ರನ್ ಗಳಿಸಿದವರು

ಆಟಗಾರ	ದೇಶ	ಪಂದ್ಯ	ರನ್	ಶತಕ	ಅರ್ಧಶತಕ	ಗರಿಷ್ಠ
ಶುಭಮನ್ ಗಿಲ್	ಭಾರತ	5	754	4	0	269
ಜೋ ರೂಟ್	ಇಂಗ್ಲೆಂಡ್	5	537	3	1	150
ಕೆ.ಎಲ್.ರಾಹುಲ್	ಭಾರತ	5	532	2	2	137
ರವೀಂದ್ರ ಜಡೇಜ	ಭಾರತ	5	516	1	5	107*
ಹ್ಯಾರಿ ಬ್ರೂಕ್	ಇಂಗ್ಲೆಂಡ್	5	481	2	2	158
ರಿಷಭ್ ಪಂತ್	ಭಾರತ	4	479	2	3	134

ಚಿಟಿಕೆ ಸುದ್ದಿ

ಸಹನಾ ಮೂರ್ತಿ ಚಾಂಪಿಯನ್



ಪ್ರಶಸ್ತಿಯೊಂದಿಗೆ ಹಿಮಾಂಶಿ ಚೌಧರಿ, ಸಹನಾ ಮೂರ್ತಿ, ವರುಣ್ ಕಶ್ಯಪ್

ಬೆಂಗಳೂರು: ಸಹನಾ ಮೂರ್ತಿ ಅವರು ನಗರದ ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ಸೋಮವಾರ ಆರಂಭಗೊಂಡ ಐದನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ಸಹನಾ ಅವರು ಫೈನಲ್ ಪಂದ್ಯದಲ್ಲಿ 8-11, 12-10, 11-5, 11-7, 6-11, 11-5ರಿಂದ ತನಿಷ್ಕಾ ಕಾಲಭೈರವ ಅವನ್ನು ಮಣಿಸಿದರು. 19 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನು ವರುಣ್ ಕಶ್ಯಪ್ ಗೆದ್ದರು. ಫೈನಲ್ ಪಂದ್ಯದಲ್ಲಿ ವರುಣ್ 11-5, 9-11, 10-12, 11-2, 11-7, 11-6ರಿಂದ ಅಭಿನವ್ ಮೂರ್ತಿ ಅವರನ್ನು ಮಣಿಸಿದರು.

ಹಿಮಾಂಶಿ ಚೌಧರಿ ಅವರು 19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಹಿಮಾಂಶಿ ಫೈನಲ್‌ನಲ್ಲಿ 11 - 8 , 8 - 11 , 11 - 5 , 6 - 11 , 11 - 6 , 13 - 11ರಿಂದ ಹಿಯಾ ಸಿಂಗ್ ಅವರನ್ನು ಮಣಿಸಿದರು.

ಮಹಾರಾಣಿ ಟ್ರೋಫಿ: ಶಿವಮೊಗ್ಗ, ಮಂಗಳೂರು ಶುಭಾರಂಭ

ಬೆಂಗಳೂರು: ಶಿವಮೊಗ್ಗ ಲಯನೆಸ್ ತಂಡವು ಸೋಮವಾರ ಇಲ್ಲಿ ಆರಂಭಗೊಂಡ ಚೊಚ್ಚಲ ಕೆಎಸ್‌ಸಿಎ ಮಹಾರಾಣಿ ಟ್ರೋಫಿ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ಎದುರು 15 ರನ್‌ಗಳ ಗೆಲುವು ದಾಖಲಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಲೀಗ್‌ನ ಮತ್ತೊಂದು ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ತಂಡ ಕರ್ಣಿಕಾ ಕಾರ್ತಿಕ್ ಅವರ ಆಟದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿತು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಲಯನೆಸ್: 20 ಓವರ್‌ಗಳಲ್ಲಿ6ಕ್ಕೆ 126 (ಅದ್ವಿಕಾ 44, ಪ್ರಿಯಾ ಚವ್ಹಾಣ್ 27ಕ್ಕೆ4) ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 111 (ನಂದನಿ ಚೌಹಾಣ್ 34, ಅನ್ನಪೂರ್ಣ ಭೋಸಲೆ 39)

ಬೆಂಗಳೂರು ಬ್ಲಾಸ್ಟರ್ಸ್: 20 ಓವರುಗಳಲ್ಲಿ 9ಕ್ಕೆ 102 (ದೀಕ್ಷಾ ಸಿ.ಡಿ. 26, ರೀತು ಆರ್. ಗೌಡ 17ಕ್ಕೆ 3) ಮಂಗಳೂರು ಡ್ರ್ಯಾಗನ್ಸ್: 17.4 ಓವರುಗಳಲ್ಲಿ 106 (ಕರ್ಣಿಕಾ ಕಾರ್ತಿಕ್ 32, ಅದಿತಿ ರಾಜೇಶ್ 19ಕ್ಕೆ 2)

ನಿಧನ ವಾರ್ತೆ

ಚೇಂದಂಡ ಅಶ್ವತ್ಥ್



ಬೆಂಗಳೂರು: ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ (ಎಸ್‌ಎಐ) ಹಾಕಿ ತರಬೇತುದಾರರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಚೇಂದಂಡ ಅಶ್ವತ್ಥ್ ಅವರು ಹೃದಯಘಾತದಿಂದ ಸೋಮವಾರ ಮೃತಪಟ್ಟರು.

ಉತ್ತರಪ್ರದೇಶದ ಗ್ವಾಲಿಯರ್‌ನಲ್ಲಿ ಬಿ.ಪಿ.ಇಡಿ ಹಾಗೂ ಎಂ.ಪಿ.ಇಡಿ ಪದವಿ ಶಿಕ್ಷಣ ಪಡೆದಿದ್ದ ಇವರು, ರಾಷ್ಟ್ರೀಯ ಕ್ರೀಡಾ ಸಂಸ್ಥೆಯಿಂದ (ಎನ್‌ಐಎಸ್) ಕ್ರೀಡಾ ತರಬೇತುದಾರ ಡಿಪ್ಲೊಮಾ ಪದವಿ ಪಡೆದಿದ್ದರು. ಬೆಂಗಳೂರಿನಲ್ಲಿರುವ ಎಸ್‌ಐಎ ತರಬೇತಿ ಕೇಂದ್ರದಲ್ಲಿ ದಶಕಗಳ ಕಾಲ ಹಾಕಿ ತರಬೇತುದಾರರಾಗಿ ಕಾರ್ಯನಿರ್ವಹಿಸಿದ್ದರು.



ಬೆಂಗಳೂರು ತಂಡದ ಅಕ್ಷಿತಾ ಅವರು ಚಂಡೀಗಢ ತಂಡದ ಆಟಗಾರ್ತಿಯರಿಂದ ತಪ್ಪಿಸಿಕೊಳ್ಳಲು ಯತ್ನಿಸಿದರು ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಕಬಡ್ಡಿ: ಬೆಂಗಳೂರು ಕೆವಿಎಸ್‌ಗೆ ಗೆಲುವು

ಬೆಂಗಳೂರು: ಕೇಂದ್ರಿಯ ವಿದ್ಯಾಲಯಗಳ ಬೆಂಗಳೂರು ವಲಯದ ಬಾಲಕಿಯರ ಕಬಡ್ಡಿ ತಂಡವು ಇಲ್ಲಿ ನಡೆಯುತ್ತಿರುವ ಕೇಂದ್ರಿಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟದ 14 ವರ್ಷದೊಳಗಿನವರ ವಿಭಾಗದಲ್ಲಿ ಚಂಡೀಗಢ ತಂಡವನ್ನು ಮಣಿಸಿತು.

ಹೆಬ್ಬಾಳದ ಕೇಂದ್ರಿಯ ವಿದ್ಯಾಲಯದ ಮೈದಾನದಲ್ಲಿ ಸೋಮವಾರ ನಡೆದ ಲೀಗ್‌ನ ಪಂದ್ಯದಲ್ಲಿ ಆತಿಥೇಯ ತಂಡವು 28–24ರಿಂದ ಚಂಡೀಗಢ ಎದುರು ಜಯ ಸಾಧಿಸಿತು. ಮಂಗಳವಾರ ನಡೆಯಲಿರುವ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಬೆಂಗಳೂರು ತಂಡವು ಗುವಾಹಟಿ ತಂಡವನ್ನು ಎದುರಿಸಲಿದೆ. ಕ್ವಾರ್ಟರ್ ಫೈನಲ್ ತಲುಪಲು ಆತಿಥೇಯ ತಂಡಕ್ಕೆ ಈ ಪಂದ್ಯದ ಗೆಲುವು ಅನಿವಾರ್ಯವಾಗಿದೆ.

ಫಲಿತಾಂಶಗಳು: ಜೈಪುರ 26–18ರಿಂದ ಮುಂಬೈ ವಿರುದ್ಧ; ದೆಹಲಿ 32–19ರಿಂದ ಹೈದರಾಬಾದ್ ವಿರುದ್ಧ; ಪಟ್ನಾ 27–14ರಿಂದ ಅಹಮದಾಬಾದ್ ವಿರುದ್ದ; ಗುವಾಹಟಿ 28–19ರಿಂದ ಚಂಡೀಗಢ ವಿರುದ್ದ; ಜಬಲ್‌ಪುರ28–19ರಿಂದ ಹೈದರಾಬಾದ್ ವಿರುದ್ದ; ಚೆನ್ನೈ 34–05ರಿಂದ ವಾರಾಣಸಿ ವಿರುದ್ದ; ಆಗ್ರಾ 40–18ರಿಂದ ಎರ್ನಾಕುಳಂ ವಿರುದ್ದ; ಜೈಪುರ 20–17ರಿಂದ ಭೋಪಾಲ್ ವಿರುದ್ದ; ಡೆಹ್ರಾಡೂನ್ 22–19ರಿಂದ ಭುವನೇಶ್ವರ ವಿರುದ್ದ; ಕೋಲ್ಕತ್ತ 31–14ರಿಂದ ಅಹಮದಾಬಾದ್ ವಿರುದ್ದ; ರಾಂಚಿ 29–02ರಿಂದ ಎರ್ನಾಕುಳಂ ವಿರುದ್ದ; ಎರ್ನಾಕುಳಂ 30–26ರಿಂದ ಗುವಾಹಟಿ ವಿರುದ್ದ; ರಾಂಚಿ 28–17ರಿಂದ ಆಗ್ರಾ ವಿರುದ್ಧ ಜಯ ಸಾಧಿಸಿದವು. ಜಮ್ಮು ಹಾಗೂ ಲಖನೌ ನಡುವಣ ಪಂದ್ಯವು 23–23ರಿಂದ ಡ್ರಾ ಆಯಿತು.

ದಾಖಲೆ ಉತ್ತಮಪಡಿಸಿದ ದಕ್ಷಣ್

ಬೆಂಗಳೂರು: ಕರ್ನಾಟಕದ ದಕ್ಷಣ್ ಎಸ್. ಅಹಮದಾಬಾದ್‌ನಲ್ಲಿ ನಡೆಯುತ್ತಿರುವ 51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ಗುಂಪು Iರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿ, ಚಿನ್ನದ ಪದಕ ಗೆದ್ದರು.

ದಕ್ಷಣ್ ಅವರು ಸೋಮವಾರ ಫೈನಲ್‌ನಲ್ಲಿ 1 ನಿಮಿಷ 52.20 ಸೆಕೆಂಡುಗಳಲ್ಲಿ ಗುರಿ ತಲುಪಿ, ಹಿಂದಿನ ದಾಖಲೆಯನ್ನು (1:52.87) ಸುಧಾರಿಸಿದರು. ಗುಂಪು 2 ಬಾಲಕರ ವಿಭಾಗದಲ್ಲಿ ಶರಣ್ ಎಸ್. (200 ಮೀ. ಫ್ರೀಸ್ಟೈಲ್, 1500 ಮೀ. ಫ್ರೀಸ್ಟೈಲ್) ಮತ್ತು ಬಾಲಕಿಯರ ಗುಂಪು I ವಿಭಾಗದಲ್ಲಿ ತನಿಶಿ ಗುಪ್ತಾ (200 ಮೀ. ಮೆಡ್ಲೆ, 100 ಮೀ. ಬ್ಯಾಕ್‌ಸ್ಟ್ರೋಕ್) ಕರ್ನಾಟಕಕ್ಕೆ ತಲಾ ಎರಡು ಚಿನ್ನ ಗೆದ್ದುಕೊಟ್ಟರು.

ಫಲಿತಾಂಶ: (ಕರ್ನಾಟಕದ ಫಲಿತಾಂಶ): ಬಾಲಕರು: ಗುಂಪು 1: 200 ಮೀ. ಫ್ರೀಸ್ಟೈಲ್: ದಕ್ಷಣ್ (ಕಾಲ: 1ನಿ.52.20ಸೆ)–1, ಆರ್ಯನ್ ಕೈಲಾಸ್– 2 100ಮೀ ಬಟರ್‌ಫ್ಲೈ: ದರ್ಶನ್ ಎಸ್. (56.04ಸೆ)–2. 4x100 ಮೀ ಫ್ರೀಸ್ಟೈಲ್ ರಿಲೆ: ಕರ್ನಾಟಕ (3ನಿ.35.41ಸೆ)–1.
ಗುಂಪು 2: 200 ಮೀ. ಫ್ರೀಸ್ಟೈಲ್: ಶರಣ್ ಎಸ್. (1ನಿ.59.45ಸೆ)–1. 100 ಮೀ ಬಟರ್‌ಫ್ಲೈ: ಸುಬ್ರಹ್ಮಣ್ಯ ಜೆ. (1ನಿ.00.02ಸೆ)–3. 100 ಮೀ ಬ್ಯಾಕ್ ಸ್ಟ್ರೋಕ್: ಅದ್ವೈತ ವೆಂಕಟ ಮಧಿರ (1ನಿ.01.35ಸೆ)–1, ಭಾರದ್ವಾಜ್ ಜಿ. (1ನಿ.03.29ಸೆ)– 2. 1500 ಮೀ ಫ್ರೀಸ್ಟೈಲ್: ಶರಣ್ ಎಸ್. (16ನಿ.32.12ಸೆ)–1; ಸುಬ್ರಹ್ಮಣ್ಯ ಜೀವಾಂಶ್ (17ನಿ.15.53ಸೆ.)–3.
ಬಾಲಕಿಯರು: 200 ಮೀ. ಮೆಡ್ಲೆ: ತನಿಶಿ ಗುಪ್ತಾ (2ನಿ.21.35ಸೆ.)–1; ಹಶಿಕಾ ರಾಮಚಂದ್ರ (2ನಿ.26.42ಸೆ)–2. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಮಾನವಿ ವರ್ಮಾ (1ನಿ.15.81ಸೆ)–1. 100 ಮೀ. ಬ್ಯಾಕ್‌ಸ್ಟ್ರೋಕ್: ತನಿಶಿ ಗುಪ್ತಾ (1ನಿ.05.31ಸೆ.) 1; ವಿಹಿತಾ ನಯನಾ ಲೋಕನಾಥನ್ (1ನಿ.06.36ಸೆ–3.

ಮೆಸ್ಸಿ ಕೇರಳ ಭೇಟಿ ರದ್ದು: ಸಚಿವ

ತಿರುವನಂತಪುರ (ಪಿಟಿಐ): ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ಫುಟ್‌ಬಾಲ್ ತಂಡವು ವೇಳಾಪಟ್ಟಿ ಗೊಂದಲದಿಂದಾಗಿ ಕೇರಳ ಪ್ರವಾಸವನ್ನು ರದ್ದುಗೊಳಿಸಿದೆ. ಈ ವಿಚಾರವನ್ನು ಕೇರಳದ ಕ್ರೀಡಾ ಸಚಿವ ವಿ.ಅಬ್ದುರಹಿಮಾನ್ ಸುದ್ದಿಗೋಷ್ಠಿಯಲ್ಲಿ ಸೋಮವಾರ ತಿಳಿಸಿದ್ದಾರೆ.

'ಅಕ್ಟೋಬರ್ ತಿಂಗಳಿನಲ್ಲಿ ಕೇರಳಕ್ಕೆ ಭೇಟಿ ನೀಡಲು ಸಾಧ್ಯವಾಗುವುದಿಲ್ಲ ಎಂದು ಅರ್ಜೆಂಟೀನಾ ತಂಡ ತಿಳಿಸಿದೆ. ಆದರೆ, ಅಕ್ಟೋಬರ್‌ನಲ್ಲಿ ಮಾತ್ರ ಈ ಪಂದ್ಯ ನಡೆಯಬೇಕೆಂದು ಆಯೋಜಕರು ಪಟ್ಟುಹಿಡಿದಿದ್ದಾರೆ. ಹೀಗಾಗಿ, ವೇಳಾಪಟ್ಟಿಯ ಗೊಂದಲದಿಂದ ಮೆಸ್ಸಿ ನೇತೃತ್ವದ ತಂಡ ರಾಜ್ಯ ಪ್ರವಾಸವನ್ನು ಕೈಬಿಟ್ಟಿದೆ' ಎಂದು ಹೇಳಿದ್ದಾರೆ.

ಮಹಾರಾಜ ಟ್ರೋಫಿ: ಇನ್ನೂ ಸಿಗದ ಅನುಮತಿ?

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮಹಾರಾಜ ಟ್ರೋಫಿ ಕ್ರಿಕೆಟ್ ಟಿ20 ಟೂರ್ನಿ ಆರಂಭವಾಗಲು ಇನ್ನು ಆರು ದಿನಗಳು ಮಾತ್ರ ಬಾಕಿಯಿವೆ. ಆದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಇನ್ನೂ ಪೊಲೀಸ್ ಇಲಾಖೆಯಿಂದ ಅನುಮತಿ ಸಿಕ್ಕಿಲ್ಲ.

ಇದೇ 11ರಂದು ಟೂರ್ನಿ ಆರಂಭವಾಗಬೇಕು. ಫ್ರ್ಯಾಂಚೈಸಿಗಳು ಈಗಾಗಲೇ ತಂಡಗಳ ಅಭ್ಯಾಸ, ಪ್ರಚಾರ ಇತ್ಯಾದಿ ಚಟುವಟಿಕೆಗಳನ್ನು ಆರಂಭಿಸಿವೆ. ಬೆಂಗಳೂರಿನಲ್ಲಿ ಅನುಮತಿ ಸಿಗದಿದ್ದರೆ ಮೈಸೂರಿಗೆ ಸ್ಥಳಾಂತರ ಮಾಡುವ ಕುರಿತು ಕೂಡ ಕೆಎಸ್‌ಸಿಎಯಲ್ಲಿ ಚಿಂತನೆ ನಡೆದಿತ್ತು ಎನ್ನಲಾಗಿದೆ. ಆದರೆ ಈ ಬಗ್ಗೆಯೂ ಖಚಿತ ನಿರ್ಧಾರ ಕೈಗೊಂಡಿಲ್ಲವೆಂದು ಮೂಲಗಳು ತಿಳಿಸಿವೆ.

'ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯಗಳಿಗೆ ಜನರ ಪ್ರವೇಶವನ್ನು ನಿರ್ಬಂಧಿಸುವ ನಿರ್ಧಾರವನ್ನು ಈಗಾಗಲೇ ಪ್ರಕಟಿಸಲಾಗಿದೆ. ಆದ್ದರಿಂದ ಟೂರ್ನಿ ಆಯೋಜನೆಗೆ ಅವಕಾಶ ಮತ್ತು ಅನುಮತಿ ಸಿಗುವ ನಿರೀಕ್ಷೆ ಇದೆ' ಎಂದು ಕೆಎಸ್‌ಸಿಎ ಉನ್ನತ ಮೂಲಗಳು ಹೇಳಿವೆ.

ಆದರೆ ಜೂನ್ ತಿಂಗಳಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಜನರು ಸಾವಿಗೀಡಾಗಿದ್ದರು. ಈ ಘಟನೆ ಬಳಿಕ ಬೆಂಗಳೂರಿನಲ್ಲಿ ಕ್ರಿಕೆಟ್ ಆಯೋಜನೆ, ದೊಡ್ಡ ಸಮಾರಂಭಗಳು, ರ‍್ಯಾಲಿಗಳಿಗೆ ಅನುಮತಿ ನೀಡಲು ನಗರ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕ್ರಮ ತೆಗೆದುಕೊಂಡಿದ್ದಾರೆ. ಇದೇ ತಿಂಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಸಲು ಉದ್ದೇಶಿಸಿರುವ ಮಹಾರಾಜ ಟ್ರೋಫಿ ಕ್ರಿಕೆಟ್ ಅನುಮತಿ ನೀಡುವಂತೆ ಆಯೋಜಕರು ನಗರ ಪೊಲೀಸ್ ಕಮಿಷನರ್ ಹಾಗೂ ಕೇಂದ್ರ ವಲಯದ ಡಿಸಿಪಿ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದಾರೆ. ಪೊಲೀಸರು ಇನ್ನೂ ಅನುಮತಿ ನೀಡಿಲ್ಲ.

'ಆಯೋಜಕರಿಂದ ಮನವಿ ಬಂದಿದೆ. ಅದು ಇನ್ನೂ ಪರಿಶೀಲನಾ ಹಂತದಲ್ಲಿ ಇದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್: ಮೊದಲ ದಿನ ಮಣಿಪುರ ಪಾರಮ್ಯ

ಕರ್ನಾಟಕದ ಶ್ವಿತಿ ದಿವಾಕರ್‌ಗೆ ಡಬಲ್ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪುರದ ಈಜುಪಟುಗಳು ಇಲ್ಲಿ ಸೋಮವಾರ ಆರಂಭಗೊಂಡ 41ನೇ ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ಮತ್ತು 51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ (ವಾಟರ್ ಪೋಲೊ ಮತ್ತು ಡೈವಿಂಗ್)ನಲ್ಲಿ ಮೊದಲ ದಿನ ನಾಲ್ಕು ಚಿನ್ನ ಗೆಲ್ಲುವ ಮೂಲಕ ಪಾರಮ್ಯ ಮೆರೆದರು. ಕರ್ನಾಟಕದ ಸ್ಪರ್ಧಿಗಳು ಎರಡು ಚಿನ್ನದ ಪದಕ ಗೆದ್ದುಕೊಂಡರು.

ಬಸವನಗುಡಿ ಈಜು ಕೇಂದ್ರದಲ್ಲಿ ನಡೆದ ಬಾಲಕರ ಗುಂಪು 3 ವಿಭಾಗದಲ್ಲಿ ಮಣಿಪುರದ ಕೊಯಿಜಮ್ ಅಥೋಯಿಬಾ ಸಿಂಗ್ (200 ಮೀ. ಫ್ರೀಸ್ಟೈಲ್, 100 ಮೀ. ಬಟರ್‌ಫ್ಲೈ), ಹಿಮಾನ್ಶು ಎನ್. (200 ಮೀ. ಮೆಡ್ಲೆ) ಮತ್ತು ಮೈಸ್ನಮ್ ಅರಿಂಧಮ್ ಸಿಂಗ್ (100 ಮೀ. ಬ್ರೆಸ್ಟ್‌ಸ್ಟ್ರೋಕ್) ಚಿನ್ನದ ಸಾಧನೆ ಮೆರೆದರು.

ಕರ್ನಾಟಕದ ಶ್ವಿತಿ ದಿವಾಕರ್ ಸುವರ್ಣ ಅವರು ಬಾಲಕಿಯರ ಗುಂಪು 3 ವಿಭಾಗದ 100 ಮೀ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು. ಅವರು 1 ನಿಮಿಷ 10.19 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಕರ್ನಾಟಕದ ಮತ್ತೊಬ್ಬ ಸ್ಪರ್ಧಿ ಆರೋಹಿ ಚಿತ್ರಗಾರ್ (1:11.95) ಮತ್ತು ಗುಜರಾತ್‌ನ ಹಿರಣಶಿ ವಿಕ್ರಮ್‌ಸಿಂಗ್ (1:13.43) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಗ್ರೂಪ್ 3 ವಿಭಾಗದ 200 ಮೀಟರ್ ಫ್ರೀಸ್ಟೈಲ್ ರಿಲೆಯಲ್ಲಿ ಶ್ವಿತಿ ಅವರು ನೈರಾ ಬೋಪಣ್ಣ, ಪ್ರಾಪ್ತಿ ಜೆ.ಪಿ. ಮತ್ತು ಸ್ತುತಿ ಸಿಂಗ್ ಅವರೊಂದಿಗೆ ಸೇರಿ ಕರ್ನಾಟಕಕ್ಕೆ ಎರಡನೇ ಚಿನ್ನ ಗೆದ್ದುಕೊಟ್ಟರು.

ಕರ್ನಾಟಕ ಶುಭಾರಂಭ: ಕೆನ್ಸಿಂಗ್ಟನ್ ಈಜುಕೊಳದಲ್ಲಿ ನಡೆದ ವಾಟರ್‌ಪೋಲೊ ಸ್ಪರ್ಧೆಯಲ್ಲಿ ಕರ್ನಾಟಕದ ಪುರುಷರ ತಂಡ 11-3 ಅಂತರದಿಂದ ಮಣಿಪುರವನ್ನು ಸೋಲಿಸಿದರೆ, ಮಹಿಳಾ ತಂಡವು 8-1 ಅಂತರದಿಂದ ತಮಿಳುನಾಡನ್ನು ಮಣಿಸಿತು.

ಫಲಿತಾಂಶ: ಗುಂಪು 3: ಬಾಲಕರು: 200 ಮೀ. ಫ್ರೀಸ್ಟೈಲ್: ಕೊಯಿಜಮ್ ಅಥೋಯಿಬಾ ಸಿಂಗ್ (ಮಣಿಪುರ, ಕಾಲ 2ನಿ.09.63ಸೆ)–1, ಅಮಿತ್ ಎಚ್. ಪವನ್ (ಕರ್ನಾಟಕ)–2; ಕೃಷಿವ್ ದೋಷಿ (ಮಧ್ಯಪ್ರದೇಶ)–3.
200 ಮೀ. ಮೆಡ್ಲೆ: ಹಿಮಾನ್ಶು ಎನ್ (ಮಣಿಪುರ, ಕಾಲ: 2 ನಿ.23.80ಸೆ– 1; ಕೊಯಿಜಮ್ ಅಥೋಯಿಬಾ ಸಿಂಗ್ (ಮಣಿಪುರ)–2; ಎ.ಪಿ. ಆರ್ಯ ಸತಾರ್ (ತಮಿಳುನಾಡು)–3.
100 ಮೀ. ಬ್ರೆಸ್ಟ್‌ಸ್ಟ್ರೋಕ್: ಮೈಸ್ನಮ್ ಅರಿಂದಮ್ ಸಿಂಗ್ (ಮಣಿಪುರ, ಕಾಲ: 1 ನಿ.15.08ಸೆ)–1, ಸೊರಮ್ ಪೀಟರ್ಸನ್ (ಮಣಿಪುರ)– 2, ಕಬೀರ್ ನೀಲೇಶ್ ಸೋನೋಲೆ (ಮಹಾರಾಷ್ಟ್ರ)–3.
100 ಮೀ.ಬಟರ್‌ಫ್ಲೈ: ಕೊಯಿಜಮ್ ಅಥೋಯಿಬಾ ಸಿಂಗ್ (ಮಣಿಪುರ, ಕಾಲ: 1ನಿ.01.58ಸೆ)–1; ಲೈಟೊಂಜಮ್ ಪುಂಗೆನ್ (ಮಣಿಪುರ)–2; ಅಮಿತ್ ಎಚ್. ಪವನ್ (ಕರ್ನಾಟಕ)–3.
200 ಮೀ. ಫ್ರೀಸ್ಟೈಲ್ ರಿಲೆ: ತಮಿಳುನಾಡು (1ನಿ.57.07ಸೆ)–1, ಮಣಿಪುರ–2, ಅಸ್ಸಾಂ–3.
ಬಾಲಕಿಯರು: 200 ಮೀ. ಫ್ರೀಸ್ಟೈಲ್: ಪೂರ್ವಿ ರಿತೇಶ್ ನಾಯ್ಕ್ (ಗೋವಾ, ಕಾಲ: 2ನಿ.18.35ಸೆ)–1; ಸ್ತುತಿ ಸಿಂಗ್ (ಕರ್ನಾಟಕ)–2, ನೈರಾ ಬೋಪಣ್ಣ ಕೆ. (ಕರ್ನಾಟಕ)–3.
200 ಮೀ. ಮೆಡ್ಲೆ: ಹೀವಾ ಭಾವೇಶ್ ಪಟೇಲ್ (ಮಹಾರಾಷ್ಟ್ರ, ಕಾಲ: 2ನಿ.40.81ಸೆ)–1; ಅನ್ನಿಕಾ ಗೋಪ್ಲಾನಿ (ಮಹಾರಾಷ್ಟ್ರ)– 2; ಸೆರೆನಾ ಸರೋಹಾ (ಹರಿಯಾಣ)–3.
100 ಮೀ. ಬ್ರೆಸ್ಟ್‌ಸ್ಟ್ರೋಕ್: ಕಸ್ತೂರಿ ಗೊಗೊಯ್ (ಅಸ್ಸಾಂ, ಕಾಲ: 1ನಿ.20.42ಸೆ)–1; ಸಹಿತಾ ಗೋಷ್ (ಒಡಿಶಾ)–2; ನಿಧಿ ತುಷಾರ್ ಸಮಂತ್ (ಮಹಾರಾಷ್ಟ್ರ)–3.
100 ಮೀ. ಬಟರ್‌ಫ್ಲೈ: ಶ್ವಿತಿ ದಿವಾಕರ್ ಸುವರ್ಣ (ಕರ್ನಾಟಕ, ಕಾಲ: 1ನಿ.10.19ಸೆ)–1; ಆರೋಹಿ ಚಿತ್ರಗಾರ್ (ಕರ್ನಾಟಕ)–2; ಹಿರಾನ್ಶಿ ವಿಕ್ರಮಸಿಂಗ್ (ಗುಜರಾತ್)–3.
200 ಮೀ. ಬಟರ್‌ಫ್ಲೈ ರಿಲೆ: ಕರ್ನಾಟಕ (ಕಾಲ: 2ನಿ.01.26ಸೆ), ಮಹಾರಾಷ್ಟ್ರ–2, ಆರ್.ಆರ್. ಪೋಷಿಕಾ–3
ಡೈವಿಂಗ್: ಬಾಲಕರು: ಗುಂಪು I: ಪ್ಲಾಟ್‌ಫಾರಂ: ಸುಪ್ರದೀಪ್ ಸಹಾ (ಎಸ್‌ಎಸ್‌ಸಿಬಿ, 398.45 ಅಂಕ)–1; ರಿಸಾವ್ ದಾಸ್ (ಎಸ್‌ಎಸ್‌ಸಿಬಿ)–2; ಸ್ವರಾಜ್ ರಾಜೇಂದ್ರ ಲಾಡ್ (ಮಹಾರಾಷ್ಟ್ರ)–3
ಗುಂಪು 2: 1ಎಂಟಿ ಎಸ್‌ಬಿ: ಶ್ರೇಯಶ್ ಸಕ್ಪಾಲ್ (ಮಹಾರಾಷ್ಟ್ರ, 227.50 ಅಂಕ)– 1; ರಣವೀರ್ ರಾಜೇಂದ್ರ ಖಾಡೆ (ಮಹಾರಾಷ್ಟ್ರ)–2, ಅರುಶ್ ರಘುವಂಶಿ (ಮಧ್ಯಪ್ರದೇಶ)–3
ಬಾಲಕಿಯರು: ಗುಂಪು 2: ಪ್ಲಾಟ್‌ಫಾರಂ: ವಂಶಿಕಾ ಶಿಲಿಸಿದ್ಧ (ಮಹಾರಾಷ್ಟ್ರ, 181.15 ಅಂಕ)–1; ಅನನ್ಯ ಯಾದವ್ (ಮಧ್ಯಪ್ರದೇಶ)–2; ಇಶಾ ಸರ್ಕಾರ್ (ಪಶ್ಚಿಮ ಬಂಗಾಳ)–3
ಗುಂಪು 3: 2 ಎಂಟಿ ಎಸ್‌ಬಿ: ಮನಸ್ವಿ ರಾಜಶೇಖರ್ ಮಾನೆ (ಮಹಾರಾಷ್ಟ್ರ, 193.40 ಅಂಕ)–1; ನಿಶಿತಾ ರಾಜ್ ಠಾಕೂರ್ (ಮಹಾರಾಷ್ಟ್ರ)– 2; ಉರ್ಜಿತಾ ದಾಸ್ (ಪಶ್ಚಿಮ ಬಂಗಾಳ)–3.



ಬಾಲಕಿಯರ 200 ಮೀ ಫ್ರೀಸ್ಟೈಲ್ ರಿಲೆ ಚಿನ್ನ ಗೆದ್ದ ಕರ್ನಾಟಕ ತಂಡದ ಶ್ವಿತಿ ದಿವಾಕರ್ ಸುವರ್ಣ, ಸ್ತುತಿ ಸಿಂಗ್, ಪ್ರಾಪ್ತಿ ಜೆ.ಪಿ. ಮತ್ತು ನೈರಾ ಬೋಪಣ್ಣ ಚಿತ್ರ: ಪ್ರಶಾಂತ್ ಎಚ್.ಜಿ.